ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 25 ಭಾನುವಾರ 2022

₹4

ಸಂಪುಟ: 43 | ಸಂಚಿಕೆ: 160 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಪ್ರಧಾನಿ ಮೋದಿ ಸರ್ಕಾರದಿಂದ ದಲಿತರ ಸಬಲೀಕರಣ ಸಾಧ್ಯ

ಕೇಂದ್ರ ಸಚಿವ ರಾಮದಾಸ್ ಅಠಾವಳೆ ವಿಶ್ವಾಸ

ಮೈಸೂರು, ಸೆ.24(ಎಂಕೆ)–ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದು, ದಲಿತರ ಸಬಲೀಕರಣವಾಗುತ್ತಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಖಾತೆ ರಾಜ್ಯ ಸಚಿವ ರಾಮದಾಸ್ ಅಠಾವಳೆ ಹೇಳಿದರು.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೇಂದ್ರ ಸರ್ಕಾರದ ಹಲವು ಯೋಜನೆಗಳನ್ನು ತಿಳಿಸಿದರಲ್ಲದೆ ಮುಂದಿನ ಲೋಕಸಭಾ ಚುನಾವಣೆಯಲ್ಲಿಯೂ ಬಿಜೆಪಿ ಬಹುಮತ ಗಳಿಸಲಿದೆ. ಪ್ರಧಾನಿ ನರೇಂದ್ರ ಮೋದಿಯವರನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ. ರಾಹುಲ್‌ಗಾಂಧಿಯವರ ಭಾರತ್ ಜೋಡೋ ಯಾತ್ರೆ ಒಂದು ವ್ಯರ್ಥ ಪ್ರಯತ್ನ ಎಂದರು.

ಆರ್ಥಿಕವಾಗಿ ಸಬಲರಾಗಿರುವ ದಲಿತರ ಮೀಸಲಾತಿಯನ್ನು ತೆಗೆದುಹಾಕಬೇಕು ಎಂಬ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರ ಹೇಳಿಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವರು, ತಳ ಸಮುದಾಯಕ್ಕೆ ಮೀಸಲಾತಿಯ ಅನುಕೂಲ ಸರಿಯಾಗಿ ದೊರೆಯುತ್ತಿಲ್ಲ ಎನ್ನುವುದು ನಿಜ. ಅದಕ್ಕಾಗಿ ಆರ್ಥಿಕವಾಗಿ ಸಬಲರಾಗಿರುವ ದಲಿತರ ಮೀಸಲಾತಿ ತೆಗೆಯಬೇಕು ಎನ್ನುವುದು ಸರಿಯಲ್ಲ. ಈ ಹೇಳಿಕೆ ಈಶ್ವರಪ್ಪ ಅವರ ವೈಯಕ್ತಿಕ ಹೇಳಿಕೆ ಎಂದರು.

ಕೋಲಾರದ ಮಾಲೂರು ತಾಲೂಕಿನ ಉಳ್ಳೇರಹಳ್ಳಿ ಗ್ರಾಮದಲ್ಲಿ ದೇವರ ಕೋಲು ಮುಟ್ಟಿನೆಂದು ದಲಿತ ಬಾಲಕನ ಕುಟುಂಬಕ್ಕೆ 60 ಸಾವಿರಕ್ಕೆ ಬೇಡಿಕೆ ಸಲ್ಲಿಸಿ, ತಪ್ಪಿದರೆ ಬಹಿಷ್ಕಾರ ಹಾಕುವುದಾಗಿ ಬೆದರಿಕೆ ಹಾಕಿರುವುದು ಹಾಗೂ ಉತ್ತರ ಪ್ರದೇಶದಲ್ಲಿ ದಲಿತ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಪ್ರಕರಣಗಳ ಕುರಿತು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಸ್ಪೃಶ್ಯತೆ ಆಚರಣೆ ವಿರುದ್ಧ ನಮ್ಮ ದೇಶದ ಕಾನೂನು ಕಠಿಣ ಕ್ರಮ ಕೈಗೊಳ್ಳುತ್ತದೆ. ದೊಡ್ಡ ದೊಡ್ಡ ದೇವಸ್ಥಾನಗಳಲ್ಲಿ ಈ ಸಮಸ್ಯೆ ಇರುವುದಿಲ್ಲ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಅಸ್ಪೃಶ್ಯತೆ ಆಚರಣೆ ಇನ್ನೂ ಜೀವಂತವಾಗಿದೆ. ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ವಿದ್ಯಾರ್ಥಿವೇತನಕ್ಕೆ ಕ್ರಮ: ವಿದ್ಯಾರ್ಥಿವೇತನದಲ್ಲಿ ರಾಜ್ಯದ ಪಾಲು ಶೇ.60 ಮತ್ತು ಕೇಂದ್ರ ಶೇ.40 ನೀಡುತ್ತದೆ. ಕೇಂದ್ರ ಸರ್ಕಾರದಿಂದ ನೀಡಬೇಕಾಗಿರುವ ವಿದ್ಯಾರ್ಥಿ ವೇತನದ ಅನುದಾನವನ್ನು ಸಕಾಲದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದಿಂದ ವಿಳಂಬವಾಗುತ್ತಿದೆ ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ ಎಂದರು.

ಕಾರ್ಮಿಕರಿಗೆ ಕನಿಷ್ಠ 26 ಸಾವಿರ ವೇತನವೂ ಸೇರಿ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಪ್ರತಿಭಟನೆ

ಮೈಸೂರು,ಸೆ.24(ಪಿಎಂ)–ಕಾರ್ಮಿಕರಿಗೆ ಕನಿಷ್ಠ 26 ಸಾವಿರ ರೂ. ವೇತನ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಸಿಪಿಐ (ಎಂ) ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಗಾಂಧಿಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಸುಳ್ಳು ಆಶ್ವಾಸನೆಗಳನ್ನು ನೀಡಿ ಅಧಿಕಾರ ಹಿಡಿದ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಹಾಗೂ ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ರಾಜ್ಯ ಬಿಜೆಪಿ ಸರ್ಕಾರ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಕೀಂ ನೌಕರರು ಹಾಗೂ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು. ರಾಜ್ಯದ ರೈತರು, ಕೂಲಿಕಾರರು ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿನ ಮಹಿಳೆಯರ ಸಾಲ ಮನ್ನಾ ಮಾಡಬೇಕು. ರೈತರ ಬೆಳೆಗೆ ಬೆಂಬಲ ಬೆಲೆ ಖಾತರಿಗೆ ಕಾಯ್ದೆ ರೂಪಿಸಿ, ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ನಿವೇಶನ ಹಾಗೂ ಮನೆರಹಿತ ಬಡವರಿಗೆ ಸೂರು ಕಲ್ಪಿಸಬೇಕು. ದಲಿತರು ಹಾಗೂ ಉಳುವವರಿಗೆ ಭೂಮಿ ನೀಡುವ ರೀತಿಯಲ್ಲಿ ಭೂ ಸುಧಾರಣಾ ಕಾಯ್ದೆ ಜಾರಿಗೊಳಿಸಬೇಕು. ಬಗರ್‌ಹುಕುಂ ಹಾಗೂ ಅರಣ್ಯ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ತಲಾ 200 ದಿನಗಳಿಗೆ ವಿಸ್ತರಿಸಿ, ನಗರ ಪ್ರದೇಶಕ್ಕೂ ಅನ್ವಯವಾಗುವಂತೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಸಿಪಿಐ (ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಜಿಲ್ಲಾ ಸಮಿತಿ ಸದಸ್ಯರಾದ ಕೆ.ಬಸವರಾಜ್, ಎನ್.ವಿಜಯ್ ಕುಮಾರ್, ಜಿ.ಜಯರಾಂ, ಸ್ಥಳೀಯ ಸಮಿತಿ ಕಾರ್ಯದರ್ಶಿ ಜಿ.ರಾಜೇಂದ್ರ, ಸದಸ್ಯರಾದ ಅಣ್ಣಪ್ಪ, ಸುಬ್ರಹ್ಮಣ್ಯ, ಬಸವಯ್ಯ, ಕೃಷ್ಣಮೂರ್ತಿ, ಬಲರಾಂ, ವಿದ್ಯಾರ್ಥಿ ಮುಖಂಡರಾದ ವಿಜಯ್, ಕವಿತಾ, ಶಿವು, ಯತೀಶ್, ದರ್ಶನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರಿನ ವಾರ್ಡ್ ನಂ.6ರ ಗೋಕುಲಂ ಹಾಗೂ ಬೃಂದಾವನ ಬಡಾವಣೆಯಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಸಿಹಿ ವಿತರಿಸಿ ಶುಭ ಕೋರಿದರು. ಈ ವೇಳೆ ಮೇಸ್ತ್ರಿಗಳಾದ ಕೃಷ್ಣಬಾಬು, ಕಮಲ್, ಪೌರಕಾರ್ಮಿಕರಾದ ಗೌರಮ್ಮ, ಮಂಜುಳಾ, ಗೌರಿ, ಕುಮಾರ್, ವಿಜಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ವಾರ್ಡ್ ನಂ.35ರ ವಿದ್ಯಾಶಂಕರ್ ಲೇಔಟ್‌ನ ರಸ್ತೆ ಕಾಮಗಾರಿಗೆ ಕಾರ್ಪೊರೇಟರ್ ಸಾತ್ವಿಕ್ ಸಂದೇಶ್‌ಸ್ವಾಮಿ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಮುಖಂಡರಾದ ಶ್ರೀಕಂಠಮೂರ್ತಿ, ಮಂಜು ಸಿ.ಗೌಡ, ರೇಣುಕಾರಾಜು, ಸತೀಶ್, ಶಿವು, ಧನರಾಜ್, ನಾಗರಾಜು, ಜಯಣ್ಣ, ನಾರಾಯಣ್ ಇನ್ನಿತರರಿದ್ದರು.



ಶುಕ್ರವಾರ ಹುಟ್ಟುಹಬ್ಬ ಆಚರಿಸಿಕೊಂಡ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಅವರನ್ನು ಮೈಸೂರಿನ ಕುಂಬಾರಕೊಪ್ಪಲು ಕಿಡಗಣ್ಣಮ್ಮನ ಬಡಾವಣೆ ವಿಘ್ನೇಶ್ವರ ಯುವಕರ ಬಳಗದಿಂದ ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭ ಕೋರಲಾಯಿತು.



ಬಿಳಿಕೆರೆ ಸಮೀಪದ ಅಂಕನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿಂದ ಹುಲ್ಲೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮುಖ್ಯ ಶಿಕ್ಷಕಿಯಾಗಿ ಬಡ್ತಿ ಪಡೆದು, ವರ್ಗಾವಣೆಗೊಂಡ ಜಿ.ಎನ್.ಜ್ಯೋತಿ ಅವರನ್ನು ಗ್ರಾಪಂ ಸದಸ್ಯರಾದ ಬಸವಣ್ಣ, ಮಹದೇವಸ್ವಾಮಿ, ಶೈಲಜಾ, ಉಪಾಧ್ಯಕ್ಷೆ ಶಾಂತ, ಎಸ್‌ಡಿಎಂಸಿ ಅಧ್ಯಕ್ಷೆ ಶ್ರೀಮತಿ ಶೃತಿ, ಶಾಲೆ ಮುಖ್ಯ ಶಿಕ್ಷಕಿ ಶಾರದಮ್ಮ, ಮೈದನಹಳ್ಳಿ ಶಾಲೆ ಮುಖ್ಯ ಶಿಕ್ಷಕಿ ವೀಣಾ, ಅಡುಗೆ ಸಹಾಯಕಿ ರೂಪ ಹಾಗೂ ಶಾಲಾ ಮಕ್ಕಳು ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಟ್ಟರು.

ಪೂನಾ ಒಪ್ಪಂದದಿಂದ ದಲಿತ ಸಮುದಾಯಕ್ಕೆ ಅನ್ಯಾಯವಾಯ್ತು...

● ರಾಜಕೀಯ ಮೀಸಲಾತಿ ಕುರಿತು ವಿಚಾರಗೋಷ್ಠಿ ಉದ್ಘಾಟಿಸಿ ಕೇಂದ್ರ ಸಚಿವ ರಾಮದಾಸ್ ಅಠಾವಳೆ ಬೇಸರ ● ಡಾ.ಅಂಬೇಡ್ಕರ್ ಪ್ರತಿಪಾದಿಸಿದಂತೆ ಪ್ರತ್ಯೇಕ ಮತದಾನದ ಹಕ್ಕು ಸಿಕ್ಕಿದ್ದರೆ ಅನುಕೂಲವಾಗುತ್ತಿತ್ತು

ಮೈಸೂರು,ಸೆ.24(ಪಿಎಂ)–ಪೂನಾ ಒಪ್ಪಂದ ಆಗದಿದ್ದಲ್ಲಿ ದಲಿತ ಸಮುದಾಯಕ್ಕೆ ಪ್ರತ್ಯೇಕ ಮತದಾನದ ಹಕ್ಕು ದೊರೆಯುತ್ತಿತ್ತು. ಆ ಮೂಲಕ ಇನ್ನಷ್ಟು ಉತ್ತಮ ಅವಕಾಶಗಳು ಹಾಗೂ ಪ್ರಾತಿನಿಧ್ಯ ಲಭಿಸುತ್ತಿತ್ತು ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ರಾಮದಾಸ್ ಅಠಾವಳೆ ಹೇಳಿದರು.

ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ವತಿಯಿಂದ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ 'ಪೂನಾ ಒಪ್ಪಂದ ದಿನ'ದ ಅಂಗವಾಗಿ '9 ದಶಕಗಳ ರಾಜಕೀಯ ಮೀಸಲಾತಿ; ವಿದ್ಯಮಾನ, ಪರಿಣಾಮ ಮತ್ತು ಬದಲಾವಣೆಗಳು' ಕುರಿತು ಹಮ್ಮಿಕೊಂಡಿದ್ದ ವಿಚಾರಗೋಷ್ಠಿಯನ್ನು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಮೊದಲನೇ ದುಂಡು ಮೇಜಿನ ಸಭೆಯಲ್ಲಿ ದಲಿತ ಮತ್ತು ಬುಡಕಟ್ಟು ಸಮುದಾಯಗಳಿಗೆ ಪ್ರತ್ಯೇಕ ಮತದಾನದ ಹಕ್ಕು ಬೇಕೆಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ಇದಕ್ಕೆ ಬ್ರಿಟಿಷರೂ ಸಮ್ಮತಿಸಿದರು. ನಾವು ಹಿಂದೂಗಳಾಗಿದ್ದರೂ ದೇವಾಲಯಕ್ಕೆ ಪ್ರವೇಶವಿಲ್ಲ. ಕೆರೆ ಕಟ್ಟೆ ನೀರು ಮುಟ್ಟುವಂತಿಲ್ಲ. ಅಸ್ಪೃಶ್ಯತಾ ಆಚರಣೆಯಂತಹ ದೊಡ್ಡ ಸಮಸ್ಯೆ ಇದೆ. ಹಾಗಾಗಿ ಈ ಪ್ರತ್ಯೇಕ ಮತದಾನದ ಹಕ್ಕು ಅಗತ್ಯವೆಂದು ಅಂಬೇಡ್ಕರ್ ಪ್ರತಿಪಾದಿಸಿ ಯಶಸ್ವಿಯಾಗಿದ್ದರು. ಆದರೆ ಗಾಂಧಿಯವರು ಇದರಿಂದ ಹಿಂದೂ ಧರ್ಮ ಒಡೆದಂತಾಗುತ್ತದೆ ಎಂಬ ಆತಂಕದಲ್ಲಿ ಪುಣೆಯ ಯರವಾಡ ಜೈಲಿನಲ್ಲಿ ಉಪವಾಸ ಆರಂಭಿಸಿದರು ಎಂದರು.

ಡಾ.ಅಂಬೇಡ್ಕರ್ ಅವರಿಗೆ ಪೂನಾ ಒಪ್ಪಂದಕ್ಕೆ ಮನಸ್ಸಿರಲಿಲ್ಲ. ಗಾಂಧಿ ಪ್ರತ್ಯೇಕ ಮತದಾನ ವ್ಯವಸ್ಥೆಗೆ ಒಪ್ಪದಿದ್ದಾಗ ಮೀಸಲಾತಿ ವ್ಯವಸ್ಥೆಯ ಪ್ರಸ್ತಾವನೆಯನ್ನು ಅಂಬೇಡ್ಕರ್ ಮುಂದಿಟ್ಟರು. ಗಾಂಧಿಯವರ ಪ್ರಾಣಕ್ಕೆ ಏನಾದರೂ ತೊಂದರೆ ಆದಲ್ಲಿ ನಮ್ಮ ಸಮುದಾಯಕ್ಕೆ ಅಪಾಯ ಎದುರಾಗುವ ಸನ್ನಿವೇಶ ಅರಿತು ಅಂಬೇಡ್ಕರ್ ಪೂನಾ ಒಪ್ಪಂದಕ್ಕೆ ಒಲ್ಲದ ಮನಸ್ಸಿನಲ್ಲೇ ಸಮ್ಮತಿಸಬೇಕಾಯಿತು ಎಂದು ತಿಳಿಸಿದರು.

ಯಾವ ಕ್ಷೇತ್ರಗಳಲ್ಲೂ ಶೇ.22ಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ದಲಿತ ಸಮುದಾಯ ಹೊಂದಿಲ್ಲ. ಹಾಗಾಗಿ ಚುನಾವಣೆಯಲ್ಲಿ ಸ್ಪರ್ಧಿಸುವ ದಲಿತ ಅಭ್ಯರ್ಥಿ ಮೇಲ್ಜಾತಿಯವರನ್ನೇ ಓಲೈಸಬೇಕಾಗಿದೆ. ನಮಗೆ ನಿಜವಾಗಲೂ ಬೇಕಿದ್ದು ಪ್ರತ್ಯೇಕ ಮತದಾನದ ಹಕ್ಕು. ಅಂಬೇಡ್ಕರ್ ಅವರ ಕನಸು ನನಸಾಗಲಿಲ್ಲ. ಆಗಿದ್ದರೆ ಅವರು ದೇಶದ ಪ್ರಧಾನಿಯಾಗುತ್ತಿದ್ದರು. ಸ್ವಾತಂತ್ರ್ಯ ಬಂದ ಕೆಲವೇ ವರ್ಷಗಳಲ್ಲಿ ಅವರ ಮರಣ ನಮ್ಮ ಸಮುದಾಯಕ್ಕೆ ತುಂಬಲಾರದ ನಷ್ಟ ಉಂಟು ಮಾಡಿತು. ಅಂಬೇಡ್ಕರ್ ಅವರ ಪರಿಶ್ರಮದಿಂದ ನಾವು ಇಂದು ಸಾಕಷ್ಟು ಸೌಲಭ್ಯ-ಹಕ್ಕುಗಳನ್ನು ಪಡೆದಿದ್ದೇವೆ ಎಂದರು.



ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ವಿಶ್ವಜ್ಞಾನಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ರಾಜಕೀಯ ಮೀಸಲಾತಿ ಕುರಿತ ವಿಚಾರಗೋಷ್ಠಿಯನ್ನು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕೇಂದ್ರ ಸಚಿವ ರಾಮದಾಸ್ ಅಠಾವಳೆ ಉದ್ಘಾಟಿಸಿದರು.

ಮೀಸಲಾತಿ ದೊರೆಯುವಂತೆ ಅಂಬೇಡ್ಕರ್ ಮಾಡಿದ್ದರಿಂದ ದಲಿತರಿಗೆ ಅನುಕೂಲವಾಗಿದೆ. ಅಂಬೇಡ್ಕರ್ ರೂಪಿಸಿದ್ದ ಮೀಸಲಾತಿ ನೀತಿಗೆ ವಿರೋಧ ವ್ಯಕ್ತವಾಗಿತ್ತು. ಇದೀಗ ಮೀಸಲಾತಿ ಬಲದಿಂದ ಬಹಳ ಮಂದಿ ದಲಿತರು ಸಂಸದರಾಗುತ್ತಿದ್ದಾರೆ. ಆದರೆ ಎಲ್ಲರೂ ಸಮಾಜದ ಪರವಾಗಿ ಹೋರಾಡುತ್ತಿಲ್ಲ, ಕೆಲವರಷ್ಟೇ ಹೋರಾಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಉನ್ನತ ಶಿಕ್ಷಣಕ್ಕೆ ಉತ್ತೇಜನ: ವಿದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಲಿಚ್ಛಿಸುವ ದಲಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಕಳೆದ ವರ್ಷ 120 ದಲಿತ ವಿದ್ಯಾರ್ಥಿಗಳು ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ನೆರವು ನೀಡಿದೆ. 30 ಲಕ್ಷ ರೂ.ನಿಂದ 90 ಲಕ್ಷ ರೂ.ವರೆಗೆ ಈ ನೆರವು ದೊರೆಯಲಿದ್ದು, ಈ ರೀತಿ ಅವಕಾಶಗಳನ್ನು ದಲಿತ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ರಾಮದಾಸ್ ಅಠಾವಳೆ ಸಲಹೆ ನೀಡಿದರು.

ಕೇಂದ್ರ ಸರ್ಕಾರ ಇಲ್ಲವೇ ಯುಜಿಸಿಗೆ ಮೈಸೂರು ವಿವಿಯಿಂದ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾದರೂ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಾನು ಸಚಿವ ಎನ್ನುವುದಕ್ಕಿಂತ ಮುಖ್ಯವಾಗಿ ಅಂಬೇಡ್ಕರ್‌ವಾದಿ ಹಾಗೂ ಸಮಾಜ ಸೇವಕ ಎಂದರು.

ನವದೆಹಲಿಯ ಜೆಎನ್‌ಯುನ ಸಾಮಾಜಿಕ ವ್ಯವಸ್ಥೆಗಳ ಅಧ್ಯಯನ ಕೇಂದ್ರದ ಮುಖ್ಯಸ್ಥ ಪ್ರೊ.ವಿವೇಕ್ ಕುಮಾರ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳಿಸುವುದಕ್ಕೆ ಪ್ರಾತಿನಿಧ್ಯ ಅಗತ್ಯವಿದೆ ಎಂದು ಅಂಬೇಡ್ಕರ್ ಬಯಸಿದ್ದರು. ಶಾಸಕಾಂಗದ ಜೊತೆಗೆ, ಸಚಿವ ಸಂಪುಟದಲ್ಲೂ ಮೀಸಲಾತಿ ಕೇಳಿದ್ದರು. ಹೀಗಾಗಿ, ಸಚಿವ ಸಂಪುಟದಲ್ಲೂ ಮೀಸಲಾತಿ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪ್ರಾತಿನಿಧ್ಯ ಕುರಿತು ಮತ್ತೊಮ್ಮೆ ಯೋಚಿಸಬೇಕು. ಏಕೆಂದರೆ ಮೀಸಲಾತಿ ಬಡತನ ಹೋಗಲಾಡಿಸುವ ಕಾರ್ಯಕ್ರಮವಲ್ಲ. ದಲಿತರು, ಹಿಂದುಳಿದವರು ಹಾಗೂ ಮಹಿಳೆಯರನ್ನು ಒಳಗೊಳಿಸಿಕೊಳ್ಳಬೇಕು. ಪ್ರಾತಿನಿಧ್ಯ ದೊರೆಯುವವರೆಗೂ ಮೀಸಲಾತಿ ಮುಂದುವರಿಯಬೇಕು ಎಂದು ಪ್ರತಿಪಾದಿಸಿದರು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್, ಪ್ರಾಧ್ಯಾಪಕ ಡಾ.ಜೆ.ಸೋಮಶೇಖರ್ ಮತ್ತಿತರರು ಹಾಜರಿದ್ದರು.

ಡಾ.ಅಂಬೇಡ್ಕರ್ ಮ್ಯೂಸಿಯಂನ 4ನೇ ಹಂತದ ಕಾಮಗಾರಿಗೆ 6.9 ಕೋಟಿ ಅನುದಾನ ಕೋರಿಕೆ

ಕೇಂದ್ರದ ರಾಜ್ಯ ಸಚಿವ ಅಠಾವಳೆ ಅವರಿಗೆ ವಿವಿ ಕುಲಪತಿಗಳಿಂದ ಮನವಿ

ಮೈಸೂರು: ಮೈಸೂರು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಕೇಂದ್ರದ ನಿರ್ಮಾಣ ಹಂತದಲ್ಲಿರುವ ಡಾ.ಅಂಬೇಡ್ಕರ್ ಮ್ಯೂಸಿಯಂ ಮತ್ತು ದಲಿತ ದಾಖಲೀಕರಣ ಕೇಂದ್ರದ 4ನೇ ಹಂತದ ಕಾಮಗಾರಿ ಪೂರ್ಣಗೊಳಿಸಲು 6.9 ಕೋಟಿ ರೂ. ಅನುದಾನ ಕಲ್ಪಿಸುವಂತೆ ಕೇಂದ್ರದ ರಾಜ್ಯ ಸಚಿವ ರಾಮದಾಸ್ ಅಠಾವಳೆ ಅವರಲ್ಲಿ ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮನವಿ ಮಾಡಿದರು.

ಅಲ್ಲದೆ, ವಿವಿ ವತಿಯಿಂದ ಬೌದ್ಧ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅದಕ್ಕೆ 10 ಕೋಟಿ ರೂ. ಅನುದಾನ ಒದಗಿಸುವಂತೆಯೂ ಸಂಸದ ವಿ.ಶ್ರೀನಿವಾಸ ಪ್ರಸಾದ್, ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಪ್ರಧಾನಿ ಮೋದಿ ಅವರಿಗೆ ಮನವಿ ಸಲ್ಲಿಸಿದ್ದಾರೆ ಎಂಬ ಮಾಹಿತಿಯನ್ನೂ ಸಚಿವರಿಗೆ ಕುಲಪತಿಗಳು ಇದೇ ವೇಳೆ ನೀಡಿದರು. ಜೊತೆಗೆ ಅನುದಾನ ಸಂಬಂಧ ಸಚಿವರಲ್ಲಿ ಲಿಖಿತ ಮನವಿ ಸಲ್ಲಿಸಿದರು.

ನಾಲ್ವಡಿ ಜಯಂತಿ ಆಚರಿಸದ್ದಕ್ಕೆ ಕನ್ನಡ ವೇದಿಕೆ ಪ್ರತಿಭಟನೆ

ಮೈಸೂರು,ಸೆ.24(ಪಿಎಂ)– ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತದ ವತಿಯಿಂದ ಆಧುನಿಕ ಮೈಸೂರು ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ ಮಾಡದೇ ಇರುವುದನ್ನು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿವಿಯ ಕ್ರಾಫರ್ಡ್ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಜನಪರ ಕಾರ್ಯ ಯೋಜನೆಗಳ ಮೂಲಕ ನಾಡಿನ ಅಭಿವೃದ್ಧಿಗೆ ನಾಂದಿ ಹಾಡಿದ ಮಹನೀಯರು ನಾಲ್ವಡಿಯವರು. ಆದರೆ ಸರ್ಕಾರ ಹಾಗೂ ಜಿಲ್ಲಾಡಳಿತ ಜೂನ್‌ನಲ್ಲಿ ಅವರ ಜಯಂತಿ ಆಚರಿಸಲಿಲ್ಲ. ಜೊತೆಗೆ ಆಗಸ್ಟ್‌ನಲ್ಲಿ ಅವರ ಪುಣ್ಯಸ್ಮರಣೆಯನ್ನೂ ಮಾಡಲಿಲ್ಲ. ಮೈಸೂರು ದಸರಾ ವಿಶ್ವ ವಿಖ್ಯಾತಿಗೊಳ್ಳಲು ನಾಲ್ವಡಿ ಕಾರಣಕರ್ತರು. ಇಂತಹ ಮಹಾತ್ಮನನ್ನೇ ಆಡಳಿತ ಮರೆತಿರುವುದು ದುರ್ದೈವ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ಇತಿಹಾಸ, ಮಾಹಿತಿ ಇಲ್ಲದ ರಾಜಕಾರಣಿಗಳು ಅಧಿಕಾರದ ಚುಕ್ಕಾಣಿ ಹಿಡಿದರೆ ಏನಾಗುತ್ತದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಗಬೇಕಾದ ಸುಧಾರಣೆಗಳನ್ನು ರಾಜಪ್ರಭುತ್ವದ ತಮ್ಮ ಆಡಳಿತಾವಧಿಯಲ್ಲೇ ಪೂರೈಸಿ ಮಹಾತ್ಮಗಾಂಧೀಜಿ ಅವರಿಂದ 'ರಾಜರ್ಷಿ' ಎಂಬ ಬಿರುದಿಗೆ ಭಾಜನರಾದ ನಾಲ್ವಡಿ ಜಯಂತಿ ಆಚರಿಸದೇ ದಸರಾ ಆಚರಣೆಗೆ ಚಾಲನೆ ನೀಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ರಾಜ್ಯ ರಾಜಧಾನಿ ಬೆಂಗಳೂರಿಗೆ ಮೊದಲು ವಿದ್ಯುತ್ ಸರಬರಾಜು ಮಾಡುವ ಮೂಲಕ ಬೆಳಕನ್ನು ಕೊಟ್ಟಂತಹ ನಾಲ್ವಡಿಯವರ ಜಯಂತಿ ಇವರಿಗೆ ನೆನಪಿಗೆ ಬರಲಿಲ್ಲವೇ? ಕೃಷ್ಣರಾಜ ಸಾಗರ, ಮೈಸೂರು ವಿಶ್ವವಿದ್ಯಾನಿಲಯ, ಭಾರತೀಯ ವಿಜ್ಞಾನ ಸಂಸ್ಥೆ, ಮೈಸೂರು ಮೆಡಿಕಲ್ ಕಾಲೇಜು, ಕೃಷ್ಣರಾಜೇಂದ್ರ ಆಸ್ಪತ್ರೆ, ಕನ್ನಡ ಸಾಹಿತ್ಯ ಪರಿಷತ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸೇರಿದಂತೆ ಹಲವಾರು ಜನಪರ ಕಾರ್ಯಗಳನ್ನು ಕೈಗೊಂಡು ಭಾರತ ಕಂಡ ಶ್ರೇಷ್ಠ ರಾಜ ಎಂದು ಬ್ರಿಟಿಷರಿಂದಲೂ ಪ್ರಶಂಸೆ ಪಡೆದವರು ನಾಲ್ವಡಿ. ಅವರ ಜಯಂತಿಯನ್ನು ಆಚರಿಸುವ ಮೂಲಕ ಅವರಿಗೆ ಸಲ್ಲಬೇಕಾದ ಗೌರವ ಅರ್ಪಿಸಿ ನಂತರ ದಸರಾ ಹಬ್ಬಕ್ಕೆ ಚಾಲನೆ ನೀಡಲಿ ಎಂದು ಒತ್ತಾಯಿಸಿದರು.

ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಗೋಪಿ, ಮಹದೇವಸ್ವಾಮಿ, ರಾಧಾಕೃಷ್ಣ, ಮಾದಪ್ಪ, ಪುಷ್ಪಲತಾ, ಮಾಲಿನಿ, ಎಲ್‌ಐಸಿ ಸಿದ್ದಪ್ಪ, ಗೋವಿಂದ್‌ರಾಜು, ಸುನೀಲ್, ಬೀಡಾಬಾಬು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರು ವಿವಿ ಕ್ರಾಫರ್ಡ್ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಎದುರು ಮೈಸೂರು ಕನ್ನಡ ವೇದಿಕೆ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಸೆ.27, 29 ಗ್ರಾಮೀಣ ದಸರಾ

ಮೈಸೂರು, ಸೆ.24– ನಾಡಹಬ್ಬ ಮೈಸೂರು ದಸರಾ ಅಂಗವಾಗಿ ಮೈಸೂರು ತಾಲೂಕಿನಲ್ಲಿ ಸೆ.27 ಹಾಗೂ ಸೆ.29 ರಂದು ಎರಡು ದಿನಗಳ ಕಾಲ ತಾಲೂಕು ಮಟ್ಟದ ಗ್ರಾಮೀಣ ದಸರಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತಾಲೂಕಿನ ವರುಣಾ ಗ್ರಾಮದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಸೆ.27ರಂದು ಬೆಳಗ್ಗೆ 9ರಿಂದ ರೈತರಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಪುರುಷರಿಗೆ ಮೂರು ಕಾಲಿನ ಓಟ, ಗೋಣಿ ಚೀಲದ ಒಳಗೆ ಕಾಲಿಟ್ಟು ಓಡುವುದು, ಗೊಬ್ಬರದ ಮೂಟೆ ಹೊತ್ತು ಓಡುವ ಸ್ಪರ್ಧೆ ಇರುತ್ತದೆ. ಮಹಿಳೆಯರಿಗೆ ಒಂಟಿ ಕಾಲಿನ ಓಟ, ನೀರಿನ ಬಿಂದಿಗೆ ಹೊತ್ತು ಓಡುವ ಸ್ಪರ್ಧೆ, ಗೋಣಿ ಚೀಲದ ಒಳಗೆ ಕಾಲಿಟ್ಟು ಓಡುವ ಸ್ಪರ್ಧೆ ಇರಲಿದೆ. ಪುರುಷರು ಹಾಗೂ ಮಹಿಳೆಯರಿಗೆ ಕೆಸರು ಗದ್ದೆಯಲ್ಲಿ ಓಡುವ ಸ್ಪರ್ಧೆಯೂ ಇರಲಿದ್ದು, ವರುಣಾ ಗ್ರಾಮದ ಸುತ್ತೂರು ರಸ್ತೆಯಲ್ಲಿರುವ ಮಹದೇವಪ್ಪ ಅವರ ಜಮೀನಿನಲ್ಲಿ ಆಯೋಜಿಸಲಾಗಿದೆ. ಸೆ.29ರಂದು ಬೆಳಗ್ಗೆ 11 ಗಂಟೆಗೆ ಗ್ರಾಮೀಣ ದಸರಾ ವೇದಿಕೆ ಕಾರ್ಯಕ್ರಮವು ಜಯಪುರ ಗ್ರಾಮದ ಗುಜ್ಜಮ್ಮ ದೇವಸ್ಥಾನದ ಆವರಣದಲ್ಲಿ ನಡೆಯಲಿದ್ದು, ವಿವಿಧ ಜಾನಪದ ಕಲಾತಂಡ ಮತ್ತು ಆಕರ್ಷಕ ಟ್ಯಾಬ್ಲೋ ಒಳಗೊಂಡ ಮೆರವಣಿಗೆಯು ದಾರಿಪುರ ಗ್ರಾಮದ ದೇವಸ್ಥಾನದಿಂದ ಸಾಗಲಿದೆ. ಕ್ರೀಡಾಕೂಟದಲ್ಲಿ ಭಾಗವಹಿಸುವವರು ವರುಣಾ ಹೋಬಳಿಯವರು ಮೊ.ಸಂ: 9019974711, ಜಯಪುರ ಹೋಬಳಿಯವರು ಮೊ.ಸಂ: 7795398976, ಇಲವಾಲ ಹೋಬಳಿಯವರು ಮೊ.ಸಂ: 9538793550, ಕಸಬಾ ಮೊ.ಸಂ: 9880501981 ಸಂಪರ್ಕಿಸಿ ಹೋಬಳಿವಾರು ಹೆಸರು ನೋಂದಾಯಿಸಿಕೊಳ್ಳಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.09.2022 ಭಾನುವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಮಹಾಲಯ ಅಮಾವಾಸ್ಯೆ, ನಕ್ಷತ್ರ : ಉಫ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಮಹಿಷ ದಸರಾ ಆಚರಣಾ ಸಮಿತಿ :** ಮಹಿಷಾಸುರರಿಗೆ ಪುಷ್ಪಾರ್ಚನೆ ಕಾರ್ಯಕ್ರಮ, ಸ್ಥಳ : ಚಾಮುಂಡಿಬೆಟ್ಟ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್:** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ, ಎಸ್ಟಿ ನೌಕರರ ಸಂಘದ ಜಿಲ್ಲಾ ಸಮಿತಿ:** ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ, ಉದ್ಘಾಟನೆ: ಮಾಜಿ ಸಚಿವ ಸತೀಶ್ ಜಾರಕಿಹೊಳಿ, ಉಪಸ್ಥಿತರು: ಮನೋರಖ್ಖಿತ ಭಂತೇಜಿ, ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಪ್ರಿಯಾಂಕ ಖರ್ಗೆ, ಶಾಸಕರಾದ ಹರ್ಷವರ್ಧನ್, ಅಶ್ವಿನ್‌ಕುಮಾರ್, ಡಾ.ತಿಮ್ಮಯ್ಯ, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಜನನಿ ಸೇವಾ ಟ್ರಸ್ಟ್:** ಸುಗಂಧದ್ರವ್ಯದೊಂದಿಗೆ ಪ್ರವಾಸಿಗರನ್ನು ಬರಮಾಡಿಕೊಳ್ಳುವ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಯಕ್ಷಗಾನ ಕಲಾವಿದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಅಧ್ಯಕ್ಷತೆ: ಟ್ರಸ್ಟ್ ಅಧ್ಯಕ್ಷ ಡಾ.ಅಶೋಕ, ಸ್ಥಳ: ಅರಮನೆ ಆವರಣ, ಬೆಳಗ್ಗೆ 11ಕ್ಕೆ.

■ **ಚಿನ್ಮಯ ಮಿಷನ್ :** ಜ್ಞಾನ ಯಜ್ಞ, ಸಂಜೆ 6 ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ, ಸಂಜೆ 6.30 ರಿಂದ ಸ್ವಾಮಿ ಗಹನಾನಂದಜೀ ಅವರಿಂದ ಶ್ರೀ ಆದಿಶಂಕರಾಚಾರ್ಯರ ಸಾಧನಾ ಪಂಚಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ.

■ **ಆರ್ಟ್ ಆಫ್ ಲಿವಿಂಗ್ :** ಜೀವನ ಕಲೆ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ, ಮಧ್ಯಾಹ್ನ 1ರಿಂದ, ಮಧ್ಯಾಹ್ನ 3ರಿಂದ.

■ **ಬಂಟರ ಸಂಘ, ಮೈಸೂರು:** ಜನ್ಸಾಲೆ X ಜಲವಳ್ಳಿ ಯಕ್ಷ ಬಳಗದವರಿಂದ ಬಡಗುತಿಟ್ಟು ಯಕ್ಷಗಾನ ಪ್ರದರ್ಶನ ಗದಾಯುದ್ಧ ಮತ್ತು ಚಂದ್ರಾವಳಿ ವಿಲಾಸ, ಸ್ಥಳ: ಆಶಾ ಪ್ರಕಾಶ ಶೆಟ್ಟಿ ಬಂಟರ ಭವನ, ಸಂಜೆ 4ಕ್ಕೆ.

■ **ಸಿರಿಗನ್ನಡ ವೇದಿಕೆ ರಾಜ್ಯ ಸಮಿತಿ, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ಶ್ರೀ ವೇದಾಂತ್ ಅತಿಶಯ್ ಜೈನ್ ಮತ್ತು ತಂಡದವರಿಂದ ಎಸ್‌ಪಿಬಿ ಅವರ ಗೀತೆಗಳ ಸಂಗೀತ ರಸಸಂಜೆ, ಉದ್ಘಾಟನೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 4.30ಕ್ಕೆ.

■ **ಜೀವ್ ದಯಾ ಜೈನ್ ಚಾರಿಟಿ, ಮೈಸೂರು:** ಹಸುಗಳಿಗೆ ಬೃಹತ್ ಮೇವು ನೀಡುವ ಅಭಿಯಾನ, ಮುಖ್ಯ ಅತಿಥಿಗಳು: ಸಾಮಾಜಿಕ ಕಾರ್ಯಕರ್ತ ಡಾ.ನಿರ್ಮಲ ಭಟ್ಟಿ, ಗೌರವ ಅತಿಥಿಗಳು: ಪೀಪಲ್ ಫಾರ್ ಅನಿಮಲ್ಸ್ ಮ್ಯಾನೇಜಿಂಗ್ ಟ್ರಸ್ಟಿ ಸವಿತಾ ನಾಗಭೂಷಣ್, ಸ್ಥಳ: ಮೈಸೂರು ಪಿಂಜರಾಪೋಲ್, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 5ಕ್ಕೆ.

■ **ಕಲಾಸುರುಚಿ :** ಫ್ರೀ ಔಟ್ ಗೋಯಿಂಗ್ ಇಂಗ್ಲಿಷ್ ನಾಟಕ ಪ್ರದರ್ಶನ, ನಿರ್ದೇಶನ : ಸೀಮಂತಿನಿ ಬಿ. ಶರ್ಮ, ಸ್ಥಳ: ರಮಾಗೋವಿಂದ ರಂಗಮಂದಿರ, ಸುಯೋಗ್ ಆಸ್ಪತ್ರೆ ಹತ್ತಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಬೇಲೂರು ರಾಮಮೂರ್ತಿ, 6.20 ಗೀತಾರಾಧನ, 6.35 ಬದುಕು ಬದಲಿಸಿದ ಶೋಧ, ಲೇಖನ ಮತ್ತು ಪ್ರಸ್ತುತಿ –ಸುರೇಂದ್ರನಾಥ್ ಸಾತ್ವಿಕ್, 6.40–ಅರಿವಿನ ಶಿಖರ ಗಾಯನ–ಸಿ.ವಿಶ್ವನಾಥ್ ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ–"ಹೃದಯಾಘಾತ–ಕಾರಣಗಳು, ಚಿಕಿತ್ಸೆ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ" ಕುರಿತು ವೀಣಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 10.00ಶ್ರೀ ಕಮಲಾಂಬ ಜಯತಿ" ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನಾಧರಿಸಿದ ವಿಶೇಷ ಸಂಗೀತ ಸರಣಿ–3ನೇ ಕಾರ್ಯಕ್ರಮ, ಪರಿಕಲ್ಪನೆ–ಪ್ರೊ.ರಾ.ವಿಶ್ವೇಶ್ವರನ್, ಪ್ರಸ್ತುತಿ–ಜಿ.ರಾಜಲಕ್ಷ್ಮಿ, 10.30 ಮಕ್ಕಳ ಮಂಟಪ–ದಿವ್ಯ ದೀಪ ಚಾರಿಟಬಲ್ ಟ್ರಸ್ಟ್‌ನ ಕಲಿಯುವ ಮನೆ ಮಕ್ಕಳೊಂದಿಗೆ ಮಾತುಕತೆ ಪ್ರಸ್ತುತಿ–ಕೆ.ಬಿ.ಮೀನಾ ಹಾಗೂ ನಿಶಿತಾ ಕೃಷ್ಣಸ್ವಾಮಿ, 11.00 ಮನ್ ಕೀ ಬಾತ್–ದೇಶದ ಜನತೆಯನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕೀ ಬಾತ್–ದೇಶದ ಜನತೆಯನ್ನುದ್ದೇಶಿಸಿ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.05ವನಿತಾ ವಿಹಾರ–ನವರಾತ್ರಿ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ "ಶ್ರೀದೇವಿ ನಮನ" –ವಾಗ್ದೇವಿ ಭಜನಾ ಮಂಡಳಿಯ ಸದಸ್ಯರಿಂದ, 12.30 ದೇವರನಾಮ–ಬಿ.ಕೆ.ಸುಮಿತ್ರಾ, ಸಂಗೀತಾಕಟ್ಟಿ, 12.45 ಜನಪದಗೀತೆ–ಬನ್ನೂರು ಕೆಂಪಮ್ಮ ಮತ್ತು ತಂಡ, 1.20 ಭಾವಗೀತೆ, 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಣೆ "ಸ್ವರಾಜ್" ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಕಥೆ, 3.45ಯಕ್ಷಗಾನ ತಾಳ ಮದ್ದಲೆ– ಪ್ರಸಂಗ–ಸೀತಾ ಪರಿತ್ಯಾಗ, ಪ್ರಸ್ತುತಿ–ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾ ಪೋಷಿತ ಯಕ್ಷಗಾನ ಮಂಡಳಿ ಕಲಾವಿದರು, 4.45 ಚಟ್ ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ–ಕೃಷಿಲೋಕ, 7.00 AIR Next, 8.00 ಮನ್ ಕೀ ಬಾತ್–ದೇಶದ ಜನತೆಯನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಆರ್. ಸುಧಾಕರ್–ನಾಗಸ್ವರ ವಾದನ

■ **ರಂಗಾಯಣ :** ಸಂಜೆ 6ಕ್ಕೆ ದಸರಾ ರಂಗೋತ್ಸವ, ಉದ್ಘಾಟನೆ : ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಸುರೇಶ್ ಬಾಬು, ಮುಖ್ಯ ಅತಿಥಿಗಳು : ದಕ್ಷಿಣ ಕನ್ನಡ ರಂಗ ಸಮಾಜದ ಸದಸ್ಯ ಡಾ. ಶೀನ ನಡೋಳಿ, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸಂಜೆ 6.30ಕ್ಕೆ ರಂಗಾಯಣ ರೆಪರ್ಟರಿ ತಂಡದಿಂದ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ : ಆರ್. ನಾಗೇಶ್, ಸ್ಥಳ: ಭೂಮಿಗೀತ

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ, ಬೆಳಗ್ಗೆ 7 ರಿಂದ ಶ್ರೀ ಶಾರದಾ ಪರಮೇಶ್ವರಿಯವರ ಸನ್ನಿಧಿಯಲ್ಲಿ ಮಹಾಭಿಷೇಕ, 9.30 ರಿಂದ ಹರಿದ್ರಾಲಂಕಾರ ದರ್ಶನ, ಬೆಳಗ್ಗೆ 11ಕ್ಕೆ ಅಭಿನವ ವಿದ್ಯಾತೀರ್ಥ ಕೃಪಾಪೋಷಿತ ಮಹಿಳಾ ಸಂಘದವರಿಂದ ಭಜನಾ ಕಾರ್ಯಕ್ರಮ, ಮ. 12ಕ್ಕೆ ಜಗತ್ಪ್ರಸೂತಿಕಾಲಂಕಾರ–ಮಹಾಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರ ಚರಣಾರಾಧನಾ ಪ್ರಯುಕ್ತ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಮಹಾಪೂಜೆ, ಮಂಗಳಾರತಿ, ಶ್ರೀ ಗುರುಸ್ಮರಣೆ, ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ.

■ **ಕಾವೇರಿ ಹೃದಯ ಮತ್ತು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ :** ವಿಶ್ವ ಹೃದಯ ದಿನದ ಅಂಗವಾಗಿ ಹೃದಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಮ್ಯಾರಥಾನ್, ಸ್ಥಳ: ಅರಮನೆ ಉತ್ತರ ದ್ವಾರದಿಂದ, ಬೆಳಗ್ಗೆ 6.30ಕ್ಕೆ

ವಿವಿಧ ಸಹಕಾರ ಸಂಘಗಳ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಲ್. ರೇವಣ್ಣಸಿದ್ದಯ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲಾ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ವಿಜಯಶಂಕರ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಸಿಟಿ ಶ್ರೀ ಶಿವ ಛತ್ರಪತಿ ಕೋ–ಆಪರೇಟಿವ್ ಸೊಸೈಟಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎನ್. ಗೋಪಾಲರಾವ್ ಜಾದವ್, ಸ್ಥಳ: ಶ್ರೀ ಲೋಕಾಭಿರಾಮ ಸಮುದಾಯ ಭವನ, ಡಿ. ದೇವರಾಜ ಅರಸು ರಸ್ತೆ, ಬೆಳಗ್ಗೆ 10ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 25 ಭಾನುವಾರ 2022

ಸಂಪುಟ: 43 | ಸಂಚಿಕೆ: 160 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

₹4





ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಬ್ರಿಟನ್ ರಾಣಿಗೇಕೆ ಶೋಕಾಚರಣೆ?

■ ಪುಟ–4





ಚುನಾವಣಾ ಪೂರ್ವ ಸಮೀಕ್ಷೆ

ಯಾರಿಗೂ ಸ್ಪಷ್ಟ ಬಹುಮತವಿಲ್ಲ

- ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೇ ಮಾಹಿತಿ
- ಮ್ಯಾಜಿಕ್ ಸಂಖ್ಯೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹರಸಾಹಸ

ಬೆಂಗಳೂರು, ಸೆ. 24(ಕೆಎಂಶಿ)– ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯ ಪೂರ್ವ ಸಮೀಕ್ಷೆಗಳಲ್ಲಿ ಯಾವ ಪಕ್ಷಕ್ಕೂ ಬಹುಮತ ಬರಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಹೇಳಿದ್ದಾರೆ.

ನಮ್ಮ ಬಿಜೆಪಿಯು ಎರಡು ಮೂರು ಸಮೀಕ್ಷೆಗಳನ್ನು ಮಾಡಿದೆ. ಪ್ರತಿಪಕ್ಷಗಳಿಗಿಂತ ನಾವೇ ಮೇಲುಗೈ ಸಾಧಿಸುತ್ತೇವೆ. ಆದರೆ ಸದ್ಯಕ್ಕೆ ಸ್ಪಷ್ಟ ಬಹುಮತ ಬರುವ ಸಾಧ್ಯತೆ ಇಲ್ಲ. 90ರಿಂದ 100 ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ಜಯ ಗಳಿಸಲಿದ್ದಾರೆ ಎಂದು ಪೂರ್ವ ಸಮೀಕ್ಷೆಗಳು ಹೇಳಿವೆ.

ಚುನಾವಣೆಗೆ ಇನ್ನೂ ಆರೇಳು ತಿಂಗಳುಗಳಿವೆ. ಆ ವೇಳೆಗೆ ತಯಾರಿ ಮಾಡಿಕೊಂಡು ನಾವು ಸ್ಪಷ್ಟ ಬಹುಮತ ಪಡೆದು, ▶ 9ನೇ ಪುಟಕ್ಕೆ

ಶೀಘ್ರವೇ ಸಚಿವ ಸಂಪುಟ ವಿಸ್ತರಣೆ

ಬೆಂಗಳೂರು: ಶೀಘ್ರವೇ ಸಚಿವ ಸಂಪುಟ ವಿಸ್ತರಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಆದಷ್ಟು ಬೇಗನೇ ಸಚಿವ ಸಂಪುಟ ವಿಸ್ತರಣೆ ಮಾಡೋಣ ಅಂತ ವರಿಷ್ಠರು ಹೇಳಿದ್ದಾರೆ. ಕೆಲವೇ ದಿನಗಳಲ್ಲಿ ಹೈಕಮಾಂಡ್ ಅನುಮತಿ ಪಡೆದು ವಿಸ್ತರಣೆ ಮಾಡುತ್ತೇವೆ ಎಂದಿದ್ದಾರೆ.

ಬಹಳ ದಿನಗಳಿಂದಲೂ ಮುಂದೂಡುತ್ತಲೇ ಬಂದಿರುವ ಸಂಪುಟ ವಿಸ್ತರಣೆಯನ್ನು ಶೀಘ್ರವೇ ಪೂರ್ಣಗೊಳಿಸುವುದಾಗಿ ಹೇಳಿದ ಬೊಮ್ಮಾಯಿ, ▶ 9ನೇ ಪುಟಕ್ಕೆ

ನಾಳೆ ರಾಷ್ಟ್ರಪತಿ ಭೇಟಿ: ಮೈಸೂರಲ್ಲಿ ವ್ಯಾಪಕ ಭದ್ರತೆ

ಬಾಂಬ್, ಡಾಗ್ ಸ್ಕ್ವಾಡ್‌ನಿಂದ ಗಣ್ಯಾತಿಗಣ್ಯರು ಹಾದು ಹೋಗುವ ಮಾರ್ಗ ತಪಾಸಣೆ, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರಿಂದ ದಸರಾ ಬಂದೋಬಸ್ತ್ ಮಾಹಿತಿ


ಮೈಸೂರು, ಸೆ. 24(ಆರ್‌ಕೆ)– ಈ ಬಾರಿಯ ದಸರಾ ಮಹೋತ್ಸವಕ್ಕೆ ಇದೇ ಮೊದಲ ಬಾರಿ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ ನೀಡಲಿದ್ದು, ಅವರ ಆಗಮನದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.


ದ್ರೌಪದಿ ಮುರ್ಮು

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ದಸರಾಕ್ಕೆ ಮಾಡಿರುವ ಭದ್ರತೆ ಬಗ್ಗೆ ಮಾಹಿತಿ ನೀಡಿದರು. ಸೆ.26ರಂದು ರಾಷ್ಟ್ರಪತಿಗಳು ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ▶ 9ನೇ ಪುಟಕ್ಕೆ

ಪ್ರವಾಸಿಗರಿಗೆ ಎಂಟು ಕಡೆ ಪೊಲೀಸ್ ಸಹಾಯ ಕೇಂದ್ರ

ಮೈಸೂರು: ಮೈಸೂರಿಗೆ ಬರುವ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡಲು ಎಂಟು ಕಡೆ ಪೊಲೀಸ್ ಸಹಾಯ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಸೆ.26ರಿಂದ ಅ.5ರವರೆಗೆ ಪ್ರತೀದಿನ ಬೆಳಗ್ಗೆ 9ರಿಂದ ರಾತ್ರಿ 10ರವರೆಗೆ ಪೊಲೀಸ್ ಹೆಲ್ಪ್ ಡೆಸ್ಕ್‌ನಲ್ಲಿ ಪೊಲೀಸ್ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದು, ದಸರಾ ಕಾರ್ಯಕ್ರಮಗಳು, ಏಕಮುಖ ಸಂಚಾರ ವ್ಯವಸ್ಥೆ, ವಾಹನ ನಿಲುಗಡೆ ಸ್ಥಳ, ಇಲ್ಲಿನ ಪ್ರವಾಸಿ ತಾಣಗಳ ಬಗ್ಗೆ ಅವರು ಮಾಹಿತಿ ನೀಡಲಿದ್ದು, ಮುದ್ರಿತ ಬ್ರೋಚರ್‌ಗಳನ್ನು ವಿತರಿಸುವರು ▶ 9ನೇ ಪುಟಕ್ಕೆ





ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾಗುವ ಮಾರ್ಗದಲ್ಲಿ ಪೊಲೀಸರಿಂದ ಭದ್ರತಾ ಪರಿಶೀಲನೆ.

ಇಂದು ಮೈಸೂರಿಗೆ ಸಿಎಂ ಬೊಮ್ಮಾಯಿ

ಮೈಸೂರು,ಸೆ.24(ಆರ್‌ಕೆ)–ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ(ಸೆ.25) ಮೈಸೂರಿಗೆ ಆಗಮಿಸುವರು.

ಭಾನುವಾರ ಮಧ್ಯಾಹ್ನ 3.05 ಗಂಟೆಗೆ ವಿಶೇಷ ವಿಮಾನದಲ್ಲಿ ಆಗಮಿಸುವ ಬಸವರಾಜ ಬೊಮ್ಮಾಯಿ ಅವರು, ಮಧ್ಯಾಹ್ನ 3.30 ಗಂಟೆಗೆ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಏರ್ಪಡಿಸಿರುವ ಚಾಮರಾಜ ಕ್ಷೇತ್ರದ ಫಲಾನುಭವಿಗಳಿಗೆ ಸರ್ಕಾರಿ ಸೌಲಭ್ಯ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ನಂತರ ಸಂಜೆ 4.30 ಗಂಟೆಗೆ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ಪಾರ್ಕ್‌ನಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಆಯೋಜಿಸಿರುವ ಮೋದಿ ಯುಗ ಉತ್ಸವ–2022ರ ▶ 9ನೇ ಪುಟಕ್ಕೆ

ರಾಜಮನೆತನದವರಿಗೆ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ದಸರೆಗೆ ಆಹ್ವಾನ

ಮೈಸೂರು, ಸೆ.24(ಎಸ್‌ಬಿಡಿ)– ನಾಡಹಬ್ಬ ದಸರಾ ಮಹೋತ್ಸವಕ್ಕೆ ಮೈಸೂರು ರಾಜಮನೆತನದವರನ್ನು ಜಿಲ್ಲಾಡಳಿತದ ವತಿಯಿಂದ ಶನಿವಾರ ಅಧಿಕೃತವಾಗಿ ಆಹ್ವಾನಿಸಲಾಯಿತು. ಅರಮನೆಯ ರಾಜಮನೆತನದ ಖಾಸಗಿ ನಿವಾಸದಲ್ಲಿ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ನೇತೃತ್ವದ ನಿಯೋಗ ಭೇಟಿ ಮಾಡಿ, ಸಾಂಪ್ರದಾಯಿಕವಾಗಿ ಹೂಗುಚ್ಛ, ಫಲತಾಂಬೂಲದೊಂದಿಗೆ ಆಹ್ವಾನ ಪತ್ರಿಕೆ ನೀಡಿ, ▶ 5ನೇ ಪುಟಕ್ಕೆ

“ ಯುವ ದಸರಾಗೆ ಕಿಚ್ಚ ಸುದೀಪ್ ಬರಲ್ಲ

ಸೆ.27ರಿಂದ ಆರಂಭವಾಗುವ ಆಕರ್ಷಕ ಯುವ ದಸರಾ ಕಾರ್ಯಕ್ರಮಕ್ಕೆ ನಟ ಕಿಚ್ಚ ಸುದೀಪ್ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆಂದು ಹೇಳಲಾಗಿತ್ತು. ಆದರೆ ಅನಿವಾರ್ಯ ಕಾರಣದಿಂದ ಯುವ ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗುತ್ತಿಲ್ಲ ಎಂದು ಸುದೀಪ್ ತಿಳಿಸಿದ್ದಾರೆ. ಹಾಗಾಗಿ ಪರ್ಯಾಯವಾಗಿ ಯಾರಾದರೂ ಪ್ರಖ್ಯಾತರನ್ನು ಆಹ್ವಾನಿಸಲಾಗುವುದು.

–ಎಸ್.ಟಿ.ಸೋಮಶೇಖರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ

ಫಲ ತಾಂಬೂಲದೊಂದಿಗೆ ರಾಜಮಾತೆ ಪ್ರಮೋದಾದೇವಿ ಅವರಿಗೆ ಗೌರವ ಸಮರ್ಪಣೆ



ಮೈಸೂರು ಅರಮನೆ ಖಾಸಗಿ ನಿವಾಸದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದ ನಿಯೋಗ ಭೇಟಿ ಮಾಡಿ, ದಸರಾಗೆ ಅಧಿಕೃತ ಆಹ್ವಾನ ನೀಡಲಾಯಿತು. ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಉಪಮೇಯರ್ ಜಿ.ರೂಪಾ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ವಿವಿಧ ನಿಗಮ ಮಂಡಳಿ ಅಧ್ಯಕ್ಷರು ಉಪಸ್ಥಿತರಿದ್ದರು.



ನಕ್ಕರೆ ಅದೇ ಸ್ವರ್ಗ

ಸಂದರ್ಶಕ : (ಕಂಪ್ಯೂಟರ್ ಜ್ಞಾನದ ಬಗ್ಗೆ) ಮಿಸ್ಟರ್ ನಿಮಗೆ ಮೈಕ್ರೋಸಾಫ್ಟ್ ಆಫೀಸ್ ಗೊತ್ತಾ?

ಅಭ್ಯರ್ಥಿ : ಸಾರಿ ಸರ್, ನಂಗದು ಗೊತ್ತಿಲ್ಲ. ಆದ್ರೆ ನೀವು ಅಡ್ರೆಸ್ ಕೊಟ್ರೆ ನಾ ಖಂಡಿತ ಆ ಆಫೀಸ್ ಎಲ್ಲಿದೆ ಎಂದು ಪತ್ತೆ ಮಾಡ್ತೀನಿ.

ಮೈಸೂರು ಮಿತ್ರ

ಭಾನುವಾರ, 25 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ತನಗೆ ತೋರಿದ್ದೇ ಸರಿಯಾದ ದಾರಿ ಇರಬಹುದು. ಆದರೆ ಅದು ತನ್ನ ಹೊರತು ಇನ್ನೂ ಹತ್ತು ಜನಕ್ಕೆ ಸರಿಯಾಗಿ ಕಂಡಿರಬೇಕು. –ವಿ.ಎಂ. ಇನಾಂದಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕಾಳು ಕೂಡಿದರೆ ಕಣಜ

ನಿಮ್ಮ ಪತ್ರಗಳು

ದಸರಾ ದೀಪಾಲಂಕಾರದಿಂದ ವಂಚಿತವಾದ ಬಡಾವಣೆ

ಮಾನ್ಯರೆ,

ಮೈಸೂರಿನ ನರಸಿಂಹರಾಜ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬನ್ನಿಮಂಟಪ, ಬಾಲಭವನ ಬ್ಲಾಕ್ ಪ್ರದೇಶವು ದಸರಾ ದೀಪಾಲಂಕಾರದಿಂದ ವಂಚಿತವಾಗಿದೆ. ಬನ್ನಿಮಂಟಪದ ಶ್ರೀ ಆಂಜನೇಯಸ್ವಾಮಿ ಟೆಂಪಲ್, ಹಲೀಮ್‌ನಗರ, ಹುಡ್ಕೋ, ಹನುಮಂತನಗರ, ಕೆಎಸ್‌ಆರ್‌ಟಿಸಿ ಬ್ಲಾಕ್, ಬನ್ನಿಮಂಟಪ ಕೈಗಾರಿಕಾ ಪ್ರದೇಶ, ಕಾವೇರಿನಗರ ಮುಂತಾದ ಪ್ರದೇಶಗಳು ಅಂದಿನ ಸಿ.ಐ.ಟಿ.ಬಿ.ಯಿಂದ ಸುಮಾರು 40ರಿಂದ 50 ವರ್ಷಗಳ ಹಿಂದೆ ರಚನೆಯಾಗಿದ್ದು, ಈ ಪ್ರದೇಶದಲ್ಲಿ ಲಕ್ಷಾಂತರ ಜನರು ವಾಸಿಸುತ್ತಿದ್ದಾರೆ. ಇಲ್ಲಿ ವಾಣಿಜ್ಯ ಪ್ರದೇಶಗಳು, ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು, ಪಾರ್ಕ್‌ಗಳು ಒಳಗೊಂಡಿದ್ದು, ಹಲವಾರು ವರ್ಷಗಳಿಂದ ದಸರಾ ಸಂದರ್ಭದಲ್ಲಿ ಈ ಪ್ರದೇಶಗಳಲ್ಲಿ ದೀಪಾಲಂಕಾರ ಮಾಡದೆ ನಿರ್ಲಕ್ಷಿಸಲಾಗಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಡಳಿತ ಹಾಗೂ ಮೈಸೂರು ದಸರಾ ದೀಪಾಲಂಕಾರ ಉಪಸಮಿತಿ 2022 ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ಕೂಡಲೇ ಈ ಪ್ರದೇಶಗಳಿಗೆ ದೀಪಾಲಂಕಾರ ಮಾಡಬೇಕಾಗಿ ಮನವಿ.

– ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗ, ಮೈಸೂರು.

ಬಸ್ ತಂಗುದಾಣಕ್ಕೆ ಆಸನ ವ್ಯವಸ್ಥೆ ಕಲ್ಪಿಸಿದ ನಗರಪಾಲಿಕೆ ಸದಸ್ಯೆ !

ಮಾನ್ಯರೆ,



ಮೈಸೂರಿನ ವಿ.ವಿ.ಮೊಹಲ್ಲಾ ಪೊಲೀಸ್ ಠಾಣೆ ಪಕ್ಕದಲ್ಲಿರುವ ಬಸ್ ತಂಗುದಾಣಕ್ಕೆ ಬಹಳ ದಿನಗಳಿಂದ ಆಸನಗಳ ವ್ಯವಸ್ಥೆ ಇರಲಿಲ್ಲ. ಇದ್ದ ಆಸನಗಳು ಕಿತ್ತು ಹೋಗಿದ್ದವು. ಬಸ್ಸಿಗಾಗಿ ಕಾಯುವ ಪ್ರಯಾಣಿಕರು, ವಿದ್ಯಾರ್ಥಿಗಳು ನಿಂತುಕೊಂಡೇ ಉರಿ ಬಿಸಿಲಿನಲ್ಲಿ ಬಸ್ಸಿಗಾಗಿ ಕಾಯಬೇಕಾಗಿತ್ತು. ಇದನ್ನು ಗಮನಿಸಿದ ಇಲ್ಲಿನ ನಿವಾಸಿಗಳು ವಾರ್ಡ್ ನಂ.19ರ ಮೈಸೂರು ಮಹಾನಗರಪಾಲಿಕೆ ಸದಸ್ಯೆ ಭಾಗ್ಯ ಮಹದೇಶ್ ಅವರ ಬಳಿ ತಮ್ಮ ಅಳಲನ್ನು ತೋಡಿಕೊಂಡಿದ್ದರು. ಇದಕ್ಕೆ ಸಮ್ಮತಿಸಿದ ಭಾಗ್ಯ ಅವರು ಬಸ್ ತಂಗುದಾಣಕ್ಕೆ ಆಸನಗಳ ವ್ಯವಸ್ಥೆ ಮಾಡಿಸಿರುವುದು ಪ್ರಯಾಣಿಕರಿಗೆ ತುಂಬಾ ಅನುಕೂಲವಾಗಿದೆ. ಇವರು ತಮ್ಮ ವಾರ್ಡ್ ಅನ್ನು ಸ್ವಚ್ಛವಾಗಿಡಲು ಸದಾ ಶ್ರಮಿಸುತ್ತಿದ್ದಾರೆ. ಭಾಗ್ಯರವರಿಗೆ ಅಭಿನಂದನೆಗಳು.

– ರಾಘವೇಂದ್ರ, ಗೋಕುಲಂ, ಮೈಸೂರು

ಮನುಕುಲದ ಮಹಾನ್ ಚೇತನ ಡಾ.ಕಮಲಾರಾಮನ್

ಮಾನ್ಯರೆ,



ಮೈಸೂರಿನ ವಿವಿಧ ಸಂಘ ಸಂಸ್ಥೆಗಳಲ್ಲಿ ಹಿರಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಅನೇಕ ವರ್ಷಗಳಿಂದ ತಮ್ಮನ್ನು ತೊಡಗಿಸಿಕೊಂಡಿದ್ದ ಹಾಗೂ ವೈದ್ಯಕೀಯ ವೃತ್ತಿಯಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿ ಅತ್ಯಂತ ಜನಪ್ರಿಯತೆಯುಳ್ಳವರಾಗಿ ಸಮಸ್ತ ಜನರಿಗೂ ತಾಯಿಯ ಮನೋಭಾವ ತೋರುತ್ತಿದ್ದ ಡಾ.ಜೆ. ಕಮಲಾರಾಮನ್‌ರವರ ಅಕಾಲಿಕ ನಿಧನದಿಂದ ವೈದ್ಯಕೀಯ ಕ್ಷೇತ್ರಕ್ಕೆ ಅಪಾರ ನಷ್ಟ ಉಂಟಾಗಿದೆ. ಹಿಂದೆ ಕಮಲಾರಾಮನ್ ಕ್ಲಿನಿಕ್ ಎಂದರೆ ಸಾಕು ಅಲ್ಲಿಗೆ ಜನ ಮುಗಿಬೀಳುತ್ತಿದ್ದರು. ಏಕೆಂದರೆ ಈಗಿನಂತೆ ಆಗ ಮೈಸೂರಿನಲ್ಲಿ ಅಷ್ಟೊಂದು ಹೆಸರುವಾಸಿಯಾದ ಕ್ಲಿನಿಕ್‌ಗಳಿರಲಿಲ್ಲ. ಬಡವರು ಎಂದು ಗೊತ್ತಾದ ತಕ್ಷಣ ಅವರಿಗೆ ಡಾ.ಕಮಲಾರಾಮನ್ ಅವರು ಉಚಿತವಾಗಿ ಔಷಧೋಪಚಾರದೊಂದಿಗೆ ಸೇವೆ ಸಲ್ಲಿಸುತ್ತಿದ್ದರು. ಬಡ ಗರ್ಭಿಣಿ ಮಹಿಳೆಯರಿಗೂ ಉಚಿತವಾಗಿ ಪ್ರಸವ ಮಾಡಿಸುತ್ತಿದ್ದ ನಿದರ್ಶನ ಸಾಕಷ್ಟಿದೆ. ರೋಟರಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿಯೂ ಸಕ್ರಿಯವಾಗಿ ಗುರುತಿಸಿಕೊಂಡಿದ್ದರು. ಕೃಷ್ಣಮೂರ್ತಿಪುರಂ ರಾಮಮಂದಿರದಲ್ಲಿ ಅನೇಕ ವರ್ಷಗಳಿಂದ ಟ್ರಸ್ಟಿ ಆಗಿ ಅವಿರತವಾಗಿ ಸೇವೆ ಸಲ್ಲಿಸಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಇಲ್ಲಿ ನಡೆದ ಬ್ರಾಹ್ಮಣ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಮಹಾನ್ ಚೇತನ ಡಾ.ಕಮಲಾರಾಮನ್ ಅವರ ಆತ್ಮಕ್ಕೆ ಚಿರಶಾಂತಿ ದೊರಕಿ, ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ಭಗವಂತ ದಯಪಾಲಿಸಲಿ. ನಗರದಲ್ಲಿ ಹೆಚ್ಚು ಪ್ರಖ್ಯಾತರಾಗಿದ್ದ ಮೃತರ ಹೆಸರಿನಲ್ಲಿ ಯಾವುದಾದರೂ ಪ್ರಮುಖ ರಸ್ತೆಗೆ ಅವರ ಹೆಸರಿಟ್ಟರೆ ಅವರಿಗೆ ಉತ್ತಮ ರೀತಿಯಲ್ಲಿ ವಿದಾಯ ಹೇಳಿದಂತಾಗುತ್ತದೆ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಗಿಡಗಂಟಿ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ವಿಜಯನಗರ 2ನೇ ಹಂತ, 24ನೇ ಕ್ರಾಸ್‌ನಲ್ಲಿ ಚರಂಡಿಯು ಗಿಡಗಂಟಿಗಳಿಂದ ಸಂಪೂರ್ಣ ಮುಚ್ಚಿ ಹೋಗಿದೆ. ಅಲ್ಲದೆ ಜನರು ಕಸವನ್ನು ಎಸೆಯುತ್ತಾರೆ. ಇದರಿಂದ ವಿಷಜಂತುಗಳ ಆವಾಸಸ್ಥಾನವಾಗಿದೆ. ಒಂದು ದೊಡ್ಡ ಮರವೊಂದು ಸಂಪೂರ್ಣ ಒಣಗಿ ಹೋಗಿದ್ದು, ಮುರಿದು ಬೀಳುವ ಪರಿಸ್ಥಿತಿಯಲ್ಲಿದೆ. ಮತ್ತೊಂದು ಮರದ ಕೊಂಬೆಯು ವಿದ್ಯುತ್ ತಂತಿಗೆ ತಗುಲುತ್ತಿದೆ. ಸಂಬಂಧಪಟ್ಟ ಇಲಾಖೆಯವರು ಇದನ್ನು ಸರಿಪಡಿಸಿ ಮುಂದೆ ಆಗುವ ಅನಾಹುತ ತಪ್ಪಿಸಬೇಕೆಂದು ಈ ಮೂಲಕ ಮನವಿ.

–ಶಕುಂತಲ ರಾಮಚಂದ್ರ, ವಿಜಯನಗರ 2ನೇ ಹಂತ ನಿವಾಸಿ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಬ್ರಿಟನ್ ರಾಣಿಗೇಕೆ ಶೋಕಾಚರಣೆ?

ಸುದೀರ್ಘ 70 ವರ್ಷಗಳ ಕಾಲ ಅಧಿಕಾರದಲ್ಲಿದ್ದ ಬ್ರಿಟನ್ ರಾಣಿ ಸೆ. 8ರಂದು ನಿಧನರಾದರು. ಅವರು ಅತೀ ಕ್ರೂರ ಚಕ್ರಾಧಿಪತ್ಯವೊಂದರ ಪ್ರತಿನಿಧಿಯಾಗಿದ್ದರು. ಆದರೂ ಮಾನವ ಮೂಲ ಸಭ್ಯತೆಯ ಪ್ರಕಾರ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಲೇಬೇಕಾಗಿದೆ. ಆದಾಗ್ಯೂ, ಭಾರತ ಸರ್ಕಾರ ಮತ್ತು ಕೆಲವು ಭಾರತೀಯರು ಅತಿರೇಕವಾಯ್ತು ಅನ್ನುವ ಹಾಗೆ ಶೋಕಾಚರಣೆ ಮೂಲಕ ನಮ್ಮ ಅತೀ ಅಧೀನತೆ ಬಿಂಬಿಸಿದ್ದಾರೆ.

2ನೇ ರಾಣಿ ಎಲಿಜಬೆತ್ ಅವರ ವ್ಯಕ್ತಿತ್ವವನ್ನು ಎಷ್ಟೇ ಒಳ್ಳೆಯ ರೀತಿಯಲ್ಲಿ ವರ್ಣಿಸುವ ಮೂಲಕ ಬ್ರಿಟಿಷ್ ಚಕ್ರಾಧಿಪತ್ಯದ ಕರಾಳ ಮುಖವನ್ನು ಸಾಧುವಾಗಿಸಲು ಯಾರೇ ಹೊರಟರೂ ಬ್ರಿಟಿಷ್ ಸಾಮ್ರಾಜ್ಯವು ಒಂದು ಒಳ್ಳೆಯ ಆಧಿಪತ್ಯವಾಗಿರಲಿಲ್ಲ ಎಂಬ ವಿಷಯ ಹಾಗೆಯೇ ಉಳಿದು ಬಿಡುತ್ತದೆ.

ನಿಮಗೆ ಪುಟ್ಜರ್ ಪ್ರಶಸ್ತಿ ವಿಜೇತ, ಇತಿಹಾಸ ಪ್ರಾಧ್ಯಾಪಕ ಕಾರೋಲಿನ್ ಎಲ್ಕಿನ್ಸ್ ಅವರ ಪುಸ್ತಕ 'Legacy of Violence: A History of the British Empire' (ಹಿಂಸೆಯ ಪರಂಪರೆ: ಬ್ರಿಟಿಷ್ ಚಕ್ರಾಧಿಪತ್ಯದ ಒಂದು ಚರಿತ್ರೆ) ಅಥವಾ ಶಶಿತರೂರ್‌ರವರ "An Era of Darkness : The British Empire in India" (ಅಂಧಕಾರದ ಒಂದು ಯುಗ: ಭಾರತದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ) ಕೃತಿಗಳನ್ನು ಓದುವ ಅವಕಾಶ ಸಿಕ್ಕರೆ, ನಿಮಗೆ ಬ್ರಿಟಿಷರು ಭಾರತ ಉಪಖಂಡ ಹಾಗೂ ಇತರ ವಸಾಹತುಗಳ ಮೇಲೆ ನಡೆಸಿದ ದೌರ್ಜನ್ಯದ ಪರಿ ಹಾಗೂ ವಿಧ್ವಂಸಕತೆಯ ಭೀಕರತೆ ಮನವರಿಕೆ ಆಗುತ್ತದೆ. ಅರ್ಥಶಾಸ್ತ್ರಜ್ಞರಾದ ಉತ್ಸಾ ಪಟ್ನಾಯಕ್‌ರವರ ಸರಣಿ ಪ್ರಬಂಧಗಳು ಬ್ರಿಟಿಷ್ ಚಕ್ರಾಧಿಪತ್ಯವು ಭಾರತದ ಅರ್ಥ ವ್ಯವಸ್ಥೆಯನ್ನು ಹೇಗೆ ಲೂಟಿ ಮಾಡಿತು ಎಂಬುದನ್ನು ಮನದಟ್ಟು ಮಾಡುತ್ತದೆ. ಸ್ವಾಭಿಮಾನ ಹೊಂದಿದ ಯಾವೊಬ್ಬ ಭಾರತೀಯನೂ ನಮ್ಮ ಸರ್ಕಾರ ಬ್ರಿಟನ್ ರಾಣಿಗೆ ಶೋಕಾಚರಣೆ ಮಾಡಿದ ಪರಿಯಿಂದ ಕುಗ್ಗಿಹೋಗುತ್ತಾನೆ.

ಭಾರತ ಸರ್ಕಾರವು ಸೆಪ್ಟೆಂಬರ್ 11 ರಂದು ಬ್ರಿಟನ್ ರಾಣಿಗೆ ದೇಶಾದ್ಯಂತ ಶೋಕಾಚರಣೆ ಘೋಷಿಸಿತು. ಅಧಿಕೃತ ಪ್ರಕಟಣೆಯೊಂದರ ಪ್ರಕಾರ ಘನತೆವೆತ್ತ ರಾಣಿಗೆ ಗೌರವ ಸೂಚಕವಾಗಿ ಹೀಗೆ ಮಾಡಲಾಯಿತಂತೆ.

ಭಾರತ ಸಂವಿಧಾನದ 18 ನೇ ವಿಧಿಯು, ಮಹಾರಾಜ ಘನತೆವೆತ್ತ, ಮಹಾಪ್ರಭು ಮುಂತಾದ ಬಿರುದಾವಳಿಗಳನ್ನು ರದ್ದುಗೊಳಿಸಿದೆ. ಹಾಗಾದರೆ, ಭಾರತ ಸರ್ಕಾರವು ತನ್ನ ಅಧಿಕೃತ ಹೇಳಿಕೆಯಲ್ಲಿ ಬ್ರಿಟನ್ ರಾಣಿಯನ್ನು ಮಹಾರಾಣಿ (Her Majesty) ಎಂದು ಸಂಬೋಧಿಸಿರುವುದೇಕೆ?

ಒಳ್ಳೆಯದು, ಭಾರತದ ಮಾಧ್ಯಮಗಳು ಹಾಗೂ ವಿದ್ಯಾವಂತ ಭಾರತೀಯರೂ ಭಾರತದ ಹಿಂದಿನ ರಾಜಮನೆತನದ ಸದಸ್ಯರುಗಳನ್ನು ಸಂಬೋಧಿಸುವಾಗ ಘನತೆವೆತ್ತ ಮಹಾಪ್ರಭು, ಗೌರವಾನ್ವಿತ ಮುಂತಾದ ಗೌರವ ಸೂಚಕ ಪದಗಳು ಆಗಾಗ್ಗೆ ನುಸುಳುತ್ತವೆ ಎಂಬುದನ್ನು ಯಾರೊಬ್ಬನೂ ಒಪ್ಪಬೇಕು.

ಕಳೆದ ಭಾನುವಾರದಂದು ನವದೆಹಲಿಯ ಕೆಂಪು ಕೋಟೆ ಹಾಗೂ ರಾಷ್ಟ್ರಪತಿ ಭವನದಲ್ಲಿ ಭಾರತದ ರಾಷ್ಟ್ರಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸಲಾಯಿತು. ಭಾರತ ಸರ್ಕಾರವು ಬ್ರಿಟನ್ ರಾಣಿಯ ನಿಧನದ ಅಂಗವಾಗಿ ದೇಶಾದ್ಯಂತ ಶೋಕಾಚರಣೆಯನ್ನು ಘೋಷಿಸಿದ್ದು ಸಾಕಷ್ಟು ಮುಜುಗರವುಂಟು ಮಾಡಿದ್ದು ಸಾಲದೆಂಬಂತೆ ಮೈಸೂರು ಅರಮನೆಯ ದೀಪಾಲಂಕಾರವನ್ನು ಸಹ ಅಂದು ರದ್ದುಪಡಿಸಲಾಯಿತು.

ಬಿಜೆಪಿ ಸರ್ಕಾರವು, "ಸ್ವದೇಶಿ", "ಸ್ವರಾಜ್" ಮತ್ತು "ಸ್ವಾಭಿಮಾನ" ಪದಗಳನ್ನು ಯಥೇಚ್ಛವಾಗಿ ಬಳಸುವ ಮೂಲಕ ದೇಶಪ್ರೇಮದ ಮೇಲೆ ತನ್ನ "ಏಕಸ್ವಾಮ್ಯ" ಸಾಧಿಸಲು ಹೊರಟಂತಿದೆ.

ಈ ಸರ್ಕಾರವು, ನಮ್ಮ ನಗರಗಳ ಆಂಗ್ಲಮಯ ಹೆಸರುಗಳನ್ನು ಬದಲಾವಣೆ ಮಾಡಲು ಉತ್ಸುಕತೆಯಿಂದ ಇದೆ. ಇದು ಬ್ರಿಟಿಷ್ ಆಡಳಿತದ ಕುರುಹುಗಳನ್ನು ಅಳಿಸುವ ಮತ್ತೊಂದು ಪ್ರಯತ್ನವಾಗಿದೆ. ಆದರೆ, ಈಗ ಯಾವುದೇ ಹಿಂಜರಿಕೆ ಇಲ್ಲದೆ, ನಮ್ಮ ನಗರಗಳ ಹೆಸರುಗಳನ್ನು ವಿರೂಪಗೊಳಿಸಿದ್ದಕ್ಕೆ ಯಾವುದೇ ವಿಷಾದ ವ್ಯಕ್ತಪಡಿಸದ ಬ್ರಿಟಿಷ್ ಚಕ್ರಾಧಿಪತ್ಯದ ಮುಖ್ಯಸ್ಥೆಯಾಗಿದ್ದ ರಾಣಿ ಎಲಿಜಬೆತ್ ನಿಧನಕ್ಕೆ ಸರ್ಕಾರವು ಬೇಷರತ್ತಾಗಿ ರಾಷ್ಟ್ರೀಯ ಶೋಕವನ್ನು ಘೋಷಿಸಿದ್ದು, ಬಹಳ ಅಚ್ಚರಿಯ ಸಂಗತಿ.

ಕಳೆದ ವಾರ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಿಂಗ್ಸ್ ವೇ ಮಾರ್ಗದ ಹೆಸರನ್ನು (ದಿವಂಗತ ರಾಣಿ ಎಲಿಜಬೆತ್‌ರವರ ತಾತ ದೊರೆ ಜಾರ್ಜ್–5 ಸ್ಮರಣಾರ್ಥ ಈ ಹೆಸರನ್ನು ಇಡಲಾಗಿತ್ತು) "ಕರ್ತವ್ಯ ಪಥ" ಎಂಬುದಾಗಿ ಮರುನಾಮಕರಣ



ಮಾಡಿದ ವೇಳೆ ಹಿಂದೆ ಇದ್ದ (ವಸಾಹತು ಸಂಕೇತ) ಹೆಸರು "ಗುಲಾಮಗಿರಿಯ ಸಂಕೇತ"ವಾಗಿತ್ತು ಎಂದು ಹೇಳಿದ್ದರು.

ಈ ತಿಂಗಳಾರಂಭದಲ್ಲಿ, ಭಾರತದ ಪ್ರಥಮ ಸ್ವದೇಶಿ ನಿರ್ಮಿತ "ಏರ್ ಕ್ರಾಫ್ಟ್ ಕ್ಯಾರಿಯರ್ "INS Vikrant" ಲೋಕಾರ್ಪಣೆಗೊಳಿಸುವ ಸಂದರ್ಭದಲ್ಲಿ, ಹಿಂದೆ ಇದ್ದ ನೌಕಾಧ್ವಜ ಸೆಂಟ್ ಜಾರ್ಜ್ ಕ್ರಾಸ್ ಬದಲು, "ನಿಶಾನ್" ನೌಕಾಧ್ವಜವನ್ನು ಲೋಕಾರ್ಪಣೆ ಮಾಡಿದ ಸಂದರ್ಭದಲ್ಲಿ, ಪ್ರಧಾನಮಂತ್ರಿಗಳು, ದೇಶ ಈಗ ಗುಲಾಮಿತನದ ಹೊರೆಯನ್ನು ಇಳಿಸಿಕೊಂಡಿದೆ ಎಂದು ಹೇಳಿದ್ದರು.

ಹೀಗೆ, ಗುಲಾಮಗಿರಿ ಸಂಕೇತಗಳನ್ನು ಕಿತ್ತುಹಾಕಿದ ಕೆಲವೇ ದಿನಗಳ ನಂತರ ಹಾಗೂ ಭಾರತೀಯರಿಗೆ ಸ್ವಾತಂತ್ರ್ಯ ದೊರಕಿಸಿ ಕೊಡಲು ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಸಮರ ಸಾರುವ ಉದ್ದೇಶ ಹೊಂದಿದ್ದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಿದ ನಂತರ, ಈ ಸರ್ಕಾರವು ಬ್ರಿಟನ್ನಿನ ರಾಣಿಗೆ ದೇಶಾದ್ಯಂತ ಶೋಕಾಚರಣೆ ಘೋಷಿಸಿದೆ. ಇದು ದಿಗ್ಭ್ರಮೆಗೊಳಿಸುವಂತಹುದು.

ಹಿಂದಿನ ವಸಾಹತುಶಾಹಿಯ ಎಲ್ಲಾ ಘೋರ ಚರಿತ್ರೆಯನ್ನು ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಮರೆತು ನಾವು ನಿಧನ ಹೊಂದಿದ ವ್ಯಕ್ತಿಗೆ ಗೌರವ ಸೂಚಿಸಬೇಕೆಂದು ಪ್ರಧಾನಮಂತ್ರಿಗಳು ಹೇಳಿ, ಮಹಾರಾಣಿಯು, ಒಂದು ಗೌರವಯುತವಾದ ಅಂತಿಮ ಬೀಳ್ಕೊಡುಗೆಗೆ ಅರ್ಹರಾಗಿದ್ದಾರೆ ಎಂದು ಹೇಳಿದರು.

ಹೌದು, ಮೃತ ವ್ಯಕ್ತಿಯು ಗೌರವಯುತವಾದ ಬೀಳ್ಕೊಡುಗೆಗೆ ಅರ್ಹರಾಗಿದ್ದಾರೆ ಹಾಗೂ ಶಿಷ್ಟಾಚಾರದ ಪ್ರಕಾರ, ದೇಶದ ಮುಖ್ಯಸ್ಥರು ತಮ್ಮ ಶೋಕವನ್ನು ವ್ಯಕ್ತಪಡಿಸಬಹುದು, ಆದರೆ ಈ ದೇಶ ಹಾಗೂ ಅದರ ಜನತೆ ಅಧಿಕೃತವಾಗಿ ಅವರ ನಿಧನಕ್ಕೆ ಏಕೆ ಶೋಕಾಚರಣೆ ಮಾಡಬೇಕು?

ರಾಣಿಗಾಗಿ ಶೋಕಾಚರಣೆ ಅಷ್ಟೇ, ಆದರೆ ಸಾಮ್ರಾಜ್ಯಕ್ಕೆ ಅಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಸಾಮ್ರಾಜ್ಯ ಇಲ್ಲದೆ ಹೋಗಿದ್ದರೆ, ಅವರು ರಾಣಿಯಾಗಿರುತ್ತಿರಲಿಲ್ಲ. ಆದ್ದರಿಂದ, ನಾವು ಇಷ್ಟಪಡುತ್ತೇವೆಯೋ ಇಲ್ಲವೋ, ಅವರು ಬ್ರಿಟಿಷ್ ಸಾಮ್ರಾಜ್ಯದ ಮುಖ್ಯಸ್ಥೆಯಾಗಿದ್ದರು. ಈ ಸಾಮ್ರಾಜ್ಞೆಯು ಅವರ ಪೂರ್ವಜರು ಮಾಡಿದ ಪಾಪಕೃತ್ಯಗಳಿಗೆ ಕ್ಷಮೆಯನ್ನು ಎಂದೂ ಯಾಚಿಸಿದವರಲ್ಲ.

1997 ರಲ್ಲಿ 2ನೇ ಎಲಿಜಬೆತ್ ರಾಣಿ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಪ್ರತಿಯೊಬ್ಬರೂ, ಬ್ರಿಟನ್ ರಾಣಿಯು ಭಾರತದಲ್ಲಿ ಬ್ರಿಟಿಷರು ನಡೆಸಿದ ದೌರ್ಜನ್ಯಕ್ಕೆ ದೇಶದ ಜನರಲ್ಲಿ ರಾಣಿಯು ಕ್ಷಮೆ ಯಾಚಿಸುತ್ತಾರೆ ಎಂದು ಭಾವಿಸಿದ್ದರು.

ಆದರೆ ರಾಣಿ ಹೇಳಿದ್ದಿಷ್ಟೆ; "ನಮ್ಮ ಹಿಂದಿನ ಇತಿಹಾಸದಲ್ಲಿ ಕೆಲವು ಕಷ್ಟಕರವಾದ ಸಂದರ್ಭಗಳಿದ್ದವು. ಅವುಗಳ ಪೈಕಿ ಒಂದಾದ ಜಲಿಯನ್ ವಾಲಾಬಾಗಿಗೆ ನಾನು ನಾಳೆ ಭೇಟಿ ನೀಡುತ್ತೇನೆ. ಇದೊಂದು ನೋವುಂಟು ಮಾಡುವ ಸಂಗತಿ. ಆದರೆ ಚರಿತ್ರೆಯನ್ನು ಪುನಃ ಬರೆಯಲು ಸಾಧ್ಯವಿಲ್ಲ. ಆದರೂ, ಕೆಲವು ವೇಳೆ ಬೇರೆ ರೀತಿಯಲ್ಲಿ ನಾವು ಭಾವಿಸಬಹುದು.

ಖಂಡಿತ, ಚರಿತ್ರೆಯನ್ನು ಪುನಃ ಬರೆಯಲು ಸಾಧ್ಯವಿಲ್ಲ. ಆದರೆ, ಕ್ಷಮಾಯಾಚನೆಯು, ಹಿಂದೆ ಆಗಿದ್ದು ಆಗಬಾರದಿತ್ತು ಎಂಬುದರ ದ್ಯೋತಕವಾಗಿದೆ. ಆದರೆ ಅವರೇಕೆ ಕ್ಷಮೆ ಯಾಚಿಸಲಿಲ್ಲ? ಹಣದ ವಿಚಾರವೆ.

ಇದಕ್ಕೆ ಬ್ರಿಟನ್ನಿನ ವಿದೇಶಾಂಗ ಕಚೇರಿಯ ಸಚಿವ ಮಾರ್ಕ್ ಫೀಲ್ಡ್ ಹೇಳಿಕೆಯೇ ಸಾಕ್ಷಿ. ಅವರು ಹೇಳುತ್ತಾರೆ "ಕ್ಷಮಾಪಣೆ ಕೋರಿಕೆಯು ಹಣಕಾಸಿನ ಪರಿಣಾಮಗಳನ್ನು ಹೊಂದಿರಬಹುದು"

ಇದಕ್ಕಿಂತ ಕೆಟ್ಟ ಸಂಗತಿ ಎಂದರೆ, ಜಲಿಯನ್ ವಾಲಾಬಾಗ್ ಸ್ಮಾರಕಕ್ಕೆ ಅವರು ಭೇಟಿ ನೀಡಿದ ನಂತರ ಏನು ನಡೆಯಿತು ಎಂಬುದು. ಹೊರಗೆ ಹೋಗುವಾಗ, ರಾಣಿಯ ಪತಿ ರಾಜ ಫಿಲಿಪ್, ಒಂದೆಡೆ ನಿಂತು ಅಲ್ಲಿನ ಅಧಿಕಾರಿಯೊಬ್ಬರನ್ನು ಏನೋ ವಿಚಾರಿಸುತ್ತಿದ್ದರು.

ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಬಲಿಯಾದ ಭಾರತೀಯರ ಸಂಖ್ಯೆಯ ಬಗ್ಗೆ ಅವರಿಗೆ ನಂಬಿಕೆ ಇರಲಿಲ್ಲವೆಂದು ತೋರುತ್ತದೆ. ಅವರು ಕೇಳಿದರು; ಎರಡು ಸಾವಿರ? ಅದು ಅಷ್ಟೋ, ಆಗಿರಲಿಕ್ಕಿಲ್ಲ? ಅದು ತಪ್ಪು. ಆಗ ನಾನು ಡೈಯರ್‌ರವರ ಮಗನ ಜೊತೆ ನೌಕಾಪಡೆಯಲ್ಲಿದ್ದೆ. (ಕರ್ನಲ್ ರೆಗಿನಾಲ್ಡ್ ಡೈಯರ್ ಜಲಿಯನ್ ವಾಲಾಬಾಗ್‌ನಲ್ಲಿ ಗುಂಡು ಹಾರಿಸಲು ಆದೇಶ ನೀಡಿದ್ದರು). ಅದನ್ನು ಸ್ವಲ್ಪ ವೈಭವೀಕರಿಸಲಾಗಿದೆ.... ಇದರಲ್ಲಿ ಗಾಯಗೊಂಡವರು ಸೇರಿರಬಹುದು.

ಅಸಂವೇದನಾಶೀಲ ಬ್ರಿಟಿಷ್ ಚಕ್ರಾಧಿಪತ್ಯವು ಈ ರೀತಿಯಲ್ಲಿ ತನ್ನ ದೌರ್ಜನ್ಯಗಳನ್ನು ಸಮರ್ಥಿಸಿಕೊಳ್ಳುತ್ತದೆ. ಹಾಗೂ ಸರ್ಕಾರವು ಅಂತಹ ಚಕ್ರಾಧಿಪತ್ಯದ ಮುಖ್ಯಸ್ಥೆಯ ನಿಧನಕ್ಕೆ ಶೋಕಾಚರಣೆ ಘೋಷಿಸುತ್ತದೆ? ಅಷ್ಟು ಮಾತ್ರವಲ್ಲ ನಮ್ಮ ರಾಷ್ಟ್ರಪತಿಗಳು ರಾಣಿಯ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ನಮ್ಮ ದೇಶದಿಂದ ಲೂಟಿ ಹೊಡೆದ ಸಂಪತ್ತಿನಿಂದ ತಮ್ಮ ತಂಪಾದ ಪುಟ್ಟ ದ್ವೀಪವನ್ನು ಶ್ರೀಮಂತವಾಗಿಸಿದ ತಮ್ಮ ರಾಜಪ್ರಭುತ್ವಕ್ಕೆ ಆಭಾರಿಯಾಗಿರಬೇಕಾಗಿದ್ದ ಯುವ ಬ್ರಿಟಿಷರು ಅದನ್ನು ಲೆಕ್ಕಿಸುವುದೇ ಇಲ್ಲ. ಹಾಗಿದ್ದರೆ, ನಾವು ಭಾರತೀಯರಿಗೇಕೆ ಈ ಉಸಾಬರಿ. ವಾಸ್ತವವಾಗಿ, ಬ್ರಿಟನ್ನಿನ ಈಗಿನ ಪ್ರಧಾನಮಂತ್ರಿ ಲಿಜ್ ಟ್ರುಸ್‌ರವರು ಹೇಳಿದ್ದಾರೆ : "ನಾನು ಯಾರೊಬ್ಬರ ವಿರುದ್ಧವೂ (ರಾಜಮನೆತನ) ಇಲ್ಲ. ನಾನು ಆಳಲೆಂದೇ ಜನರು ಹುಟ್ಟಬಹುದು ಎಂಬುದರ ವಿರುದ್ಧವಾಗಿದ್ದೇನೆ. ಇದೊಂದು ನಾಚಿಕೆಗೇಡಿನ ಸಂಗತಿಯೆಂದು ನಾನು ನಂಬುತ್ತೇನೆ."

ಬ್ರಿಟಿಷರು ನಮ್ಮ ಮೇಲೆ ನಡೆಸಿದ ದೌರ್ಜನ್ಯಗಳನ್ನು ನಾವು ಮರೆತಿದ್ದೇವೆಯೇ–200 ವರ್ಷಗಳ ಅವರ ಆಡಳಿತ ಅವಧಿಯಲ್ಲಿ ಮಿಲಿಯನ್‌ಗಟ್ಟಲೆ ಜನರನ್ನು ಕೊಂದಿದ್ದು, ಹಸಿವು, ಕ್ಷಾಮ, ವಿಭಜನೆ, ಗುಲಾಮರು, ಮಾರಾಟ, ನೇಣು ಹಾಕುವುದು ಮತ್ತು ಅತಿರೇಕದ ಗುಂಡಿನ ದಾಳಿಗಳು ಚರಿತ್ರೆಯಲ್ಲಿ ಹಾಸುಹೊಕ್ಕಾಗಿದೆ.

ಈಗಾಗಲೇ ನಾವು ಸ್ವಾತಂತ್ರ್ಯ ಪಡೆದು 75 ವರ್ಷಗಳಾಗಿದ್ದು, ನಾವು ಪ್ರಪಂಚದ ಚಕ್ರಾಧಿಪತ್ಯಗಳ ಮುಂದೆ ತಲೆ ಎತ್ತಿ ನಿಲ್ಲುವಷ್ಟು ಸಾಮರ್ಥ್ಯ ಹೊಂದಿದ್ದೇವೆ. ಅಗತ್ಯ ಬಿದ್ದಾಗ ಅಂತಹವರಿಗೆ ತಕ್ಕ ಶಾಸ್ತಿ ಮಾಡುವಷ್ಟರ ಮಟ್ಟಿಗೆ ನಾವು ಸಮರ್ಥವಾಗಿದ್ದೇವೆ.

ನಾವು ಅಧೀನತೆ ನಿದ್ರಾವಸ್ಥೆಯಿಂದ ಎಚ್ಚರಗೊಳ್ಳಬೇಕಿದೆ. ನಮ್ಮನ್ನು ನಾವು ಗೌರವಿಸಿಕೊಳ್ಳದಿದ್ದರೆ, ಬೇರೆಯವರಿಗೆ ನಮ್ಮನ್ನು ಗೌರವಿಸುವ ಅಗತ್ಯ ಇರುವುದಿಲ್ಲ. ಮಹಾತ್ಮ ಗಾಂಧೀಜಿಯವರು ಹೇಳಿರುವ ಹಾಗೆ : "ದೈಹಿಕವಾಗಿ ಯಾವನೇ ಪುರುಷ ಅಥವಾ ಮಹಿಳೆ ಎಷ್ಟೇ ಬಲಹೀನರಾಗಿದ್ದರೂ, ಅವನ ಇಲ್ಲ ಅವಳ ಆತ್ಮ ಗೌರವಕ್ಕೆ ಮತ್ತು ಸ್ವಾತಂತ್ರ್ಯಕ್ಕೆ ಅವರೇ ರಕ್ಷಕರಾಗಿರುತ್ತಾರೆ".

email : vikram@starofmysore.com

ಪೇಸಿಎಂ ಅಭಿಯಾನದಿಂದ ರಾಜ್ಯದ ಘನತೆ ಹಾಳು

ಬೆಂಗಳೂರು,ಸೆ.24(ಕೆಎಂಶಿ)–ಪೇಸಿಎಂ ಅಭಿಯಾನದ ಮೂಲಕ ಕಾಂಗ್ರೆಸ್ ನಾಯಕರು ರಾಜ್ಯ ರಾಜಕೀಯದ ಘನತೆಯನ್ನು ಮಣ್ಣುಪಾಲು ಮಾಡಿದ್ದಾರೆ. ಅಧಿಕಾರ ಕಳೆದುಕೊಂಡು ಹತಾಶರಾಗಿರುವ ಕಾಂಗ್ರೆಸ್ ನಾಯಕರು ವೈಯಕ್ತಿಕ ಲಾಭಕ್ಕಾಗಿ ಹೀಗೆ ಮಾಡುತ್ತಿದ್ದಾರೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ದೇಶದಲ್ಲಿ ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್ ನಾಯಕರು ಇಂತಹ ಕೀಳುಮಟ್ಟದ ರಾಜಕೀಯ ಮಾಡುವುದರಲ್ಲಿ ನಿಸ್ಸೀಮರೆಂದು ಸಾಬೀತು ಮಾಡಿ ಬೆತ್ತಲಾಗಿದ್ದಾರೆ. ಆದರೆ ಅವರು ಏನೇ ಮಾಡಿದರೂ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಅನಿಲ್ ಅಯ್ಯರ್ ಎಂಬುವರ ಹೆಸರನ್ನೂ ದುರ್ಬಳಕೆ ಮಾಡಿಕೊಂಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಹೇಳಿದ್ದಾರೆ. ಕಾಂಗ್ರೆಸ್‌ನವರು ಸತ್ಯ ಹರಿಶ್ಚಂದ್ರರಂತೆ ವರ್ತನೆ ಮಾಡುತ್ತಿದ್ದಾರೆ. ಆದರೆ ಅವರ ಹಿರಿಯ ನಾಯಕರೇ ಜಾಮೀನು ಮೇಲೆ ಹೊರಗಿದ್ದಾರೆ. ಭ್ರಷ್ಟಾಚಾರದಿಂದಲೇ ಕಾಂಗ್ರೆಸ್ ಅಧಿಕಾರ ಕಳೆದುಕೊಂಡಿದೆ. ಇವರಿಗೆ ಯಾವ ನೈತಿಕತೆ ಇದೆ ಎಂದರು.

ಪದೇಪದೆ 40% ಕಮಿಷನ್ ಬಗ್ಗೆ ಹೇಳಿದರೆ ಜನರು ನಂಬುತ್ತಾರೆ ಎಂದು ಕಾಂಗ್ರೆಸ್ ತಿಳಿದಿದೆ. ಸಿಎಂ ಬಸವರಾಜ ಬೊಮ್ಮಾಯಿ ಅವರ ಶುದ್ಧ ಆಡಳಿತ ಜನರಿಗೆ ತಿಳಿದಿದೆ. ಅವರು ಜನಸಾಮಾನ್ಯರ ಸಿಎಂ ಎಂಬುದು ಜನರಿಗೆ ಗೊತ್ತಿದೆ. ಮುಖ್ಯಮಂತ್ರಿಗಳು ಒಳ್ಳೆಯ ಆಡಳಿತವನ್ನು ನೀಡುವುದನ್ನು, ಕಾಂಗ್ರೆಸ್‌ಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮಾಜಿ ಮುಖ್ಯಮಂತ್ರಿಯೊಬ್ಬರು ಹೋಗಿ ಪೋಸ್ಟರ್ ಅಂಟಿಸುವುದನ್ನು 75 ವರ್ಷಗಳ ಇತಿಹಾಸದಲ್ಲೇ ನೋಡಿಲ್ಲ ಎಂದರು.

ಕಾಂಗ್ರೆಸ್ ಹಿಂದಿನಿಂದಲೂ ಪ್ರಬಲ ಸಮುದಾಯದವರ ವಿರುದ್ಧ ಕೆಲಸ ಮಾಡುತ್ತಿದೆ. ಹಿಂದೆ ವೀರೇಂದ್ರ ಪಾಟೀಲ್, ಕೆಂಗಲ್ ಹನುಮಂತಯ್ಯ ಅವರ ವಿರುದ್ಧ ಕಾಂಗ್ರೆಸ್ ಹೀಗೆಯೇ ಕೆಲಸ ಮಾಡಿತ್ತು. ಅದರಲ್ಲೂ ಲಿಂಗಾಯತ ಸಮುದಾಯದವರ ವಿರುದ್ಧ ಕಾಂಗ್ರೆಸ್‌ನವರು ಕೆಲಸ ಮಾಡುತ್ತಾರೆ. ಇದರಿಂದಾಗಿಯೇ ಅಧಿಕಾರಕ್ಕೆ ಬರುವ ಅಲ್ಪ ಅವಕಾಶವನ್ನೂ ಕಳೆದುಕೊಂಡಿದ್ದಾರೆ. ಜನಸಾಮಾನ್ಯರೇ ಕಾಂಗ್ರೆಸ್‌ಗೆ ಸರಿಯಾದ ಉತ್ತರ ನೀಡಲಿದ್ದಾರೆ. ಚುನಾವಣೆಯ ಸಮಯದಲ್ಲಿ ಜನರೇ ಕಾಂಗ್ರೆಸ್ ನಾಯಕರನ್ನು ಮನೆಗೆ ಕಳುಹಿಸುತ್ತಾರೆ ಎಂದರು.




ಮೈಸೂರು ಯುವ ಬಳಗ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಪೌರಕಾರ್ಮಿಕರೊಂದಿಗೆ ಕೇಕ್ ಕತ್ತರಿಸುವ ಮೂಲಕ ಪೌರಕಾರ್ಮಿಕರ ದಿನ ಆಚರಿಸಲಾಯಿತು. ಈ ವೇಳೆ ಪರಮೇಶ್‌ಗೌಡ, ಶ್ರೀನಿವಾಸ್, ಲಕ್ಷ್ಮಿ, ಸುದರ್ಶನ್, ಪ್ರಮೋದ್, ನವೀನ್, ರವಿ ಮತ್ತಿತರರು ಉಪಸ್ಥಿತರಿದ್ದರು.

ವಿಧಾನಮಂಡಲ ಅಧಿವೇಶನ ಮುಗಿದ ಬೆನ್ನಲ್ಲೇ

ವಿದ್ಯುತ್ ದರ ಏರಿಕೆ: ಹೆಚ್‌ಡಿಕೆ ಆಕ್ರೋಶ

ಬೆಂಗಳೂರು,ಸೆ.24(ಕೆಎಂಶಿ)–ವಿಧಾನಮಂಡಲ ಅಧಿವೇಶನ ಮುಗಿದ ಬೆನ್ನಲ್ಲೇ ವಿದ್ಯುತ್ ದರ ಏರಿಕೆ ಆಗಿದೆ. ಏನೀ ಹುನ್ನಾರ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸರ್ಕಾರಕ್ಕೆ ಪ್ರಶ್ನೆ ಮಾಡಿದ್ದಾರೆ.



ಈ ಕುರಿತು ಟ್ವೀಟ್ ಮಾಡಿರುವ ಅವರು, ನವರಾತ್ರಿ ಹಬ್ಬದ ಶುಭಾಶಯ ಹೇಳಬೇಕಿದ್ದ ಸರ್ಕಾರ, ಕರೆಂಟ್ ಶಾಕ್ ಕೊಟ್ಟು ಜನರು ಕಂಗೆಡುವಂತೆ ಮಾಡಿದೆ. ಪ್ರತಿ ಯೂನಿಟ್‌ಗೆ 24ರಿಂದ 43 ಪೈಸೆ ಹೆಚ್ಚಿಸಿರುವುದು ಅವೈಜ್ಞಾನಿಕ, ಅನಪೇಕ್ಷಿತ & ಖಂಡನೀಯ ಎಂದಿದ್ದಾರೆ. ಇಂಧನ ಹೊಂದಾಣಿಕೆ ಶುಲ್ಕದ ನೆಪದಲ್ಲಿ ರಾಜ್ಯ ಬಿಜೆಪಿ ಸರ್ಕಾರ ವಿದ್ಯುತ್ ದರ ಏರಿಸಿದೆ. ಕಳೆದ ಜುಲೈನಲ್ಲಿ ಬರೆ ಎಳೆದಿತ್ತು. ಈಗ ಮತ್ತೆ ದರ ಹೆಚ್ಚಿಸಿದೆ. ಕಲ್ಲಿದ್ದಲು ಬೆಲೆ ಹೆಚ್ಚಳದಿಂದ ವಿದ್ಯುತ್ ದರವನ್ನು ಏರಿಸಲಾಗುತ್ತಿದೆ ಎಂದು ಇಂಧನ ಸಚಿವರು ಹೇಳುವ ಮಾತು ಒಪ್ಪುವ ರೀತಿ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ತುಂಬಿವೆ. ವಿದ್ಯುತ್ ಉತ್ಪಾದನೆ ಉತ್ತಮವಾಗಿದೆ. ಆದರೂ ಖರೀದಿ ವೆಚ್ಚದಲ್ಲಿ 1,244 ಕೋಟಿ ಹೆಚ್ಚಳ ಆಗಿದೆ ಎನ್ನುವ ಲೆಕ್ಕವನ್ನು ನಂಬುವ ರೀತಿಯಲ್ಲಿ ಇಲ್ಲ. ಇಂಧನ ವಲಯದ ಕೆಲ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಎಸ್ಕಾಂಗಳ ಭುಜದ ಮೇಲೆ ಗುಂಡಿಟ್ಟು, ಜನರಿಗೆ ಹೊಡೆಯುವ ಕೆಲಸ ಆಗುತ್ತಿದೆ ಎಂದು ಕಿಡಿಕಾರಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರ ಜನರ ಪರ ಇಲ್ಲ ಎನ್ನುವುದು ಸತ್ಯ. ಜಾಗತಿಕ ಪೇಟೆಯಲ್ಲಿ ಕಚ್ಚಾತೈಲದ ಬೆಲೆ ನಿರಂತರ ಇಳಿದರೂ ದೇಶದಲ್ಲಿ ತೈಲಬೆಲೆ ಇಳಿಸದ ಕೇಂದ್ರ ಸರ್ಕಾರದ ಹಾದಿಯಲ್ಲೇ ರಾಜ್ಯ ಸರಕಾರವೂ ಸಾಗಿದೆ. ವಿದ್ಯುತ್ ದರದ ನಿರಂತರ ಏರಿಕೆ ಬಗ್ಗೆ ಗಂಭೀರ ಅನುಮಾನಗಳಿವೆ ಎಂದು ಅವರು ದೂರಿದ್ದಾರೆ. ವಿದ್ಯುತ್ ಸೋರಿಕೆ, ಕಳವು ತಡೆಲಾಗದ, ನವೀನ ತಂತ್ರಜ್ಞಾನ ಅಳವಡಿಸಿಕೊಳ್ಳದ ಬಿಜೆಪಿ ಸರ್ಕಾರ, ಅದಕ್ಷತೆಯ ಆಡಂಬೋಲ. "ಬಡವರನ್ನು ಸುಲಿದು ಬಿಸ್‌ನೆಸ್ ಕ್ಲಾಸಿನ ಜನರ ಜೇಬು ತುಂಬು" ಎನ್ನುವುದು ಬಿಜೆಪಿ ತತ್ವ. ಅದನ್ನೇ ಕರ್ನಾಟಕದಲ್ಲೂ ಎಗ್ಗಿಲ್ಲದೆ ಮಾಡುತ್ತಿದೆ ಎಂದು ಹೆಚ್‌ಡಿಕೆ ಟೀಕಿಸಿದ್ದಾರೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದಸರಾ ಉದ್ಘಾಟನೆ ವೇಳೆ ದರ್ಶನಕ್ಕೆ ನಿರ್ಬಂಧ



ಮೈಸೂರು, ಸೆ.24– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಚಾಮುಂಡಿ ಬೆಟ್ಟದಲ್ಲಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡುವ ಹಿನ್ನೆಲೆಯಲ್ಲಿ ಸೆ.26ರಂದು ಬೆಳಗ್ಗೆ 11.30ರವರೆಗೆ ದೇವರ ದರ್ಶನಕ್ಕೆ ನಿರ್ಬಂಧ ವಿಧಿಸಲಾಗಿದೆ. ಆದರೆ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಕಾರ್ಯಕ್ರಮದ ನಂತರ ಎಂದಿನಂತೆ ದೇವಾಲಯಕ್ಕೆ ಪ್ರವೇಶ ಇರಲಿದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

30 ಕೇಸ್ ಎದುರಿಸಿದ್ದೇವೆ; ಯಾವನಿಗೂ ಹೆದರಿ ಓಡಿ ಹೋಗುವ ಪ್ರಶ್ನೆಯೇ ಇಲ್ಲ



ಬೆಂಗಳೂರು, ಸೆ.24– ಯಡಿಯೂರಪ್ಪ ಮೇಲಿನ ಭ್ರಷ್ಟಾಚಾರ ಆರೋಪದಲ್ಲಿ 0.1% ಸತ್ಯವೂ ಇಲ್ಲ. ನಾವು ಹೆದರಿ ಓಡಿ ಹೋಗುವುದಿಲ್ಲ. 30 ಕೇಸ್ ಈಗಾಗಲೇ ಎದುರಿಸಿದ್ದು, ಇದು 31ನೇ ಕೇಸ್. ಯಾವನಿಗೂ ಹೆದರಿ ಓಡಿ ಹೋಗುವ ಪ್ರಶ್ನೆ ಉದ್ಭವ ಆಗುವುದಿಲ್ಲ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿವೈ ವಿಜಯೇಂದ್ರ ಹೇಳಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು, ನ್ಯಾಯಾಲಯದ ಮೇಲೆ ನಮಗೆ ವಿಶ್ವಾಸ ಇದೆ. ಯಡಿಯೂರಪ್ಪ ಮತ್ತು ನನ್ನನ್ನು ರಾಜಕೀಯವಾಗಿ ಮುಗಿಸಲು ಕುತಂತ್ರ ಮಾಡಲಾಗಿದೆ. ಇದಕ್ಕೆ ತಕ್ಕ ಉತ್ತರವನ್ನು ಎಲ್ಲಿ ಕೊಡಬೇಕು, ಯಾರಿಗೆ ಕೊಡಬೇಕು ಎನ್ನುವುದು ಗೊತ್ತಿದೆ. ನಮ್ಮ ವಿರುದ್ಧ ರಾಜಕೀಯ ವಿರೋಧಿಗಳು ಷಡ್ಯಂತ್ರ ಮಾಡಿದ್ದಾರೆ. ಆ ರಾಜಕೀಯ ವಿರೋಧಿಗಳು ಪಕ್ಷದವರಾ? ಹೊರಗಿನವರಾ ಎಂಬುದನ್ನು ನಾನು ಹೇಳಲ್ಲ. ಅವರು ರಾಜಕೀಯ ವಿರೋಧಿಗಳು ಅಂತ ಮಾತ್ರ ಹೇಳುತ್ತೇನೆ, ನೀವೇ ಅರ್ಥ ಮಾಡಿಕೊಳ್ಳಿ ಎಂದರು.

ರಾಜಕೀಯ ವಿರೋಧಿಗಳ ಷಡ್ಯಂತ್ರ ಮೆಟ್ಟಿ ನಿಲ್ಲುವ ಧೈರ್ಯ ತಾಕತ್ತು ಶಕ್ತಿಯನ್ನು ಆ ದೇವರು ನನಗೆ ಕೊಟ್ಟಿದ್ದಾನೆ. ಆ ಬುದ್ಧಿಶಕ್ತಿಯೂ ನಮಗೆ ಇದೆ. ಇಂಥ ಇನ್ನೂ ನೂರು ಆರೋಪ ಬಂದರೂ ಎದುರಿಸ್ತೇನೆ. ಅದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ರಾಜಕೀಯ ವಿರೋಧಿಗಳೆಲ್ಲರ ಕೈವಾಡ ಇದರಲ್ಲಿದ್ದು ಬಿಜೆಪಿಯವರ ಕೈವಾಡ ಇದೆ ಅಂತ ನಾನು ಹೇಳುತ್ತಿಲ್ಲ ಎಂದರು. ನನಗೂ ಕೂಡ ರಾಜಕೀಯವಾಗಿ ಬೆಳೆಯುತ್ತಿರುವ ಸಂದರ್ಭ ಇದಾಗಿದ್ದು, ಈ ರೀತಿಯ ಸವಾಲುಗಳು ಬಂದಾಗ ನಮಗೂ ಬೆಳೆಯಲು ಸುಲಭವಾಗುತ್ತದೆ. ಈ ಸವಾಲುಗಳನ್ನು ಬಹಳ ಸಂತೋಷದಿಂದ ನಾನು ಎದುರಿಸುತ್ತೇನೆ. ಯಡಿಯೂರಪ್ಪರನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನ ಮಾಡಿದ್ದರು. ಆದರೆ ಅವರು ರಾಜ್ಯದ ಮುಖ್ಯಮಂತ್ರಿ ಆಗುವುದನ್ನು ಯಾರಿಂದಲೂ ತಪ್ಪಿಸಲು ಆಗಲಿಲ್ಲ. ರಾಜಕೀಯ ವಿರೋಧಿಗಳು ಏನೇ ಷಡ್ಯಂತ್ರ ಮಾಡಿದರೂ ಯಶಸ್ವಿಯಾಗಲ್ಲ ಎಂದರು.

ಬ್ರಾಂಡೆಡ್ ಉಡುಪುಗಳ ರಿಯಾಯಿತಿ ಮಾರಾಟಕ್ಕೆ ಉತ್ತಮ ಪ್ರತಿಕ್ರಿಯೆ



ಮೈಸೂರು, ಸೆ.24– ನಗರದ ಹೋಟೆಲ್ ಸದರ್ನ್ ಸ್ಟಾರ್‌ನಲ್ಲಿ ಆಯೋಜನೆಗೊಂಡಿರುವ ಅಂತಾರಾಷ್ಟ್ರೀಯ ಗುಣಮಟ್ಟದ ಬ್ರಾಂಡೆಡ್‌ಗಳ ಬೃಹತ್ ರಿಯಾಯಿತಿ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಭಾರಿ ಬೇಡಿಕೆ ಹಾಗೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಮಾರಾಟವನ್ನು ಕೇವಲ 3 ದಿನಗಳಿಗೆ ವಿಸ್ತರಿಸಲಾಗುತ್ತಿದ್ದು, ಇಂದಿನಿಂದ ಅಂದರೆ ಸೋಮವಾರ, ಮಂಗಳವಾರ ಮತ್ತು ಬುಧವಾರದವರೆಗೆ ಮಾತ್ರ ಈ ಇರುತ್ತದೆ.

ಮಹಿಳೆಯರ, ಪುರುಷರ, ಮಕ್ಕಳ ಸಿದ್ಧ ಉಡುಪುಗಳ ಬ್ರಾಂಡೆಡ್ ಬಟ್ಟೆಗಳು, ಪಾದರಕ್ಷೆ ಮತ್ತು ಬೆಡ್‌ಶೀಟ್‌ಗಳ ಮೇಳವನ್ನು ಸಾರ್ವಜನಿಕರು ತಂಡೋಪತಂಡವಾಗಿ ಬಂದು ವೀಕ್ಷಿಸುತ್ತಿದ್ದಾರೆ. ಉತ್ತಮ ಬ್ರಾಂಡ್‌ಗಳ ಬಟ್ಟೆಗಳು ಶೇ.80ರಷ್ಟು ರಿಯಾಯಿತಿವರೆಗೂ ಇಲ್ಲಿ ಲಭ್ಯವಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಟೀ ಶರ್ಟ್ಸ್, ಲೋವರ್ ಟಾಪ್, ಬರ್ಮುಡಾ, ಕೇಪ್ರಿ, ಫ್ಲಾಜೋಗಳು ಕೇವಲ 150 ರೂ.ನಿಂದ 350 ರೂ.ಗೆ ಲಭ್ಯ. ಸುಮಾರು 25 ಸಾವಿರಕ್ಕೂ ಅಧಿಕ ಬಗೆಯ ಪುರುಷರ ಸಿದ್ಧ ಉಡುಪುಗಳು ಇಲ್ಲಿವೆ. ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಪಾರ್ಟಿವೇರ್, ಆಫೀಸ್ ವೇರ್, ಕ್ಯಾಷುಯಲ್ 499ರಿಂದ 999 ರೂ.ವರೆಗೆ ಲಭ್ಯ. ಮಹಿಳೆಯರ ತರಹೇವಾರಿ ಉಡುಪುಗಳು ಮೇಳದಲ್ಲಿವೆ. ಸುಮಾರು 20 ಸಾವಿರಕ್ಕೂ ಅಧಿಕ ಬಗೆಯ ಬಗೆ ಬಗೆಯ ಉಡುಪುಗಳು ಆಕರ್ಷಣೆಯ ಕೇಂದ್ರಬಿಂದುವಾಗಿದೆ. ಕುರ್ತೀಸ್, ಪಾರ್ಟಿವೇರ್, ಎಂಬ್ರಾಯಡರಿ ರಯಾನ್ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್ ಶರ್ಟ್ ಸೇರಿದಂತೆ ಹಲವು ಬಗೆಯ ಉಡುಪುಗಳು 200ರೂ.ನಿಂದ 400 ರೂ.ವರೆಗೆ ಲಭ್ಯ. ಇದರೊಂದಿಗೆ 2,999 ರೂ. ಮೌಲ್ಯದ ಶೂಗಳು ಕೇವಲ 400 ರೂ.ನಿಂದ 500 ರೂ.ವರೆಗೆ ಲಭ್ಯವಿದೆ. ರಾಜಸ್ಥಾನಿ ರಾಯಲ್ ಪ್ರಿಂಟೆಡ್ ಬೆಡ್‌ಶೀಟ್, ದಿಂಬಿ ಹೊದಿಕೆ, ಸೋಫಾ ಕವರ್ ಸೇರಿದಂತೆ ಹಲವು ಬಗೆಯ ಗೃಹಾಲಂಕಾರ ವಸ್ತುಗಳು ಇಲ್ಲಿವೆ. ಮೇಳಕ್ಕೆ ಬರುವವರಿಗೆ ಉಚಿತ ಪಾರ್ಕಿಂಗ್ ಸೌಲಭ್ಯವೂ ಇದೆ ಎಂದು ಆಯೋಜಕರು ತಿಳಿಸಿದ್ದಾರೆ.

ಮೂರನೇ ಪುಟದಿಂದ

ದಸರೆಗೆ ಆಹ್ವಾನ

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಯಿತು. ಇದೇ ವೇಳೆ ಪ್ರಮೋದಾದೇವಿ ಅವರನ್ನು ಅಭಿನಂದಿಸಿದ ಸಚಿವ ಎಸ್.ಟಿ. ಸೋಮಶೇಖರ್, ಸರ್ಕಾರದ ವತಿಯಿಂದ ಕೊಡಮಾಡುವ ಗೌರವ ಧನವನ್ನು ಹಸ್ತಾಂತರಿಸಿದರು. ಈ ವೇಳೆ ಮೇಯರ್ ಎಂ.ಶಿವಕುಮಾರ್, ಉಪಮೇಯರ್ ಜಿ.ರೂಪಾ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು. ಸಿದ್ದಲಿಂಗಸ್ವಾಮಿ, ಕಾಡಾ ಅಧ್ಯಕ್ಷ ಬಿ.ನಿಜಗುಣರಾಜು, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ಪಾಲಿಕೆ ಎಡಿಸಿ ಎಂ.ಜೆ.ರೂಪಾ ಮತ್ತಿತರರು ಉಪಸ್ಥಿತರಿದ್ದರು.

ವೇದಿಕೆಯಲ್ಲಿ 13 ಮಂದಿಗಷ್ಟೇ ಅವಕಾಶ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಚಾಮುಂಡಿಬೆಟ್ಟದಲ್ಲಿ ಸೆ.26ರಂದು ಬೆಳಗ್ಗೆ 9.45ಕ್ಕೆ ದಸರಾ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಆ ವೇಳೆ ನಡೆಯುವ ಸಭಾ ಕಾರ್ಯಕ್ರಮದ ವೇದಿಕೆಯಲ್ಲಿ ರಾಷ್ಟ್ರಪತಿ ಸೇರಿ 13 ಮಂದಿಗೆ ಮಾತ್ರ ಅವಕಾಶ ನೀಡಲಾಗಿದೆ. ಈ ಸಂಬಂಧ ನಿರ್ದೇಶನ ಬಂದಿದ್ದು ರಾಷ್ಟ್ರಪತಿ, ರಾಜ್ಯಪಾಲರು, ಮುಖ್ಯಮಂತ್ರಿಗಳು, 6 ಕೇಂದ್ರ ಸಚಿವರು ಹಾಗೂ ನಾಲ್ವರು ರಾಜ್ಯ ಸಚಿವರಿಗೆ ವೇದಿಕೆಯಲ್ಲಿ ಆಸನ ವ್ಯವಸ್ಥೆ ಮಾಡಲಾಗುವುದು.

–ಎಸ್.ಟಿ.ಸೋಮಶೇಖರ್, ಸಚಿವ

ಬಳಿಕ ಸಚಿವ ಸೋಮಶೇಖರ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ನಾನು ಉಸ್ತುವಾರಿ ಸಚಿವನಾಗಿ 3ನೇ ದಸರಾ ಮಹೋತ್ಸವದಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ. ಇಂದು ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಅವರನ್ನು ಭೇಟಿ ಮಾಡಿ ಜಿಲ್ಲಾಡಳಿತದ ವತಿಯಿಂದ ದಸರಾಗೆ ಅಧಿಕೃತ ಆಹ್ವಾನ ನೀಡಿದ್ದೇವೆ. ಕಳೆದೆರಡು ವರ್ಷಗಳಂತೆ ಈ ಬಾರಿಯೂ ರಾಜಮನೆತನದಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದರು.


ವಿಧಾನಮಂಡಲ ಅಧಿವೇಶನ, ರಾಷ್ಟ್ರಪತಿಯವರನ್ನು ಭೇಟಿ ಮಾಡಿ ದಸರಾ ಉದ್ಘಾಟನೆಗೆ ಆಹ್ವಾನಿಸುವುದು ಇನ್ನಿತರ ಕಾರ್ಯದೊತ್ತಡವಿತ್ತು. ಆದರೆ ದಸರಾ ಉಪ ಸಮಿತಿಗಳು ತಮ್ಮ ವ್ಯಾಪ್ತಿಯ ಕರ್ತವ್ಯವನ್ನು ನಿರ್ವಹಿಸಿದ್ದು, ದಸರೆಗೆ ಯೋಜಿತವಾಗಿಯೇ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ದಸರಾ ಪ್ರಚಾರದಲ್ಲೂ ಕೊರತೆಯಾಗಿಲ್ಲ. ಸದ್ಯ ಉಪ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಿದ್ದು, ಎಲ್ಲರೂ ಸಮನ್ವಯತೆಯಿಂದ ಕೆಲಸ ಮಾಡಲಿದ್ದಾರೆ. ಎಲ್ಲರ ಸಹಕಾರದಿಂದ ದಸರಾ ಮಹೋತ್ಸವವನ್ನು ನೆರವೇರಿಸಲಾಗುವುದು ಎಂದರು.

ದಸರಾಗೆ ಬರುತ್ತಾರೆ: ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರು ದಸರಾ ಸಂಬಂಧಿತ ಕಾರ್ಯಕ್ರಮಗಳಲ್ಲಿ ಭಾಗಿಯಾಗದಿರುವ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ರಾಮದಾಸ್ ಅವರು 'ಮೋದಿ ಯುಗ ಉತ್ಸವ' ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪ್ರತಿನಿತ್ಯ ಸಂಬಂಧಪಟ್ಟ ಸಚಿವರು ಭಾಗಿಯಾಗುತ್ತಿದ್ದಾರೆ. ಆ ಕಾರಣದಿಂದ ಈವರೆಗೆ ದಸರಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಾಗಿಲ್ಲ. ಆದರೆ ಅವರೊಂದಿಗೆ ನಾನು ಮಾತನಾಡಿದ್ದೇನೆ. ದಸರಾ ಉದ್ಘಾಟನೆ ಇನ್ನಿತರ ಕಾರ್ಯಕ್ರಮಗಳಿಗೆ ಬರಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ
25-9-2022

ಪುಟ: 6&7




ಆಹಾ, ದಸರಾ

ಬನ್ನೂರು ಕೆ.ರಾಜು
ಮೊ. 9481533167

ಈ ಬಾರಿಯ ಮೈಸೂರು ದಸರಾ ಮಹೋತ್ಸವ ಸೋಮವಾರ(ಸೆ.26) ಆರಂಭವಾಗಲಿದ್ದು, ಅ.5ರಂದು ಜಂಬೂ ಸವಾರಿಯೊಂದಿಗೆ ಮುಕ್ತಾಯಗೊಳ್ಳಲಿದೆ. ಸೆ.26ರಂದು ಬೆಳಗ್ಗೆ 9.45ರಿಂದ 10.05 ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರು ಚಾಮುಂಡಿಬೆಟ್ಟದಲ್ಲಿ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಅಂದು ಸಂಜೆ 6 ಗಂಟೆಗೆ ಅರಮನೆ ಆವರಣದಲ್ಲಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿದ್ಯುಕ್ತ ಚಾಲನೆ ದೊರೆಯಲಿದ್ದು, ಅದೇ ವೇಳೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅ.5ರಂದು ಬುಧವಾರ ಮಧ್ಯಾಹ್ನ 2.36ರಿಂದ 2.50ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಅರಮನೆ ಬಲರಾಮ ದ್ವಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಂದಿ ಪೂಜೆ ನೆರವೇರಿಸಲಿದ್ದು, ಸಂಜೆ 5.07ರಿಂದ 5.18ರವರೆಗೆ ಸಲ್ಲುವ ಮೀನ ಲಗ್ನದಲ್ಲಿ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿ ಪ್ರತಿಷ್ಠಾಪಿತ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಜಯದಶಮಿ ಮೆರವಣಿಗೆಗೆ (ಜಂಬೂ ಸವಾರಿ) ಚಾಲನೆ ನೀಡಲಿದ್ದಾರೆ. ಅಂದು ಸಂಜೆ 7.30ಕ್ಕೆ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪಂಜಿನ ಕವಾಯತು ಕಾರ್ಯಕ್ರಮ ಉದ್ಘಾಟಿಸಲಿದ್ದು, ಆ ಕಾರ್ಯಕ್ರಮದೊಂದಿಗೆ ಈ ಬಾರಿಯ ದಸರಾ ಮಹೋತ್ಸವ ತೆರೆ ಕಾಣಲಿದೆ.

ಇಡೀ ಜಗತ್ತೇ ಇತ್ತ ತಿರುಗಿ ನೋಡುವಂತೆ ಜಗತ್ಪ್ರಸಿದ್ಧ ಮೈಸೂರು ದಸರಾ ಮಹೋತ್ಸವವು ನಾಲ್ಕು ಶತಮಾನಗಳಿಗೂ ಹೆಚ್ಚಿನ ಭವ್ಯ ಇತಿಹಾಸವನ್ನು ತನ್ನೊಡಲಲ್ಲಿ ತುಂಬಿಕೊಂಡಿದೆ. ಇಂಥ ವೈಭವದ ನವರಾತ್ರಿ ಉತ್ಸವದ ಮೈಸೂರು ದಸರಾಕ್ಕೆ ಅದರದೇ ಆದ ಪರಂಪರೆಯ ಸೊಗಡು-ಸೊಗಸಿದೆ. ವಿಜಯನಗರ ಅರಸರ ಕಾಲದಲ್ಲಿ ವಿಜಯದ ದ್ಯೋತಕವಾಗಿ ಆರಂಭವಾದ ವಿಜಯ ದಶಮಿಯ ನವರಾತ್ರಿ, ಸಂಸ್ಕೃತಿ ಸಂಭ್ರಮದ ಉತ್ಸವ ಮೈಸೂರು ಒಡೆಯರ ಕಾಲದಲ್ಲಿದು ಮುಂದುವರಿದದ್ದು ಪರಂಪರೆಯ ಪ್ರತೀಕ. ಭಾರತೀಯ ಸಂಸ್ಕೃತಿಯ ಇತಿಹಾಸದಲ್ಲಿ ಇಷ್ಟೊಂದು ಸುದೀರ್ಘ ಕಾಲದವರೆಗೆ ನಡೆಯುವ ಮತ್ತೊಂದು ಹಬ್ಬ ಕಾಣಸಿಗುವುದು ಬಹಳ ಅಪರೂಪ!

ಖಾಸಗಿ ದರ್ಬಾರ್: ಮೈಸೂರು ದಸರಾ ಒಂದು ನಾಡಹಬ್ಬವೆಂದೇ ಕರೆಯಲ್ಪಡುವ ಮಹೋತ್ಸವವೂ ಹೌದು. ಇದರ ಅತ್ಯಪೂರ್ವ ಪ್ರಮುಖ ಆಕರ್ಷಣೆ



ಖಾಸಗಿ ದರ್ಬಾರ್. ಇದನ್ನು ನೋಡಿ ಅನುಭವಿಸಬೇಕೇ ಹೊರತು ಪದಗಳಲ್ಲಿ ಹಿಡಿದಿಡಿದು ವಿವರಿಸಿ ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ ಮತ್ತೆ ಮಹಾರಾಜರ ಆಳ್ವಿಕೆಯೇ ಬಂದು ಬಿಟ್ಟಿತೇನೋ ಎನ್ನುವಂತೆ ಭಾಸವಾಗಿ, ಸಿಂಹಾಸನಾರೂಢ ಮಹಾರಾಜರ ಗತ್ತು-ಗಾಂಭೀರ್ಯದ ಆಸ್ಥಾನವೈಸಿರಿಯು ಕಣ್ಮುಂದೆ ತೆರೆದುಕೊಳ್ಳುವ ಈ ಭವ್ಯತೆಯನ್ನು, ದಿವ್ಯತೆಯನ್ನು ಸಹಸ್ರ ಕೋಟಿ ಅಕ್ಷರಗಳಿಂದಲೂ ವರ್ಣಿಸಲಸದಳ.

ದಸರಾ ಸಂಗೀತೋತ್ಸವ, ದಸರಾ ನಾಟಕೋತ್ಸವ, ದಸರಾ ಜನಪದೋತ್ಸವ, ದಸರಾ ಕವಿಗೋಷ್ಠಿಯ ಕಾವ್ಯೋತ್ಸವ, ದಸರಾ ಚಲನಚಿತ್ರೋತ್ಸವ, ದಸರಾ ವಸ್ತುಪ್ರದರ್ಶನ, ದಸರಾ ಫಲಪುಷ್ಪ ಪ್ರದರ್ಶನ, ದಸರಾ ಆಹಾರ ಮೇಳ, ಯುವ ದಸರಾ, ಕೈಗಾರಿಕಾ ದಸರಾ ಹಲವು ಬಗೆಯ ಟ್ಯಾಬ್ಲೋಗಳೊಡನೆ ಜಂಬೂ ಸವಾರಿಯ ವೈಭವ. ಹೀಗೆ ಅರಮನೆಯ ಹೊರಗೆ ನಡೆಯುವ ಮೈಸೂರು ದಸರಾ ಎಲ್ಲರೂ ಕಾಣುವ ದಸರೆ. ಆದರೆ ಅರಮನೆಯ ಒಳಗೆ ನಡೆಯುವ ದಸರೆಯೇ ಬೇರೆ ಇದು ತೀರಾ ಖಾಸಗಿ ದಸರಾ. ಅದೇ ಒಡೆಯರ ಖಾಸಗಿ ದರ್ಬಾರ್. ಇದೇ ಜನ ಸಾಮಾನ್ಯರೆಲ್ಲರಿಗೂ ನೋಡಲು ಸಿಗದ ದಸರಾ. ಅಂಬಾವಿಲಾಸ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಸಾಂಪ್ರದಾಯಿಕವಾಗಿ ಸಕಲ ವಿಧಿ-ವಿಧಾನಗಳೊಂದಿಗೆ ವೈಭವೋಪೇತವಾಗಿ ಜರುಗುವ ಈ ಖಾಸಗಿ ದರ್ಬಾರ್‌ನ ಖದರ್ ವಾಹ್ಹ್ ಎಂದು ಬೆರಗುಗೊಳಿಸುವಂತಾದ್ದು. ಇದು ನವರಾತ್ರಿ ಮಹೋತ್ಸವದ ಹತ್ತು ದಿನಗಳ ಕಾಲವೂ ನಡೆಯುವ ಒಡೆಯರ ಆಸ್ಥಾನದ ಖಾಸಗಿ ದರ್ಬಾರಿನ ಪರಿ.

ಇದಕ್ಕಾಗಿ ಪ್ರಪಂಚದಲ್ಲೇ ಪುರಾತನವಾದದ್ದೆಂದು ಹೇಳ ಲಾಗುವ ರತ್ನಖಚಿತ ಚಿನ್ನದ ಸಿಂಹಾಸನವನ್ನು ದಸರೆಗೆ ಮೊದಲೇ ದರ್ಬಾರ್ ಹಾಲ್‌ನಲ್ಲಿ ಜೋಡಿಸ ಲಾಗುತ್ತದೆ. ಇದು ದಸರಾ ಆರಂಭದ ಕಾಲದಿಂದಲೂ ನಡೆದು ಬಂದಿರುವ ಪದ್ಧತಿ. ನವರಾತ್ರಿ ವೇಳೆ ಅರಮನೆಯ ಸಂಪ್ರದಾಯಬದ್ಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ, ಒಡೆಯರ್ ಮನೆತನದ ರಾಜ ಪ್ರತಿದಿನ ಸರಿ ಸುಮಾರು ಮುಕ್ಕಾಲು ಗಂಟೆ ಕಾಲ ಈ ಸಿಂಹಾಸನವನ್ನು ಅಲಂಕರಿಸಿ ಖಾಸಗಿ ದರ್ಬಾರ್ ನಡೆಸುವುದು ವಾಡಿಕೆ. ಅದರಂತೆ ಮೈಸೂರು ಮಹಾರಾಜರ ಕೊನೆಯ ಕುಡಿ ಯುವರಾಜ, ಮಾಜಿ ಸಂಸದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿವರ್ಷ ಇದನ್ನು ನಡೆಸಿಕೊಂಡು ಬರುತ್ತಿದ್ದರು. 2013 ಡಿಸೆಂಬರ್ 10ರಂದು ಅವರು ನಿಧನರಾದ ನಂತರ ಉತ್ತರಾಧಿಕಾರಿಯಾಗಿ ಅವರ ದತ್ತು ಪುತ್ರ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ 2015ರಿಂದ ಖಾಸಗಿ ದಸರಾ ದರ್ಬಾರ್ ನಡೆಸುತ್ತಿದ್ದಾರೆ.

ಈ ಖಾಸಗಿ ದರ್ಬಾರ್ ಎಂದರೆ ಸಾಕ್ಷಾತ್ ಮಹಾರಾಜರ ಮಹಾವೈಭವ. ರಾಜಾಳ್ವಿಕೆ ಕೊನೆಗೊಳ್ಳುವ ಮೊದಲು ಮಹಾರಾಜರ ಕಾಲದಲ್ಲಿ ಯಾವ ರೀತಿಯ ರಾಜ ದರ್ಬಾರ್ ನಡೆಯುತ್ತಿತ್ತೋ ಅದೇ ರೀತಿ ಪರಂಪರಾಗತ ವಿಧಿ-ವಿಧಾನಗಳಂತೆಯೇ ಒಡೆಯರ್ ಖಾಸಗಿ ದರ್ಬಾರ್ ನಡೆಸುತ್ತಾರೆ. ನವರಾತ್ರಿಯ ಮೊದಲನೆಯ ದಿನ ಅಂದರೆ ಪಾಡ್ಯದ ದಿನ ಪ್ರಸ್ತುತ ಮಹಾರಾಜರಾಗಿ ಖಾಸಗಿ ದರ್ಬಾರ್ ನಡೆಸುವ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಬೆಳಿಗ್ಗೆ ಎದ್ದ ತಕ್ಷಣವೇ ಆರತಿ ಎತ್ತಿ ಎಣ್ಣೆ ಶಾಸ್ತ್ರ, ಮಂಗಳಸ್ನಾನ ಮಾಡಿಸಲಾಗುವುದು. ಮುತ್ತೈದೆಯರು ಮತ್ತು ಪುರೋಹಿತ ಮನೆತನದ ಹೆಂಗಸರು ಒಡೆಯರ್ ಅವರಿಗೆ ಆರತಿ ಬೆಳಗುತ್ತಾರೆ. ಆನಂತರ ಪೂಜೆಗೆ ಅಣಿಯಾಗುವ ಒಡೆಯರ್, ಮೊದಲಿಗೆ ಚಾಮುಂಡಿತೊಟ್ಟಿಯಲ್ಲಿ ಗಣಪತಿಗೆ ಪೂಜೆ ಮಾಡಿ ಬಳಿಕ ಕಳಶಪೂಜೆ, ಕಂಕಣಪೂಜೆ ನಡೆಸಿ ತಮ್ಮ ಕುಲದೇವತೆ ಚಾಮುಂಡಿ ಸನ್ನಿಧಿಯಲ್ಲಿ ಕಂಕಣ ಧರಿಸುತ್ತಾರೆ. ಒಡೆಯರ್ ಜೊತೆಗೆ ಅವರ ಶ್ರೀಮತಿ ತ್ರಿಷಿಕಾಕುಮಾರಿ ಒಡೆಯರ್ ಕೂಡ ರಾಜಮನೆತನದ ಪದ್ಧತಿಯಂತೆ ಮಹಾರಾಣಿ ಸ್ಥಾನದಲ್ಲಿ ನಿಂತು ತಾವೂ ಕಂಕಣ ಧರಿಸುತ್ತಾರೆ. ಅಲ್ಲಿಂದ ಎಲ್ಲಾ ರೀತಿಯ ಕಠಿಣವ್ರತಗಳನ್ನೂ ಅರಮನೆಯ ಸಂಪ್ರದಾಯದಂತೆ ಚಾಚೂ ತಪ್ಪದೆ ನಡೆಸುತ್ತಾರೆ.

ದುರ್ಗೆಯ ದಿವ್ಯಸ್ವರೂಪಗಳಾದ ಬ್ರಹ್ಮಾಣಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮಹೇಶ್ವರಿ, ದುರ್ಗಾ, ಕಾಳಿ, ಚಂಡಿಕೆ ಹೀಗೆ ಎಲ್ಲಾ ಶಕ್ತಿದೇವತೆಗಳನ್ನೂ ಆರಾಧಿಸುವ ಒಡೆಯರ್, ಶಿವಸನ್ನಿಧಿ, ಕೃಷ್ಣಸನ್ನಿಧಿ, ಚಾಮುಂಡಿ ಸನ್ನಿಧಿ ಮುಂತಾದ ದೇವ-ದೇವಿಯರ ಸನ್ನಿಧಿಗಳಲ್ಲಿ ಪೂಜೆ ಸಲ್ಲಿಸುತ್ತಾರೆ. ಇದರ ನಂತರ ದೇವೀ ಭಾಗವತ ಪಾರಾಯಣ, ರಾಮಾಯಣ ಪಾರಾಯಣ ನಡೆಯುತ್ತದೆ. ಬಳಿಕ ಗಣಪತಿ ಪೂಜೆ, ಅಷ್ಟದಿಕ್ಪಾಲಕರ ಪೂಜೆ, ನವಗ್ರಹ ಪೂಜೆ, ಬ್ರಹ್ಮ, ವಿಷ್ಣು, ಮಹೇಶ್ವರ, ಮಹಾಕಾಳಿ, ಮಹಾಸರಸ್ವತಿ, ಮಹಾಲಕ್ಷ್ಮಿ ಪೂಜೆಗಳೆಲ್ಲವೂ ಆಗಿ ನಂತರ ಅಷ್ಟೋತ್ತರವಾಗುತ್ತದೆ.

ಚಂಡಿಕಾಹೋಮ, ಬಲಿ, ಮಹಿಷಾವಧೆ, ಶಮೀವೃಕ್ಷ ಪೂಜೆ ಸೇರಿದಂತೆ ಅನೇಕ ಪೂಜಾ ವಿಧಿಗಳು ಸಾಂಗೋಪವಾಗಿ ನಡೆದು ದೇವೀ ಭಾಗವತವನ್ನು ಪಾರಾಯಣ ಮಾಡುವಾಗ ಮಹಿಷಾಸುರನನ್ನು ಸಾಂಕೇತಿಕವಾಗಿ ಸಂಹರಿಸಲಾಗುತ್ತದೆ. ಇದಕ್ಕಾಗಿ ಮರದಿಂದ ಮಹಿಷಾಸುರನ ಪ್ರತಿಕೃತಿಯನ್ನು ತಯಾರಿಸಿ ಅದಕ್ಕೆ ಕುಂಕುಮದ ರಕ್ತವರ್ಣವನ್ನು ಸುರಿಯಲಾಗುತ್ತದೆ.

ಕಾಳಿಕಾ ಪುರಾಣದ ಪ್ರಕಾರ ವೈದಿಕವಾಗಿ ಅರಮನೆಯೊಳಗೆ ಕಾರ್ಯಕ್ರಮ ನಡೆಸುವ ಮುನ್ನ ಬೆಳಿಗ್ಗೆ ರತ್ನಸಿಂಹಾಸನಕ್ಕೂ ಪೂಜೆ ಸಲ್ಲಿಸಲಾಗುತ್ತದೆ. ಈ ನಡುವೆ ಕಂಕಣಧಾರಿ ಗಳಾದ ಒಡೆಯರ್ ದಂಪತಿಗಳಿಗೆ ದಂಪತಿಪೂಜೆ ಮಾಡ ಲಾಗುತ್ತದೆ. ಹಾಗೆಯೇ ದರ್ಬಾರಿಗೆ ಬರುವುದಕ್ಕೂ ಮೊದಲು ಒಡೆಯರ್ ಪತ್ನಿ ತ್ರಿಷಿಕಾಕುಮಾರಿ, ಸುಮಂಗಲೆಯರೊಡನೆ ಒಡೆಯರ್ ಅವರ ಪಾದಪೂಜೆ ಮಾಡಿ ಹಣೆಗೆ ತಿಲಕ ಇಡುತ್ತಾರೆ. ಹತ್ತು ದಿನಗಳೂ ಒಡೆಯರ್‌ಗೆ ಈ ರೀತಿ ಪಾದಪೂಜೆ ಮಾಡಲಾಗುತ್ತದೆ. ಇದು ಅರಮನೆಯ ಕಲ್ಯಾಣಮಂಟಪದ ಮೇಲ್ಭಾಗದಲ್ಲಿ ನಡೆಯುತ್ತದೆ.

ಈ ಎಲ್ಲಾ ವಿಧಿ-ವಿಧಾನ ಪೂಜೆಗಳ ಜೊತೆ ವಿವಿಧ ಬಗೆಯ ದಂತದ ಗೊಂಬೆಗಳನ್ನು ಗೊಂಬೆತೊಟ್ಟಿಯಲ್ಲಿ ಜೋಡಿಸಿ ಕೂರಿಸಿ ಗೊಂಬೆಯಾರತಿ ಮಾಡಲಾಗುತ್ತದೆ. ಈ ಸಂಪ್ರದಾಯ ಅರಮನೆಯಿಂದಾಚೆಗೂ ಮುಂದುವರಿದಿದ್ದು ಪಟ್ಟದರಾಜ, ಪಟ್ಟದರಾಣಿ ಪರಿಕಲ್ಪನೆಯಲ್ಲಿ ಗೊಂಬೆ ಕೂರಿಸುವ ಪದ್ಧತಿಯನ್ನು ಈಗಲೂ ದಸರಾ ಸಂದರ್ಭದಲ್ಲಿ ಹಲವಾರು ಮನೆಗಳಲ್ಲಿ ನಾವು ಕಾಣಬಹುದಾಗಿದೆ.

ಖಾಸಗಿ ದರ್ಬಾರಿನಲ್ಲಿ ಒಡೆಯರ್ ಅವರ ರಾಜಪೋಷಾಕೇ ಒಂದು ಅದ್ಭುತ. ಇದನ್ನು ಮೈಸೂರಿನ ವಿಶಿಷ್ಟ ದರ್ಜಿಯೊಬ್ಬರು ಸಿದ್ಧಪಡಿಸುತ್ತಾರೆ. ಬೆಳಕಿನಲ್ಲಿ ಬೆಳಕಾಗಿ, ಹೊಳಪಿನಲ್ಲಿ ಹೊಳ ಪಾಗಿ ಮಿರಮಿರ ಮಿರುಗುವ ಚಿನ್ನದ ಎಳೆಗಳ ನ್ನೊಳಗೊಂಡ ಉಡುಪು ಧರಿಸಿದ ಶ್ರೀ ಯದುವೀರಕೃಷ್ಣದತ್ತ ಚಾಮರಾಜ ಒಡೆಯರನ್ನು ನೋಡಲು ನೂರು ಕಣ್ಣೂ ಸಾಲದಾಗುತ್ತವೆ. ಹೀಗೆ ಇಡೀ ಅಂಬಾವಿಲಾಸ ಅರಮನೆಯನ್ನು ಬೆಳಗುವ ಚಂದ್ರನಂತೆ ಆರಸೊತ್ತಿಗೆಯ ದಿನಗಳನ್ನು ನೆನಪಾಗೊಳಿಸುವ ಒಡೆಯರ್ ಸಿಂಹಾಸನ ಪೂಜೆ ಮಾಡಿ ರಾಜಗಾಂಭೀರ್ಯದಿಂದ ರತ್ನಸಿಂಹಾಸನ ಏರಿ ಆ ಸ್ಥಾನಕ್ಕೆ ಬಲಗೈ ಎತ್ತಿ ಸಲ್ಯೂಟ್ ಮಾಡಿ ಗತ್ತಿನಿಂದ ಕುಳಿತುಕೊಳ್ಳುವ ರೀತಿ ನೋಡುವ ಕಂಗಳಿಗೆ ನಿಜಕ್ಕೂ ಹಬ್ಬ! ಮಹಾರಾಜ ರೆಂದರೆ ಇವರೇನೇ ಎಂಬ ಭಾವ ಎಂಥವರಿಗಾದರೂ ಬಾರದಿರದು. "ರಾಜಾಧಿರಾಜ .. ರಾಜ ಮಾರ್ತಾಂಡ ... ಶ್ರೀಮನ್ಮಹಾರಾಜ.. ಬಹುಪರಾಕ್ ... ಮುಂತಾದ ಪರಾಕುಗಳು ಮೊಳಗತೊಡಗುತ್ತವೆ.

ಪ್ರತಿದಿನ ಸಂಜೆ ಖಾಸಗಿ ದರ್ಬಾರ್ ನಡೆಯುವ ಮುನ್ನ ಪಟ್ಟದ ಆನೆ, ಪಟ್ಟದ ಹಸು, ಪಟ್ಟದ ಕುದುರೆಗಳಿಗೆ ಅಲಂಕಾರ ಮಾಡಿ ಅರಮನೆ ಆವರಣದಲ್ಲಿರುವ ಕೋಟೆ ಆಂಜನೇಯ ಸ್ವಾಮಿಗೆ ಪೂಜೆ ಸಲ್ಲಿಸಲಾಗುತ್ತದೆ. ನಂತರ ಅರಮನೆಯೊಳಗೆ ಇವುಗಳ ಪ್ರವೇಶವಾದ ನಂತರ ಖಾಸಗಿ ದರ್ಬಾರ್ ಶುರು. ಸಿಂಹಾಸನಾರೂಢರಾದ ಒಡೆಯರ್‌ಗೆ ದೇವಾಲಯ ಗಳಿಂದ ಬಂದ ಪುರೋಹಿತರು ಪ್ರಸಾದ ಮತ್ತು ಮಂತ್ರಪುಷ್ಪ ಹಾಗೂ ಮಂಗಳಾಕ್ಷತೆ ನೀಡುವುದು, ನಜರ್ ಒಪ್ಪಿಸುವುದು ನಡೆಯುತ್ತದೆ. ನಂತರ ಸಿಂಹಾಸನಾರೂಢ ಒಡೆಯರ್‌ರಿಂದ ರಾಜಪರಿವಾರದ ಮಂದಿಗೆ ಕಾಣಿಕೆ ನೀಡಲಾಗುತ್ತದೆ. ಹತ್ತು ದಿನಗಳು ನಡೆಯುವ ಈ ಖಾಸಗಿ ದರ್ಬಾರ್‌ನಲ್ಲಿ ದಿನವೂ ನಡೆಯುವ ಪೂಜಾ ವಿಧಾನಗಳಲ್ಲಿ ಬದಲಾವಣೆಗಳಿರುವುದಿಲ್ಲ.

ಒಟ್ಟಿನಲ್ಲಿ ನವರಾತ್ರಿಯ ದಸರಾ ಸಂಭ್ರಮೋಲ್ಲಾಸದಲ್ಲಿ ಮೈಸೂರು ಯದುವಂಶಸ್ಥರ ದಿವ್ಯ ಸಾನಿಧ್ಯದಲ್ಲಿ ಜರುಗುವ ಖಾಸಗಿ ದರ್ಬಾರ್ ಆಳರಸರ ಗತಕಾಲದ ವೈಭವವನ್ನು ತೆರೆ ದಿಡುವ ನೆನಪುಗಳ ಮಹಾ ಮೆರವಣಿಗೆಯೇ ಸರಿ...! ■

ಮೈಸೂರು ದೊರೆಗಳಿಗೆ ಧನ್ಯವಾದ ಪತ್ರ...!

ನಾಡಹಬ್ಬ ನಮ್ಮ ಮೈಸೂರು ದಸರಾ ಸಂಭ್ರಮದಲ್ಲಿ ಮೈಸೂರನ್ನು ಆಳಿದ ಎಲ್ಲಾ ಮಹಾರಾಜರಿಗೆ ಮೈಸೂರಿನ ನಾಗರಿಕರ ಪರವಾಗಿ ಹೀಗೊಂದು ವಿಶೇಷ ಪತ್ರ..... ನಮ್ಮ ಸಾಂಸ್ಕೃತಿಕ ನಗರಿ ಮೈಸೂರನ್ನು ಆಳಿದ ದೊರೆಗಳ ಸನ್ನಿಧಾನಕ್ಕೆ...

ಹೇಗಿದ್ದೀರಿ, ನೀವುಗಳು ಎಲ್ಲರೂ ಸ್ವರ್ಗದಲ್ಲಿ ಇದ್ದೀರಿ...ನೀವು ಕಟ್ಟಿ ಬೆಳೆಸಿದ ಮೈಸೂರು ನಗರದಲ್ಲಿ ನಾವುಗಳು ಎಲ್ಲರೂ ಸೌಖ್ಯದಿಂದ, ನೆಮ್ಮದಿಯಿಂದ ಇದ್ದೇವೆ...

ಮೈಸೂರು ನಗರದ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಾಲಯ ಈಗ ನೋಡಲು ಇನ್ನೂ ವೈಭವೋಪೇತವಾಗಿದೆ, ದೇವಿಯನ್ನು ಎಲ್ಲರೂ ಶ್ರದ್ಧಾ ಭಕ್ತಿಯಿಂದ ಪೂಜಿಸುತ್ತಿದ್ದೇವೆ. ಅಷ್ಟೇ ಅಲ್ಲ ನೀವು ಆರಂಭಿಸಿ ನಡೆಸುತ್ತಿದ್ದ ನವರಾತ್ರಿ ಮಹೋತ್ಸವವನ್ನು ಈಗ ಅದ್ಧೂರಿಯಿಂದ ಆಚರಿಸಲಾಗುತ್ತಿದೆ ಜಂಬೂ ಸವಾರಿಯಲ್ಲಿ ನಾಡದೇವತೆ ಚಾಮುಂಡೇಶ್ವರಿ ಕೂರುತ್ತಾಳೆ.. ಆಗ ಜನರು ನಿಮ್ಮಗಳನ್ನು ನೆನಪಿಸಿಕೊಳ್ಳುತ್ತಾರೆ..

ನಿಮ್ಮ ಆಡಳಿತ ಅವಧಿಯಲ್ಲಿ ನಾಡಗೀತೆಯಾಗಿದ್ದ 'ಕಾಯೌ ಶ್ರೀ ಗೌರಿ ಕರುಣಾ ಲಹರಿ' ಗೀತೆಯನ್ನು ಮೈಸೂರು ಆಕಾಶವಾಣಿ ತನ್ನ ಸುಪ್ರಭಾತ ಗೀತೆಯಾಗಿ ಪ್ರಸಾರ ಮಾಡುತ್ತಿದೆ..

ಇನ್ನು ದಸರಾ ಮಹೋತ್ಸವದ ವೈಭವ ವರ್ಣಿಸಲು ಪದಗಳೇ ಇಲ್ಲ..ಇಡೀ ವಿಶ್ವವೇ ಮೈಸೂರಿನತ್ತ ಮುಖ ಮಾಡುವಂತೆ ವಿಜೃಂಭಿಸುತ್ತಿದೆ. ಗಾಯನ, ನಾಟ್ಯ, ಕುಸ್ತಿ,ಯಕ್ಷಗಾನ, ಜನಪದ ಕಲೆಗಳು, ಸಾಹಿತ್ಯ ಹೀಗೆ ಎಲ್ಲಾ ಲಲಿತ ಕಲೆಗಳಿಗೂ ಪ್ರೋತ್ಸಾಹ ನೀಡಲಾಗುತ್ತಿದೆ. ಇದನ್ನು ನೋಡಿ ನಿಮಗೆಲ್ಲ ಸಂತಸವಾಗಿದೆ ಎಂದು ಭಾವಿಸುತ್ತೇನೆ.

ಏಕೆಂದರೆ ...ನೀವುಗಳು ಸಂಗೀತ ಸಾಹಿತ್ಯ, ಕಲೆಯ ಆರಾಧಕರಾಗಿ ಎಲ್ಲಾ ವಿದ್ವಾಂಸರಿಗೆ ಆಶ್ರಯ ನೀಡಿದ್ದೀರಿ.. ಅದರ ಫಲವಾಗಿ ಈಗಲೂ ಮೈಸೂರು ಸಾಂಸ್ಕೃತಿಕ ರಾಜಧಾನಿಯಾಗಿ ಮೆರೆಯುತ್ತಿದೆ..

ನೀವು ನಿರ್ಮಿಸಿದ ಅರಮನೆಗಳು...ಅಬ್ಬಾ! ಒಂದಕ್ಕಿಂತ ಒಂದು ಸೊಗಸು ಸುಂದರ..ಅಂಬಾ ವಿಲಾಸ ಅರಮನೆ ದೀಪಾಲಂಕಾರದಿಂದ ಝಗ ಝಗಿಸುತ್ತಿದೆ, ಇದು ಕೂಡಾ ನಿಮ್ಮ ಕೊಡುಗೆಯೇ. ಆದರೆ, ಈಗ ದಸರಾ ವೇಳೆಯಲ್ಲಿ ಇಡೀ ಮೈಸೂರಿನ ರಾಜ ಬೀದಿಗಳು, ದೀಪದ ಅಲಂಕಾರದಿಂದ ಕಂಗೊಳಿಸುತ್ತಿರುತ್ತದೆ, ಆ ವೈಭವವನ್ನು ನೋಡಿ ನಿಮ್ಮಗಳಿಗೆ ಅಲ್ಲಿನ ಅಮರಾವತಿ ಎಂದು ಅನಿಸಿರಬೇಕು ಅಲ್ವಾ.

ಜಗನ್ಮೋಹನ ಅರಮನೆ ಆರ್ಟ್ ಗ್ಯಾಲರಿಯಾದರೆ, ಲಲಿತ ಮಹಲ್ ಪಂಚ ತಾರಾ ಹೋಟೆಲ್ ಆಗಿ ಪರಿವರ್ತನೆಯಾಗಿದೆ. ಉಳಿದ ಅರಮನೆಗಳು ಉನ್ನತ ಸಂಸ್ಥೆಗಳ ಕಚೇರಿಗಳಾಗಿ, ಶಿಕ್ಷಣ, ಆಡಳಿತದ ಸೇವಾ ಕೇಂದ್ರಗಳಾಗಿ ಮಾರ್ಪಟ್ಟಿವೆ. ಒಟ್ಟಿನಲ್ಲಿ ಎಲ್ಲವನ್ನೂ ಸುಸಜ್ಜಿತವಾಗಿ ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬರಲಾಗಿದೆ.

ನೀವು ಸ್ಥಾಪಿಸಿದ ಮಹಾರಾಣಿ, ಮಹಾರಾಜ, ಯುವರಾಜ ಶಿಕ್ಷಣ ಸಂಸ್ಥೆಗಳು ಅತ್ಯುತ್ತಮ ರೀತಿಯಲ್ಲಿ ಶಿಕ್ಷಣ ನೀಡುತ್ತಿವೆ. ಲಕ್ಷಾಂತರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ..

ಈಗ ವೈದ್ಯಕೀಯ ವೆಚ್ಚ ಗಗನಕ್ಕೇರಿದೆ.. ಕೃಷ್ಣರಾಜ ಆಸ್ಪತ್ರೆ ಚೆಲುವಾಂಬ ಆಸ್ಪತ್ರೆ ಬಡ ಬಗ್ಗರಿಗೆ ವರದಾನವಾಗಿದೆ.

ಕೃಷ್ಣರಾಜ ಸಾಗರ ಅಣೆಕಟ್ಟೆ ರೈತರ ಪಾಲಿನ ಜೀವನಾಡಿಯಂತಿದೆ. ಮಂಡ್ಯ, ಮೈಸೂರಿನ ರೈತರು ತಮ್ಮ ಮನೆಗಳಲ್ಲಿ ದೇವರ ಫೋಟೋ ಜೊತೆಗೆ ನಾಲ್ವಡಿ ಕೃಷ್ಣರಾಜ ಒಡೆಯರ ಫೋಟೋವನ್ನು ಇಟ್ಟು ಭಕ್ತಿಯಿಂದ ನಮಿಸುತ್ತಿದ್ದಾರೆ. ಕೆಲವು ಕಾರ್ಖಾನೆಗಳು ಅವ್ಯವಸ್ಥೆಯಿಂದ ಮುಚ್ಚಿದರೆ.. ಹಲವಾರು ಕಾರ್ಖಾನೆಗಳು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿವೆ. ಅದರ ಕಾರ್ಮಿಕರು ನಿಮ್ಮ ವಂಶದ ದೊರೆಗಳನ್ನು ನೆನೆದು ಅನ್ನ ತಿನ್ನುತ್ತಿದ್ದಾರೆ..

ಜಟಕಾ ಗಾಡಿಗಳು ಮೆಲ್ಲನೆ ಕಣ್ಮರೆಯಾಗುತ್ತಿವೆ. ವಿಮಾನ ಹಾರಾಟ ಶುರುವಾಗಿದೆ.. ಮೇಲಿನಿಂದ ಅರಮನೆಗಳನ್ನು ನೋಡುವುದೇ ಪರಮಾನಂದ..ಆಗ ನಮ್ಮ ದೊರೆಗಳನ್ನು ನೆನೆಯದ ಜನರೇ ಇಲ್ಲ..

ದೊರೆಗಳು ದತ್ತಿಯಾಗಿ ನೀಡಿದ ಅಗ್ರಹಾರಗಳು, ಚೆಲುವಾಂಬ ಅಗ್ರಹಾರ, ಹಳೇ ಅಗ್ರಹಾರ, ರಾಮಾನುಜ ಅಗ್ರಹಾರ, ರಾಜಾರಾಮ ಅಗ್ರಹಾರ, ದೇವರಾಜಮ್ಮಣ್ಣಿ ಅಗ್ರಹಾರ ಲಿಂಗರಾಜಮ್ಮಣ್ಣಿ ಅಗ್ರಹಾರ, ಕೊತ್ವಾಡಿ ಅಗ್ರಹಾರಗಳು. ದಿನಾ ಇಲ್ಲಿ ವಾಸಮಾಡುವ ಪ್ರಜೆಗಳು ನಿಮ್ಮನ್ನು ಸ್ಮರಿಸುತ್ತಾರೆ..ಬೆಸ್ತರಗೇರಿ, ಗೊಲ್ಲಗೇರಿ, ಸುಣ್ಣದ ಕೇರಿ, ಹಳ್ಳದ ಕೇರಿ ಕುರುಬರ ಕೇರಿ, ಜಲಪುರಿ, ಹುಲ್ಲಿನ ಬೀದಿ, ಕಾಕರವಾಡಿ ಹೀಗೆ ಎಲ್ಲಾ ಸಮುದಾಯದವರನ್ನು ಒಂದೇ ರೀತಿ ಪರಿಗಣಿಸಿ ನೀಡಿದ ಆಶ್ರಯ. ನಿಮ್ಮ ಜಾತ್ಯಾತೀತ ಮನೋಭಾವಕ್ಕೆ ಮಾದರಿ. ಈಗ ಮೈಸೂರಿನಲ್ಲಿ ಸಾವಿರಾರು ನೂತನ ಬಡಾವಣೆಗಳಿಂದ ರಾರಾಜಿಸುತ್ತಿದೆ...

ಮೈಸೂರಿನ ಅನೇಕ ಮಠ, ಮಂದಿರ, ದೇವಸ್ಥಾನಗಳು ನಮ್ಮ ಒಡೆಯರ್ ವಂಶದ ದೊರೆಗಳಿಗೆ ಎಂದು ಪೂಜೆ ಸಲ್ಲಿಸುತ್ತಾರೆ. ಆ ದೇವಾಲಯಗಳು ಮಠಗಳ ನಿರ್ಮಾತೃಗಳು ನೀವೇ...

ಮಾನವರಲ್ಲಿ ದುರಾಸೆ ಅತಿಯಾಗಿ ಕಾಡನ್ನು ನಾಶ ಮಾಡುತ್ತಿದ್ದಾನೆ. ಅದರ ಫಲವಾಗಿ ಕಾಡು ಪ್ರಾಣಿಗಳು, ಪಕ್ಷಿಗಳ ಸಂತತಿ ಕ್ಷೀಣಿಸುತ್ತಿದೆ. ಈ ನಿಟ್ಟಿನಲ್ಲಿ ಜಯ ಚಾಮರಾಜೇಂದ್ರ ಮೃಗಾಲಯ ಕಾಡು ಪ್ರಾಣಿಗಳನ್ನು ಸಂರಕ್ಷಿಸಿ ಪೋಷಿಸುತ್ತಿದೆ ಇದು ವಿಶೇಷವಾಗಿ ಮಕ್ಕಳಿಗೆ ವೀಕ್ಷಿಸಲು ಅತ್ಯುತ್ತಮ ಪ್ರವಾಸಿ ಸ್ಥಳವಾಗಿದೆ.

ಅಂಚೆಯನ್ನು ಬಿಸಿಲು ಮಳೆ ಚಳಿಯನ್ನು ಲೆಕ್ಕಿಸದೇ ಮನೆ ಮನೆಗೆ ಪತ್ರಗಳನ್ನು ಹಂಚುತ್ತಿದ್ದ ಅಂಚೆಯಣ್ಣನ ನೆನಪಿಗೆ... ಪೋಸ್ಟ್ ಮ್ಯಾನ್ ಮೂರ್ತಿಯನ್ನು ನಿರ್ಮಿಸಿರುವುದು ನಿಮ್ಮಗಳ ಔದಾರ್ಯಕ್ಕೆ ಸಾಕ್ಷಿಯಾಗಿದೆ. ಮೈಸೂರಿನಲ್ಲಿರುವ ವೃತ್ತಗಳ, ಬೀದಿಗಳ, ಮುಖ್ಯ ರಸ್ತೆಗಳ, ಹೆಸರುಗಳು ಸಮಾಜಸೇವೆ ಸಲ್ಲಿಸಿದವರ, ದಿವಾನರ, ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಗೆ ನೀವು ಇಟ್ಟಿದ್ದು...ಈಗಲೂ ಅದೇ ಹೆಸರಿನಲ್ಲಿ ಜನಜನಿತವಾಗಿದೆ..

ದೇವರಾಜ ಮಾರುಕಟ್ಟೆ ಚಿಕ್ಕ ಮಾರುಕಟ್ಟೆ ಬಂಡಿ ಪಾಳ್ಯ, ಸಂತೆಪೇಟೆ, ಶಿವರಾಂ ಪೇಟೆಗಳಲ್ಲಿ ವ್ಯಾಪಾರ ವಹಿವಾಟು ಭರಾಟೆಯಿಂದ ಸಾಗಿದೆ..

ದೊಡ್ಡ ಗಡಿಯಾರ ಚಿಕ್ಕ ಗಡಿಯಾರ ಮೈಸೂರಿನ ಜನತೆಗೆ ಸಮಯ ಪರಿಪಾಲನೆಯ ಸೂಚನೆಯ ದ್ಯೋತಕವಾಗಿದೆ.

ಹೇಳುವುದು ಮರೆತೇಬಿಟ್ಟಿದ್ದೇ ನಿಮ್ಮ ಅವಧಿಯಲ್ಲಿ ಅರಮನೆಯ ಪಾಕಶಾಲೆಯಲ್ಲಿ ಸೃಷ್ಟಿಯಾದ 'ಮೈಸೂರು ಪಾಕ್' ಈಗಲೂ ಎಲ್ಲರ ಅಚ್ಚುಮೆಚ್ಚಿನ ಸಿಹಿ ತಿನಿಸು.


ಅತ್ಯಂತ ಶಾಂತಿಯಿಂದ ಸಹನೆಯಿಂದ ಪ್ರೀತಿಯಿಂದ ದಕ್ಷತೆಯಿಂದ ನೀವುಗಳು ಕಟ್ಟಿ ಬೆಳೆಸಿದ ಮೈಸೂರು ರಾಜ್ಯ... ಈಗ ಇನ್ನಷ್ಟು..ಮತ್ತಷ್ಟು..ನವೀಕರಣಗೊಂಡು ಆಧುನೀಕರಣಗೊಂಡಿದೆ...ಆದರೆ... ಮೈಸೂರಿನ ಜನರು ತಮ್ಮ ಸಂಸ್ಕೃತಿ, ಪರಂಪರೆ, ಆಚಾರ ವಿಚಾರ ಸಂಪ್ರದಾಯಗಳನ್ನ ಬಿಟ್ಟು ಕೊಟ್ಟಿಲ್ಲ...

ನೀವುಗಳು ಹಾಕಿಕೊಟ್ಟ ಹಾದಿಯಲ್ಲೇ ಸಾಗುತ್ತಿದ್ದೇವೆ..

ಇಂಥಹ ಭವ್ಯ ಸುಂದರ ಸ್ವಚ್ಛ ಮೈಸೂರನ್ನು ನಮಗಾಗಿ ನಿರ್ಮಿಸಿದ ನಿಮ್ಮ ವಂಶದ ದೊರೆಗಳಿಗೆಲ್ಲಾ ಕೋಟಿ ಕೋಟಿ ನಮಸ್ಕಾರಗಳು... ನಿಮಗೆಲ್ಲ ಮೈಸೂರು ಪ್ರಜೆಗಳು ಚಿರ ಋಣಿಗಳು....

ಕನ್ನಡನಾಡು ನುಡಿ ಸಂಸ್ಕೃತಿ ಕನ್ನಡ ಭಾಷೆ, ಲಲಿತ ಕಲೆಗಳು,ಸಾಹಿತ್ಯ ಸಂಗೀತ ಇಂದಿಗೂ ಉಳಿದಿದೆ ಬೆಳೆದಿದೆ, ಅಜರಾಮರವಾಗಿ ಉಳಿಯುತ್ತದೆ ಎಂದರೆ ಅದಕ್ಕೆ ನಿಮ್ಮಗಳ ಕೊಡುಗೆ ಅಪಾರ ಅನನ್ಯ,ಅವಿಸ್ಮರಣೀಯ..

– ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.



ಇವರದ್ದೇ ಜಂಬೂಸವಾರಿ ಉಸಾಬರಿ


ಮೈಸೂರು ದಸರಾ ವಿಶೇಷ ಆಕರ್ಷಣೆ ಗಜಪಡೆ. ನವರಾತ್ರಿಯ ಅಂತಿಮ ದಿನದ ಜಂಬೂ ಸವಾರಿಯಲ್ಲಿ ಆನೆಗಳದ್ದೇ ಪ್ರಧಾನ ಪಾತ್ರ. ಹಾಗಾಗಿ ಇವುಗಳಿಗೆ ಸಾಕಷ್ಟು ಪೂರ್ವ ತಯಾರಿ ಮಾಡಿ, ದಸರಾ ಫೈನಲ್ ಇವೆಂಟ್ ಯಶಸ್ವಿಗೊಳಿಸಲು ಮೈಸೂರು ಜಿಲ್ಲಾಡಳಿತ ಸಜ್ಜಾಗಿದೆ. ಆ.7ರಂದು ಮೊದಲ ತಂಡದಲ್ಲಿ ಅಂಬಾರಿ ಆನೆ ಅಭಿಮನ್ಯು ಒಳಗೊಂಡಂತೆ 9 ಆನೆ, ಎರಡನೇ ತಂಡದಲ್ಲಿ ಸೆ.7ರಂದು 5 ಆನೆಯನ್ನು ಕರೆತರಲಾಗಿತ್ತು. ಇವುಗಳಿಗೆ ಅರಮನೆ ಅಂಗಳದಲ್ಲಿ ಪೌಷ್ಠಿಕ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ. ಈ ಬಾರಿಯ ದಸರಾ ಗಜ ಪಡೆಯ ಸಂಕ್ಷಿಪ್ತ ಪರಿಚಯವಿದು:

ಅಂಬಾರಿ ಆನೆ ಅಭಿಮನ್ಯು

ಕರ್ನಾಟಕ ಅರಣ್ಯ ಇಲಾಖೆಯ ಹೆಮ್ಮೆಯ ಪ್ರತೀಕವೂ ಕಾಡಿನಿಂದ ನಾಡಿಗೆ ಬಂದು ಪುಂಡಾಟ ಮೆರೆಯುವ ಆನೆಗಳ ಎಡೆಮುರಿ ಕಟ್ಟುವಲ್ಲಿ ನಿಸ್ಸೀಮನಾಗಿರುವ 57 ವರ್ಷದ ಅಭಿಮನ್ಯು ಮತ್ತಿಗೂಡು ಆನೆ ಶಿಬಿರದ ವಾಸಿಯಾಗಿದ್ದಾನೆ. 1977ರಲ್ಲಿ ಕೊಡಗಿನ ಹೆಬ್ಬಾಳ ಅರಣ್ಯ ಪ್ರದೇಶದಲ್ಲಿ ಗುಂಡಿಗೆ ಬೀಳಿಸಿ ಸೆರೆ ಹಿಡಿಯಲಾಗಿತ್ತು. 2.72 ಮೀ. ಎತ್ತರ, 3.51 ಮೀ ಉದ್ದವಿದ್ದು, ಸುಮಾರು 5000 ಕೆಜಿ ತೂಕ ಹೊಂದಿದ್ದಾನೆ. 21 ವರ್ಷದಿಂದ ದಸರಾ ಮಹೋತ್ಸವ ಪಾಲ್ಗೊಳ್ಳುತ್ತಿರುವ ಅಭಿಮನ್ಯು, ಎರಡು ಬಾರಿ ಚಿನ್ನದ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದಾನೆ. ಈ ಬಾರಿಯೂ ಚಿನ್ನದ ಅಂಬಾರಿ ಹೊರಲಿದ್ದಾನೆ. ಮಾವುತ ಜೆ.ಎಸ್.ವಸಂತ ಹಾಗೂ ಕಾವಾಡಿ ಜೆ.ಕೆ.ರಾಜು ಅಭಿಮನ್ಯುವಿನ ಪಾಲನೆಯಲ್ಲಿ ತೊಡಗಿದ್ದಾರೆ. ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಡಾನೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಸೈ ಎನಿಸಿಕೊಂಡಿದ್ದಾನೆ. ಗ್ರಾಮಗಳಿಗೆ ಬಂದು ಉಪಟಳ ನೀಡುತ್ತಿದ್ದ ಹುಲಿಯ ಸೆರೆ ಹಿಡಿಯುವ ಹಾಗೂ ಕಾಡಿಗಟ್ಟುವ ಕಾರ್ಯಾಚರಣೆಯಲ್ಲಿಯೂ ಚಾಣಾಕ್ಷತನ ಹೊಂದಿದ್ದಾನೆ. ಇದುವರೆಗೂ 150 ಕಾಡಾನೆ ಸೆರೆ, 50 ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದೆ.



ಅರ್ಜುನ



7 ಬಾರಿ ಅಂಬಾರಿ ಹೊತ್ತ ಹೆಗ್ಗಳಿಕೆ 63 ವರ್ಷದ ಅರ್ಜುನನದು. ಈ ಬಾರಿ ನಿಶಾನೆ ಆನೆ. ನಾಗರಹೊಳೆಯ ಕಾಕನಕೋಟೆ ಅರಣ್ಯದಲ್ಲಿ 1968ರಲ್ಲಿ ಖೆಡ್ಡಾದ ಮೂಲಕ ಸೆರೆ ಸಿಕ್ಕಿದ್ದ. ದಸರಾದಲ್ಲಿ 22 ವರ್ಷದಿಂದ ಪಾಲ್ಗೊಂಡ ಅನುಭವ. ಪ್ರಸ್ತುತ ಬಳ್ಳೆ ಶಿಬಿರದಲ್ಲಿ ನೆಲೆಸಿದ್ದು, 5775 ಕೆಜಿ ತೂಕ, 2.95 ಮೀ. ಎತ್ತರ ಹಾಗೂ 3.75 ಉದ್ದವಿದ್ದಾನೆ. ಇವನ ಮಾವುತ ವಿನು, ಕಾವಾಡಿ ಮಧು.

ಕಾವೇರಿ



ಕುಮ್ಕಿ ಆನೆಯಾಗಿರುವ ಕಾವೇರಿ, 10 ಬಾರಿ ದಸರಾದಲ್ಲಿ ಪಾಲ್ಗೊಂಡಿದ್ದಾಳೆ. 45 ವರ್ಷದ ಈಕೆ, 2.60 ಮೀ. ಎತ್ತರ, 3.32 ಮೀ. ಉದ್ದವಿದ್ದು, 3245 ಕೆಜಿ ತೂಗುತ್ತಾಳೆ. 2009ರಲ್ಲಿ ಸೋಮವಾರಪೇಟೆ ಬಳಿಯ ಆಡಿನಾಡೂರು ಅರಣ್ಯ ಪ್ರದೇಶದಲ್ಲಿ ಸೆರೆ ಸಿಕ್ಕಿದ್ದ ಈಕೆ, ದುಬಾರೆ ಶಿಬಿರ ವಾಸಿ. ಮಾವುತ ಜೆ.ಕೆ.ಡೋಬಿ, ಕಾವಾಡಿ ಜೆ.ಎ.ರಂಜನ್.

ವಿಜಯ



63 ವರ್ಷದ ವಿಜಯ, 2.29 ಮೀ. ಎತ್ತರ ಹಾಗೂ 3.00 ಮೀ. ಉದ್ದವಿದ್ದಾನೆ 2760 ಕೆಜಿ ತೂಕ. ಈಕೆ ದುಬಾರೆ ಅರಣ್ಯ ಪ್ರದೇಶದಲ್ಲಿ 1963ರಲ್ಲಿ ಸೆರೆ ಸಿಕ್ಕಿದ್ದಳು. ಕಳೆದ 13 ವರ್ಷಗಳಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾಳೆ. ಈಕೆಯ ಮಾವುತ ಭೋಜಪ್ಪ ಹಾಗೂ ಕಾವಾಡಿ ಬಿ.ಪಿ.ಭರತ್. ದುಬಾರೆ ಕ್ಯಾಂಪ್ ನಿವಾಸಿಯಾಗಿದ್ದಾಳೆ.


ಎಂ.ಟಿ.ಯೋಗೇಶ್ ಕುಮಾರ್, ಮೂಡಲಹುಂಡಿ, ಮೊ: 98808 13195

ಗೋಪಾಲಸ್ವಾಮಿ




ದಸರಾದಲ್ಲಿ 8ನೇ ಬಾರಿಗೆ ಪಾಲ್ಗೊಳ್ಳುತ್ತಿರುವ ಗೋಪಾಲಸ್ವಾಮಿಗೆ 39 ವರ್ಷ. 2009ರಲ್ಲಿ ಸಕಲೇಶಪುರದ ಹೆತ್ತೂರಿನಲ್ಲಿ ಸೆರೆ ಸಿಕ್ಕಿದ್ದ. 5460 ಕೆಜಿ ತೂಕ, 2.85 ಮೀಟರ್ ಎತ್ತರ, 3.42 ಮೀಟರ್ ಉದ್ದವಿದ್ದಾನೆ ಮತ್ತಿಗೂಡು ಆನೆ ಶಿಬಿರದ ವಾಸಿ. ಈತನ ಮಾವುತ ಜೆ.ಡಿ.ಮಂಜು, ಕಾವಾಡಿ ಸೃಜನ್.

ಗೋಪಿ




ದುಬಾರೆ ಆನೆ ಶಿಬಿರದ ಗೋಪಿ 11 ವರ್ಷದಿಂದ ದಸರಾದಲ್ಲಿ ಪಾಲ್ಗೊಳ್ಳುತ್ತಿದೆ 41 ವರ್ಷದ ಗೋಪಿ, 1993ರಲ್ಲಿ ಕಾರೇಕೊಪ್ಪ ಅರಣ್ಯದಲ್ಲಿ ಸೆರೆಯಾಗಿದ್ದ 4670 ಕೆಜಿ ತೂಕವಿದ್ದು, 2.92 ಮೀಟರ್ ಎತ್ತರ, 3.42 ಮೀಟರ್ ಉದ್ದವಿದ್ದಾನೆ ಇವನ ಮಾವುತ ನವೀನ್ ಕುಮಾರ್, ಕಾವಾಡಿ ಜಿಆರ್.ಶಿವು.

ಚೈತ್ರ




ಬಂಡೀಪುರ ರಾಂಪುರ ಕ್ಯಾಂಪ್‌ನ 49 ವರ್ಷದ ಚೈತ್ರ, ನಾಲ್ಕು ವರ್ಷದಿಂದ ದಸರಾದ ಕುಮ್ಕಿ ಆನೆಯಾಗಿ ಪಾಲ್ಗೊಂಡಿದೆ. ಭೋಜ ಮಾವುತನಾಗಿ, ಖಲೀಂ ಪಾಶ ಕಾವಾಡಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಧನಂಜಯ




ದುಬಾರೆ ಶಿಬಿರದ 44 ವರ್ಷದ ಧನಂಜಯ ನಾಲ್ಕು ವರ್ಷದಿಂದ ದಸರಾದಲ್ಲಿ ಪಾಲ್ಗೊಂಡಿದ್ದಾನೆ. 2013ರಲ್ಲಿ ಹಾಸನದ ಯಸಳೂರು ವಲಯದಲ್ಲಿ ಸೆರೆ ಸಿಕ್ಕಿದ್ದ. 2.92 ಮೀ. ಎತ್ತರ, 3.84 ಮೀ. ಉದ್ದ 4890 ಕೆಜಿ ತೂಕ ಹೊಂದಿದ್ದಾನೆ. ಈ ಬಾರಿ ಇವನಿಗೆ ಪಟ್ಟದ ಆನೆ ಜವಾಬ್ದಾರಿ. ಮಾವುತ ಜೆ.ಸಿ.ಭಾಸ್ಕರ, ಕಾವಾಡಿ ಜೆ.ಎ.ಮಣಿ.

ಭೀಮ



ಭೀಮನಕಟ್ಟೆ ಬಳಿ ಸೆರೆ ಸಿಕ್ಕ ಭೀಮನಿಗೆ 22 ವರ್ಷ. ಈತ 2018ರಲ್ಲಿ ಮೊದಲ ಬಾರಿ ದಸರಾದಲ್ಲಿ ಪಾಲ್ಗೊಂಡಿದ್ದ 4345 ಕೆಜಿ ತೂಕ, 2.87 ಮೀ. ಎತ್ತರ, 3.05 ಮೀ. ಉದ್ದ ಇದ್ದಾನೆ. ಭವಿಷ್ಯದಲ್ಲಿ ಅಂಬಾರಿ ಹೊರುವ ಆನೆ. ಮತ್ತಿಗೋಡು ಶಿಬಿರದಲ್ಲಿ ವಾಸ ಮಾವುತ ಗುಂಡು ಹಾಗೂ ಕಾವಾಡಿ ನಂಜುಂಡಸ್ವಾಮಿ. ಈ ಬಾರಿ ಪಟ್ಟದ ಆನೆ ನಿಶಾನೆ ಆನೆಯಾಗಿ ಕರ್ತವ್ಯ

ಮಹೇಂದ್ರ



2018ರಲ್ಲಿ ಸೆರೆ ಸಿಕ್ಕ ಮಹೇಂದ್ರ, ಮತ್ತಿಗೂಡು ಕ್ಯಾಂಪ್ ವಾಸಿ. ಇವನಿಗೆ 39 ವರ್ಷ. 2.74 ಮೀ. ಎತ್ತರ, 3.25 ಮೀ. ಉದ್ದವಿದ್ದು, 4450 ಕೆಜಿ ತೂಕವಿದ್ದಾನೆ. ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದು, ಶ್ರೀರಂಗಪಟ್ಟಣ ದಸರಾದಲ್ಲಿ ಅಂಬಾರಿ ಹೊರುವ ಜವಾಬ್ದಾರಿ. ರಾಜಣ್ಣ ಹಾಗೂ ಮಲ್ಲಿಕಾರ್ಜುನ, ಮಾವುತ, ಕಾವಾಡಿಗಳಾಗಿದ್ದಾರೆ.

ಪಾರ್ಥಸಾರಥಿ



ಬಂಡೀಪುರದ ರಾಂಪುರ ಕ್ಯಾಂಪ್‌ನ 18 ವರ್ಷದ ಪಾರ್ಥಸಾರಥಿ 2.60 ಮೀ. ಎತ್ತರ, 3.30 ಮೀ. ಉದ್ದ 3445 ಕೆಜಿ ತೂಕವಿದ್ದಾನೆ. ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದೆ. ಮಾವುತ ಜೆ.ಎಸ್.ನಾಗೇಶ್, ಕಾವಾಡಿ ಆರ್.ಹೇಮಂತ್ ಕುಮಾರ್.

ಶ್ರೀರಾಮ



ದುಬಾರೆ ಕ್ಯಾಂಪ್‌ನ 40 ವರ್ಷದ ಶ್ರೀರಾಮ ಇದೇ ಮೊದಲ ಬಾರಿಗೆ ದಸರಾದಲ್ಲಿ ಪಾಲ್ಗೊಳ್ಳುತ್ತಿದ್ದು 2.77 ಮೀ. ಎತ್ತರ, 3.45 ಮೀ. ಉದ್ದ, 4475 ಕೆಜಿ ತೂಕವಿದ್ದಾನೆ. 2016ರಲ್ಲಿ ಹಾಸನದ ಬಳಿ ಸೆರೆ ಸಿಕ್ಕಿದ್ದ. ಮಾವುತನಾಗಿ ಜೆ.ಡಿ.ಸರಿ, ಕಾವಾಡಿ ಜೆ.ಗಣೇಶ್.

ಸುಗ್ರೀವ



ದುಬಾರೆ ಆನೆ ಶಿಬಿರದ 40 ವರ್ಷದ ಸುಗ್ರೀವ 2016ರಲ್ಲಿ ಕೊಡಗಿನ ಸುಂಟಿಕೊಪ್ಪದ ಭೂತನಕಾಡು ವಲಯದ ಕಾಫಿ ಎಸ್ಟೇಟ್‌ನಲ್ಲಿ ಸೆರೆ ಸಿಕ್ಕಿದ್ದ. 2.60 ಮೀ. ಎತ್ತರ, 3.25 ಮೀ. ಉದ್ದ, 4785 ಕೆಜಿ ತೂಕವಿದ್ದಾನೆ. ಮಾವುತ ಶಂಕರ್, ಕಾವಾಡಿ ಹರೀಶ್.

ಲಕ್ಷ್ಮೀ



21 ವರ್ಷದ ಲಕ್ಷ್ಮೀ ಬಂಡೀಪುರದ ರಾಂಪುರ ಕ್ಯಾಂಪ್‌ನ ವಾಸಿ. ಎರಡನೇ ಬಾರಿಗೆ ದಸರಾದಲ್ಲಿ ಪಾಲ್ಗೊಂಡಿತ್ತು. ಆದರೆ ಸೆ.19ರಂದು ಅರಮನೆಯ ಅಂಗಳದಲ್ಲೇ ಗಂಡು ಮರಿಗೆ ಜನ್ಮ ನೀಡುವ ಮೂಲಕ ಇತಿಹಾಸ ಬರೆದಿದೆ. 2.32 ಮೀ. ಎತ್ತರ, 2.60 ಮೀ. ಉದ್ದ, 3150 ಕೆಜಿ ತೂಕವಿದ್ದಾಳೆ. ಮಾವುತ ಜೆ.ಹೆಚ್.ಚಂದ್ರ, ಕಾವಾಡಿ ಜೆ.ಕೆ.ಗಣೇಶ್. ಈಕೆಯ ಪುತ್ರ ಶ್ರೀ ದತ್ತಾತ್ರೇಯ.

ಹುಲಿ ದಾಳಿಗೆ ವ್ಯಕ್ತಿ ಬಲಿ

ಹಿಂದಿನ ದಾಳಿಯಲ್ಲಿ ಕೊಂದ ಹಸು ಹೂಳುವ ವೇಳೆ ದಾಳಿ




ಮಡಿಕೇರಿ,ಸೆ.24– ಹುಲಿ ದಾಳಿಗೆ ವ್ಯಕ್ತಿಯೊಬ್ಬರು ಬಲಿಯಾಗಿರುವ ಘಟನೆ ಕೋತೂರು ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ವಾಸಿ ಬೊಮ್ಮಾಡ ಹಾಡಿ ನಿವಾಸಿ ಜೇನು ಕುರುಬರ ಕೆಂಚ ಎಂಬುವರ ಪುತ್ರ ಕೃಷ್ಣ(52) ಹುಲಿಗೆ ಬಲಿಯಾದವರು.

ಘಟನೆ ವಿವರ: ಸೆ.23ರಂದು ಇದೇ ಸ್ಥಳದಲ್ಲಿ ಹುಲಿ ಹಸುವೊಂದರ ಮೇಲೆ ದಾಳಿ ನಡೆಸಿತ್ತು ಮೃತಪಟ್ಟ ಹಸುವಿನ ಕಳೇಬರವನ್ನು ಕೃಷ್ಣ ಮತ್ತು ಇತರ 3 ಮಂದಿ ಸಂಜೆ ವೇಳೆ ಹೂಳಲು ಮುಂದಾಗಿದ್ದರು. ಈ ಸಂದರ್ಭ ಕಾಡಿನಲ್ಲಿ ಅವಿತುಕೊಂಡಿದ್ದ ಹುಲಿ ಸಂಜೆ 4.15 ಗಂಟೆಯ ಸಮಯದಲ್ಲಿ ಕೃಷ್ಣನ ಮೇಲೆ ದಾಳಿ ಮಾಡಿತು. ಈ ಸಂದರ್ಭ ಜೊತೆಯಲ್ಲಿದ್ದ ಇತರ ಮೂರು ಮಂದಿ ಓಡಿ ತಪ್ಪಿಸಿಕೊಂಡಿದ್ದಾರೆ. ಕೃಷ್ಣನ ಪಕ್ಕೆಲುಬು ಭಾಗಕ್ಕೆ ಕಚ್ಚಿ ಅನತಿ ದೂರ ಹೊತ್ತೊಯ್ದಿದ್ದು, ರಾಜು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜೊತೆಗಾರರು ಬೊಬ್ಬೆ ಹಾಕಿದ್ದರಿಂದ ಮೃತದೇಹವನ್ನು ಅಲ್ಲೇ ಬಿಟ್ಟು ಹುಲಿ ಕಾಡಿನೊಳಗೆ ಪರಾರಿಯಾಗಿದೆ. ಈ ಘಟನೆಯಿಂದ ಸುತ್ತಮುತ್ತಲ ಗ್ರಾಮಗಳ ನಿವಾಸಿಗಳಿಗೆ ಜೀವ ಭೀತಿ ಕಾಡುತ್ತಿದೆ. ಅರಣ್ಯ ಇಲಾಖೆ ನಿರ್ಲಕ್ಷ್ಯ ಮತ್ತು ಹುಲಿ ಹಾವಳಿ ತಡೆಗೆ ಇಲಾಖೆ ಕ್ರಮ ಕೈಗೊಳ್ಳದಿರುವುದೇ ಇಂತಹ ಘಟನೆಗಳಿಗೆ ಕಾರಣವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ. ಈ ಪ್ರದೇಶಕ್ಕೆ ಹೊಂದಿಕೊಂಡಂತೆ ನಾಗರಹೊಳೆ ಅಭಯಾರಣ್ಯವಿದ್ದು, ಅರಣ್ಯದಿಂದ ಹೊರಬಂದ ಹುಲಿ ಈ ದಾಳಿ ನಡೆಸಿರಬಹುದು ಎಂದು ಶಂಕಿಸಲಾಗಿದೆ. ಮೃತ ಕೃಷ್ಣ ಅವರ ಮೃತದೇಹವನ್ನು ಕಾನೂರು ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಮೃತ ದೇಹದ ಪರಿಶೀಲನೆ ನಡೆಸಿದ ಸಂದರ್ಭ ಪಕ್ಕೆಲುಬು ಭಾಗದಲ್ಲಿ ಆಳವಾಗಿ ಹುಲಿ ಕಚ್ಚಿರುವ ಗುರುತುಗಳು ಕಂಡು ಬಂದಿದೆ.

ಪ್ರತಿಭಟನೆ: ಹುಲಿ ದಾಳಿಗೆ ಮಾನವ ಜೀವ ಬಲಿಯಾಗಿರುವ ಹಿನ್ನೆಲೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ನೇತೃತ್ವದಲ್ಲಿ ಕಾನೂರುವಿನ ಸರಕಾರಿ ಪ್ರಾಥಮಿಕ ಆಸ್ಪತ್ರೆ ಮುಂದೆ ಅಹೋರಾತ್ರಿ ಪ್ರತಿಭಟನೆ ನಡೆಸಲು ರೈತ ಸಂಘ ಮುಂದಾಗಿದೆ. ಹುಲಿ ದಾಳಿಯಿಂದ ಇದೀಗ ಕಾರ್ಮಿಕರು, ಶಾಲಾ ಮಕ್ಕಳು, ಸಾರ್ವಜನಿಕರು ತಿರುಗಾಡದಂತಹ ಪರಿಸ್ಥಿತಿ ತಲೆದೋರಿದೆ. ನಿರಂತರವಾಗಿ ಜಾನುವಾರುಗಳು ಹುಲಿಗೆ ಬಲಿಯಾಗುತ್ತಿವೆ. ಇದರಿಂದಾಗಿ ಜಾನುವಾರು ಮಾಲೀಕರಿಗೆ ಲಕ್ಷಾಂತರ ರೂ. ನಷ್ಟವಾಗುತ್ತಿದ್ದು, ಅರಣ್ಯ ಇಲಾಖೆ ಅಲ್ಪ ಪ್ರಮಾಣದ ಪರಿಹಾರ ಮತ್ತು ಹುಲಿ ಸೆರೆಗೆ ಕೇವಲ ಭರವಸೆ ನೀಡುತ್ತಿದೆ ಎಂದು ರೈತ ಸಂಘ ಆಕ್ರೋಶ ವ್ಯಕ್ತಪಡಿಸಿದೆ. ಅರಣ್ಯ ಇಲಾಖೆ ಮಾನವ ಜೀವ ಹಾನಿ ಮಾಡಿರುವ ಹುಲಿ ಸೆರೆಗೆ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

ಕೊಡಗು ಜಿಲ್ಲೆಯ ರಸ್ತೆ ಅಭಿವೃದ್ಧಿಗೆ ರಾಜ್ಯಸಭಾ ನಿಧಿಯಿಂದ 2.46 ಕೋಟಿ ರೂ. ನೀಡಿದ ಸುಬ್ರಮಣಿಯನ್ ಸ್ವಾಮಿ

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ನಿರಂತರ ಪ್ರಯತ್ನದ ಫಲ


ಡಾ.ಸುಬ್ರಮಣಿಯನ್‌ಸ್ವಾಮಿ


ಎನ್.ಯು.ನಾಚಪ್ಪ

ಮಡಿಕೇರಿ,ಸೆ.24– ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ನಿರಂತರ ಪ್ರಯತ್ನದ ಫಲವಾಗಿ ಕೊಡವರ ಮೇಲೆ ಅಪಾರ ಅಭಿಮಾನ ತೋರಿರುವ ಹಿರಿಯ ರಾಜಕಾರಣಿ, ಆರ್ಥಿಕ ತಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ತಮ್ಮ ರಾಜ್ಯಸಭಾ ನಿಧಿಯಿಂದ ಕುಗ್ರಾಮಗಳ 'ಬಲ್ಯಮನೆ' ರಸ್ತೆ ಮತ್ತು ಇತರ ರಸ್ತೆಗಳ ಅಭಿವೃದ್ಧಿಗೆ 2.46 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಸಿಎನ್‌ಸಿ ಸಂಘಟನೆಯ ಮನವಿಗೆ ಸ್ಪಂದಿಸಿ ರಾಜ್ಯಸಭಾ ನಿಧಿಯಿಂದ ಇಷ್ಟು ದೊಡ್ಡ ಮೊತ್ತದ ಕೊಡುಗೆ ನೀಡಿರುವುದು ಶ್ಲಾಘನೀಯ ಮತ್ತು ಸಂಘಟನೆಯೊಂದರ ಕೋರಿಕೆಗೆ ಈ ರೀತಿಯಲ್ಲಿ ಸ್ಪಂದಿಸಿರುವುದು ವಿಶೇಷ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳಿಗಾಗಿ ದೊಡ್ಡ ಪ್ರಮಾಣದ ಆರ್ಥಿಕ ಸಹಾಯವನ್ನು ನೀಡಿದ ಡಾ.ಸುಬ್ರಮಣಿಯನ್ ಸ್ವಾಮಿ ಹಾಗೂ ಈ ಕುರಿತು ಮುತುವರ್ಜಿ ವಹಿಸಿದ ವಿರಾಟ್ ಹಿಂದೂಸ್ಥಾನ್ ಸಂಗಮ್‌ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಡಾ.ಸ್ವಾಮಿಯವರ ಆಪ್ತ ಮುಂಬಯಿಯ ಜಗದೀಶ್ ಶೆಟ್ಟಿಯ ಅವರುಗಳಿಗೆ ಕೊಡವರ ಪರವಾಗಿ ಸಿ.ಎನ್.ಸಿ ಕೃತಜ್ಞತೆಯನ್ನು ಸಲ್ಲಿಸುತ್ತದೆ ಎಂದು ನಾಚಪ್ಪ ಹೇಳಿದ್ದಾರೆ.

ರೂ.2.46 ಕೋಟಿಯನ್ನು ಮೂರು ವಿಭಾಗಗಳನ್ನಾಗಿ ಮಾಡಿದ್ದು, 1ನೇ ವಿಭಾಗಕ್ಕೆ ರೂ.1.50 ಕೋಟಿ, 2ನೇ ವಿಭಾಗಕ್ಕೆ ರೂ. 21.14 ಲಕ್ಷ ಮತ್ತು 3ನೇ ವಿಭಾಗಕ್ಕೆ ರೂ.75 ಲಕ್ಷ ಎಂದು ಬಿಡುಗಡೆಗೊಳಿಸಲಾಗಿದೆ.

ಮುಂಬಯಿನ ಸಬ್ ಅರ್ಬನ್ ಡಿಸ್ಟ್ರಿಕ್ಟ್ ಕಲೆಕ್ಟೊರೇಟ್‌ಗೆ ಹಣ ಜಮಾವಣೆಗೊಂಡಿದ್ದು, ಅಲ್ಲಿಂದ ನೇರವಾಗಿ ಕೊಡಗು ಜಿಲ್ಲಾಧಿಕಾರಿಗಳ ಖಾತೆಗೆ ವರ್ಗಾವಣೆಗೊಂಡಿದೆ ಎಂದು ತಿಳಿಸಿದ್ದಾರೆ.

ಅಭಿವೃದ್ಧಿ ಕಾರ್ಯಗಳು: ಒಂದೂವರೆ ಕೋಟಿ ರೂ.ಗಳಲ್ಲಿ ಕುಶಾಲನಗರ ತಾಲೂಕಿನ 'ನೂರೊಕ್ಕನಾಡ್ ಹಿಲ್ಸ್' ರಸ್ತೆ, ಮರಗೋಡು ಪಂಚಾಯಿತಿ, ಮಡಿಕೇರಿ ತಾಲೂಕಿನ ಕತ್ತಲೆಕಾಡು ರಸ್ತೆ ಅಭಿವೃದ್ಧಿ, ರೂ.21,14 ಲಕ್ಷದಲ್ಲಿ ಕಡಗದಾಳು ಪಂಚಾಯಿತಿ ವ್ಯಾಪ್ತಿಯ ಇಬ್ನಿವಳವಾಡಿ ಗ್ರಾಮದ ಎನ್.ಎ.ಅಪ್ಪಯ್ಯ ಹಾಗೂ ಎನ್.ಕೆ.ನಂದಾ ಅವರ ಮನೆಗೆ ತೆರಳುವ ರಸ್ತೆ ಅಭಿವೃದ್ಧಿ, ರೂ.75 ಲಕ್ಷದಲ್ಲಿ ಮಡಿಕೇರಿ ತಾಲೂಕು, ಕುಶಾಲನಗರ ತಾಲೂಕು, ಸೋಮವಾರಪೇಟೆ ತಾಲೂಕು, ವಿರಾಜಪೇಟೆ ತಾಲೂಕು ಮತ್ತು ಪೊನ್ನಂಪೇಟೆ ತಾಲೂಕು ವ್ಯಾಪ್ತಿಯಲ್ಲಿನ ಗ್ರಾಮೀಣ ರಸ್ತೆಗಳು ಅಭಿವೃದ್ಧಿಯಾಗಲಿವೆ.

ರೂ.75 ಲಕ್ಷವನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ. ರೂ.30 ಲಕ್ಷದಲ್ಲಿ ಸೋಮವಾರಪೇಟೆ ತಾಲೂಕು ಕೆದಕಲ್ ಗ್ರಾ.ಪಂ 'ಪುಲ್ಲೇರ ಐನ್‌ಮನೆ' ರಸ್ತೆ ಅಭಿವೃದ್ಧಿ, ರೂ.10 ಲಕ್ಷ ಹಣವನ್ನು ಮಡಿಕೇರಿ ತಾಲೂಕು ಚೆಯ್ಯಂಡಾಣೆ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಕರಡ ಗ್ರಾಮದ 'ಮಲೆತಿರಿಕೆ ದೇವನೆಲೆ'ಗೆ ತೆರಳುವ ರಸ್ತೆ ಅಭಿವೃದ್ಧಿಗೆ ರೂ.10 ಲಕ್ಷ ವಿರಾಜಪೇಟೆ ತಾಲೂಕು ಕಡಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ 'ಬಲ್ಲಡಿಚಂಡ ಬಲ್ಯಮನೆ' ರಸ್ತೆ ಸೇರಿದಂತೆ ಇನ್ನಿತರ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದರು.

ಇದೇ ನ.26ರಂದು ಮಡಿಕೇರಿಯಲ್ಲಿ ನಡೆಯುವ '32'ನೇ ಕೊಡವ ನ್ಯಾಷನಲ್ ಡೇ'ಗೆ ಆಗಮಿಸುವ ಡಾ.ಸ್ವಾಮಿ ಅವರು ಪೂರ್ಣಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟಿಸಲಿದ್ದಾರೆ. ಅನುದಾನದ ಸಂಬಂಧದ ಪತ್ರ ವ್ಯವಹಾರಗಳಿಗೆ ಸ್ಪಂದಿಸಿ, ತುರ್ತು ಕ್ರಮ ಕೈಗೊಂಡು ಸಹಕರಿಸಿದ ಡಾ. ಸುಬ್ರಮಣಿಯನ್ ಸ್ವಾಮಿ, ಕೊಡಗು ಜಿಲ್ಲಾಧಿಕಾರಿಗಳು, ಸಿಬ್ಬಂದಿ ವರ್ಗ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಮತ್ತವರ ಸಹಪಾಠಿ ಸಹದ್ಯೋಗಿಗಳ ಕಾಳಜಿಗೆ ಆಭಾರಿಯಾಗಿರುವುದಾಗಿ ಎನ್.ಯು. ನಾಚಪ್ಪ ತಿಳಿಸಿದ್ದಾರೆ.

ಕರ್ತವ್ಯದಲ್ಲಿದ್ದ ಅರಣ್ಯ ವೀಕ್ಷಕ ನಿಗೂಢ ನಾಪತ್ತೆ

ಮಡಿಕೇರಿ,ಸೆ.24– ಕರ್ತವ್ಯದಲ್ಲಿದ್ದ ಅರಣ್ಯ ವೀಕ್ಷಕ ನಿಗೂಢ ರೀತಿಯಲ್ಲಿ ನಾಪತ್ತೆಯಾಗಿರುವ ಘಟನೆ ವಿರಾಜಪೇಟೆ ತಾಲೂಕಿನ ಮಾಕುಟ್ಟ ಅರಣ್ಯ ವ್ಯಾಪ್ತಿಯಲ್ಲಿ ನಡೆದಿದೆ. ಮೂಲತಃ ಬಾಳೆಲೆ ಗ್ರಾಮದ ನಿವಾಸಿ ಪವನ್(23) ನಾಪತ್ತೆಯಾದ ಅರಣ್ಯ ವೀಕ್ಷಕನಾಗಿದ್ದು, ಕಾಲು ಜಾರಿ ನದಿಗೆ ಬಿದ್ದಿರುವ ಶಂಕೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ನದಿಯಲ್ಲಿ ಶೋಧ ಕಾರ್ಯ ನಡೆಸಲಾಗುತ್ತಿದೆ.

ಘಟನೆ ಹಿನ್ನೆಲೆ: ಮಾಕುಟ್ಟ ಮೀಸಲು ಅರಣ್ಯ ವ್ಯಾಪ್ತಿಗೆ ಒಳಪಡುವ ವಿ.ಬಾಡಗ ಗ್ರಾಮದಲ್ಲಿ ಕಾಡಾನೆ ಕಾರ್ಯಾಚರಣೆಗಾಗಿ ಅರಣ್ಯ ವೀಕ್ಷಕ ಪವನ್ ಮತ್ತು ಇತರ 4 ಮಂದಿಯ ತಂಡ ಸೆ.23ರ ಸಂಜೆ ವೇಳೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿತ್ತು. ಈ ವೇಳೆ ಪವನ್ ದಿಢೀರ್ ಆಗಿ ನಾಪತ್ತೆಯಾಗಿದ್ದಾನೆ.

ಅರಣ್ಯ ಇಲಾಖೆ ಸಿಬ್ಬಂದಿಗಳು, ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಅಗ್ನಿಶಾಮಕ ದಳ, ಬಿಟ್ಟಾಂಗಲ ಗ್ರಾ.ಪಂ ಸದಸ್ಯರು ಸೇರಿದಂತೆ ಸ್ಥಳೀಯರು ನಾಪತ್ತೆಯಾದ ಪವನ್‌ಗಾಗಿ ರಾತ್ರಿಯವರೆಗೂ ಹುಡುಕಾಟ ನಡೆಸಿದ್ದಾರೆ. ಆದರೆ ಪವನ್ ಪತ್ತೆಯಾಗಲಿಲ್ಲ. ಈ ಹಿನ್ನೆಲೆಯಲ್ಲಿ ಅರಣ್ಯ ಪಕ್ಕದಲ್ಲಿ ಹರಿಯುತ್ತಿರುವ ನದಿಯಲ್ಲಿ ಆತ ಕಾಲುಜಾರಿ ಬಿದ್ದಿರುವ ಶಂಕೆ ವ್ಯಕ್ತಗೊಂಡಿದೆ.

ಮಡಿಕೇರಿಯಿಂದ ಸೆ.23ರ ತಡರಾತ್ರಿ ಎನ್.ಡಿ.ಆರ್.ಎಫ್ ಸಿಬ್ಬಂದಿಗಳ ಒಂದು ತಂಡವನ್ನು ಸ್ಥಳಕ್ಕೆ ಕರೆಸಿಕೊಂಡು ಅರಣ್ಯದಲ್ಲಿ ಶೋಧ ಕಾರ್ಯ ನಡೆಸಲಾಯಿತಾದರೂ ಫಲ ನೀಡಲಿಲ್ಲ. ಹೀಗಾಗಿ ಸೆ.24ರ ಬೆಳಗಿನಿಂದ ವಿ.ಬಾಡಗ ವ್ಯಾಪ್ತಿಯ ನೀರುಗುಂಡಿ ಎಂಬ ಪ್ರದೇಶದ ಕೀರೆಹೊಳೆ ನದಿಯಲ್ಲಿ ಶೋಧ ಕಾರ್ಯ ಮುಂದುವರೆಸಲಾಯಿತು. ಸಂಜೆ ವೇಳೆವರೆಗೂ ನಿರಂತರ ಶೋಧ ಕಾರ್ಯ ನಡೆಸಲಾಯಿತಾದರೂ ಯಾವುದೇ ಕುರುಹುಗಳು ಪತ್ತೆಯಾಗಿಲ್ಲ. ಸ್ಥಳದಲ್ಲಿ ಎನ್.ಡಿ.ಆರ್.ಎಫ್, ಅಗ್ನಿ ಶಾಮಕ ದಳ ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿಗಳು ಮೊಕ್ಕಾಂ ಹೂಡಿದ್ದು, ನಾಳೆ(ಭಾನುವಾರ)ಯೂ ಶೋಧ ಕಾರ್ಯ ನಡೆಯಲಿದೆ.

ಪೋಷಕರ ಆಕ್ರಂದನ: ಪವನ್ ನಾಪತ್ತೆಯಾಗಿರುವ ಬಗ್ಗೆ ಸೆ. 23ರ ರಾತ್ರಿ ಅರಣ್ಯ ಇಲಾಖೆ ಅಧಿಕಾರಿಗಳು ಆತನ ಪೋಷಕರಿಗೆ ಮಾಹಿತಿ ನೀಡಿದ್ದಾರೆ. ಆತನ ಪೋಷಕರು ಕೂಡ ಸ್ಥಳಕ್ಕಾಗಮಿಸಿ ರೋದಿಸುತ್ತಿದ್ದ ದೃಶ್ಯ ಕಂಡ ಬಂತು. ತಮ್ಮನ್ನು ಕೂಡ ಅರಣ್ಯದೊಳಗೆ ತೆರಳಲು ಅವಕಾಶ ನೀಡುವಂತೆ ಸ್ಥಳದಲ್ಲಿದ್ದ ಅರಣ್ಯಾಧಿಕಾರಿಗಳಲ್ಲಿ ಮನವಿ ಮಾಡಿದರು. ಮಾಕುಟ್ಟ ದಟ್ಟ ಅರಣ್ಯವಾಗಿದ್ದು, ಪವನ್ ನಾಪತ್ತೆಯಾದ ಪ್ರದೇಶ ದುರ್ಗಮ ಸ್ಥಳವಾಗಿರುವ ಹಿನ್ನೆಲೆಯಲ್ಲಿ ಅಲ್ಲಿಗೆ ತೆರಳುವುದು ಸೂಕ್ತವಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸಮಜಾಯಿಷಿ ನೀಡಿದರು.

ಶೆಡ್ ಹೋಟೆಲ್‌ನಲ್ಲಿ ಚಿಬ್ಬಲು ಇಡ್ಲಿ ಸವಿದ ಡಿಕೆಶಿ



ಹಲಗೂರು, ಸೆ.24– ಮಳವಳ್ಳಿ ತಾಲೂಕಿನ ಹಲಗೂರು ಪಟ್ಟಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಲಗೂರಿನ ಬಾಬು ಶೆಡ್ ಹೋಟೆಲ್‌ನಲ್ಲಿ ಕಾರ್ಯಕರ್ತರೊಂದಿಗೆ ಚಿಬ್ಬಲು ಇಡ್ಲಿ ಹಾಗೂ ದೋಸೆ ಸವಿದರು.

ಜಿಲ್ಲಾ ಕಾಂಗ್ರೆಸ್ ಮುಖಂಡ ಹಾಗೂ ಮಂಡ್ಯ ಜಿಲ್ಲಾ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ಕೆ.ಪುಟ್ಟಸ್ವಾಮಿ ವಿಧಿವಶರಾದ ಹಿನ್ನೆಲೆಯಲ್ಲಿ ಅವರ ಸ್ವಗ್ರಾಮ ಬೆನಮನಹಳ್ಳಿಗೆ ಡಿ.ಕೆ.ಶಿವಕುಮಾರ್ ತೆರಳಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ವಾಪಸ್ ತೆರಳುವಾಗ ಮಾರ್ಗ ಮಧ್ಯೆ ಹಲಗೂರಿನ ಬಾಬು ಶೆಡ್ ಹೋಟೆಲ್‌ಗೆ ಆಗಮಿಸಿದ ಡಿಕೆಶಿ, ಚಿಬ್ಬಲು ಇಡ್ಲಿ ಹಾಗೂ ದೋಸೆ ಸವಿದರು.

ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಕಾಂಗ್ರೆಸ್ ಮುಖಂಡ ಬಿ.ಕೆ. ಪುಟ್ಟಸ್ವಾಮಿ ನನ್ನ ಆತ್ಮೀಯರು. ಮಳವಳ್ಳಿ ಕ್ಷೇತ್ರ ಮೀಸಲಿಲ್ಲದಿದ್ದರೆ ಅವರು ಎಂದೋ ಶಾಸಕರಾಗುತ್ತಿದ್ದರು. ಅವರ ಅಂತಿಮ ದರ್ಶನ ಪಡೆಯುವುದು ನನ್ನ ಕರ್ತವ್ಯವಾಗಿತ್ತು ಈ ನಿಟ್ಟಿನಲ್ಲಿ ಭೇಟಿ ಕೊಟ್ಟಿದ್ದೇನೆ ಎಂದರು. ಇನ್ನು ಶೆಡ್ ಹೋಟೆಲ್‌ನಲ್ಲಿ ಕಾರ್ಯಕರ್ತರೊಂದಿಗೆ ಕುಳಿತು ಇಡ್ಲಿ, ದೋಸೆ ಸವಿಯುತ್ತಿರುವುದು ಖುಷಿ ತಂದಿದೆ. ಹಲಗೂರು, ಮಳವಳ್ಳಿಗೆ ಬಂದಾಗಲೆಲ್ಲಾ ಈ ಹೋಟೆಲ್‌ನಲ್ಲಿ ತಿಂಡಿ ತಿನ್ನುವುದು ನನಗೆ ಬಹಳ ಇಷ್ಟ. ಎಂದರು.

ಸಿ.ಎಸ್.ಪುಟ್ಟರಾಜು ಜನ್ಮದಿನಾಚರಣೆ

ಮೇಲುಕೋಟೆ, ಸೆ.24– ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಎಸ್. ಪುಟ್ಟರಾಜು ಅವರ 59ನೇ ಹುಟ್ಟುಹಬ್ಬದ ಅಂಗವಾಗಿ ಶನಿವಾರ ಮೇಲುಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಯುವ ಮುಖಂಡ ಅವ್ವಗಂಗಾಧರ್ ಸಿಹಿಯೂಟ ಬಡಿಸಿದರು.



ಶಾಸಕರಿಗೆ ಚೆಲುವನಾರಾಯಣಸ್ವಾಮಿ ಹೆಚ್ಚಿನ ಶಕ್ತಿ ನೀಡಿ, ಆಯುರಾರೋಗ್ಯ ಕರುಣಿಸಲಿ ಎಂದು ಹಾರೈಸಲಾಯಿತು. ಇದೇ ವೇಳೆ ಶಾಲೆಯ ಎಲ್ಲಾ ತರಗತಿಯ ಕೋಣೆಗಳಿಗೆ ಗೋಡೆ ಗಡಿಯಾರ ಮತ್ತು ಅಕ್ಷರ ದಾಸೋಹ ಅಡುಗೆ ಮನೆಯಲ್ಲಿ ಧಾನ್ಯಗಳನ್ನು ತೂಕ ಮಾಡಲು ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಕೊಡುಗೆಯಾಗಿ ನೀಡಲಾಯಿತು. ಈ ಸಂದರ್ಭದಲ್ಲಿ ಯುವ ಮುಖಂಡರಾದ ಬಾಲಕೃಷ್ಣ, ಪಾರ್ಥ, ಸಿದ್ದರಾಮು, ಗೋಪಿ, ನಿವೃತ್ತ ಇಓ ನಂಜೇಗೌಡ, ಸಾಹಿತಿ ಎಸ್.ಎನ್.ಸಿಂಹ, ಬಾಲಕರ ಶಾಲೆಯ ಮುಖ್ಯಶಿಕ್ಷಕ ಸಂತಾನರಾಮನ್ ಸೇರಿದಂತೆ ಇತರರಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ



ಮಂಡ್ಯ, ಸೆ.24– ಮಂಡ್ಯ ವಿಧಾನಸಭಾ ಕ್ಷೇತ್ರದ ಕೆರಗೋಡು ಹೋಬಳಿಯ ವಿವಿಧ ಗ್ರಾಮಗಳಲ್ಲಿ 122 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಂ. ಶ್ರೀನಿವಾಸ್ ಭೂಮಿಪೂಜೆ ನೆರವೇರಿಸಿದರು.

ಕಾವೇರಿ ನೀರಾವರಿ ನಿಗಮ ನಿಯಮಿತದಿಂದ ಹೊನ್ನನಾಯ್ಕನಹಳ್ಳಿ ಗ್ರಾಮದಲ್ಲಿ 20ಲಕ್ಷ ರೂ. ವೆಚ್ಚದಡಿ ಎಸ್‌ಟಿ ಕಾಲೊನಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಹುಲಿವಾನ ಗ್ರಾಮದಲ್ಲಿ 15ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗದಿಂದ 20ಲಕ್ಷ ರೂ. ವೆಚ್ಚದಡಿ ಮಾರಗೌಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿ, ಮಾರಗೌಡನಹಳ್ಳಿ ಗ್ರಾಮದಲ್ಲಿ 16ಲಕ್ಷ ರೂ. ವೆಚ್ಚದಡಿ 1ನೇ ಅಂಗನವಾಡಿ ಕೇಂದ್ರದ ಕಟ್ಟಡ ಕಾಮಗಾರಿಗೆ ಶಂಕುಸ್ಥಾಪನೆ, ಡಣಾಯಕನಪುರ ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದಡಿ ರಸ್ತೆ ಅಭಿವೃದ್ಧಿ ಕಾಮಗಾರಿ, ಮುದ್ದುಂಗೆರೆ ಗ್ರಾಮದ ಬಸವೇಶ್ವರ ದೇವಸ್ಥಾನದಿಂದ ಕಲ್ಯಾಣ ಮಂಟಪದವರೆಗೆ 20ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ದಿವ್ಯಾ ಶಿವಕುಮಾರ್, ವಸಂತರಾಜು, ಪಾಪಣ್ಣ, ಪ್ರಕಾಶ್, ಇಂಜಿನಿಯರ್ ಶಂಕರ್, ಸುದರ್ಶನ್, ಗುತ್ತಿಗೆದಾರರಾದ ಎನ್.ಡಿ.ಪುಟ್ಟಸ್ವಾಮಿ, ಮನೋಜ್‌ಗೌಡ, ಕೆ.ರವೀಂದ್ರ, ನಾರಾಯಣ್ ಇದ್ದರು.

ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ನಿವೇಶನ ಹಂಚಿಕೆ



ಶ್ರೀರಂಗಪಟ್ಟಣ, ಸೆ.24– ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ನಿವೇಶನಗಳನ್ನು ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ನೀಡಲಾಗುವುದು ಎಂದು ಸಂಘದ ಅಧ್ಯಕ್ಷ ಸಿ.ಜೆ.ಶ್ರೀನಿವಾಸ್ ಹೇಳಿದರು.

ತಾಲೂಕಿನ ಮೊಗರಹಳ್ಳಿ(ಮಂಟಿ)ಯಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಕಡಿಮೆ ದರದಲ್ಲಿ ನಿವೇಶನ ನೀಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಕಳೆದ 3 ವರ್ಷದ ಹಿಂದೆ ಸಂಘ ಆರಂಭಿಸಲಾಯಿತು. ಮೈಸೂರಿನಿಂದ 5–6 ಕಿ.ಮೀ. ಅಂತರದಲ್ಲಿ ನಾವು ಜಮೀನು ಖರೀದಿಸಿ ಸದಸ್ಯರಿಗೆ ನಿವೇಶನ ನೀಡುತ್ತಿದ್ದೇವೆ. ಈಗಾಗಲೇ ಜಮೀನು ಖರೀದಿಸಿ ಅಲಿನೇಷನ್ ಮಾಡಿಸಲಾಗಿದ್ದು, ಮೈಸೂರು ಮುಡಾದಲ್ಲಿ ಅಂತಿಮ ಹಂತದ ನಕ್ಷೆ ಅನುಮೋದನೆಗೆ ಕಳುಹಿಸಲಾಗಿದೆ. ಇದು ಮುಗಿದ ಕೂಡಲೇ ನಿವೇಶನ ನಕ್ಷೆಯಂತೆ ಅಭಿವೃದ್ಧಿಪಡಿಸಲಾಗುವುದು. ಆದಷ್ಟು ಬೇಗ ಸದಸ್ಯರು ಈ ಸ್ಥಳದಲ್ಲಿ ಅವರ ಕನಸಿನ ಮನೆಗಳನ್ನು ಕಟ್ಟಿಕೊಳ್ಳಬಹುದಾಗಿದೆ ಎಂದರು. ಇದೇ ವೇಳೆ ಸದಸ್ಯರು ಸಂಘದ ಆಡಳಿತ ಮಂಡಳಿ ಬಳಿ, ತಮ್ಮ–ತಮ್ಮ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು. ಈ ವೇಳೆ ಡೆವಲಪರ್, ರಮೇಶ್, ಭೂ ಮಾಲೀಕ ಸೋಮಶೇಖರ್, ತಾಲೂಕು ವೈದ್ಯಾಧಿಕಾರಿ ಡಾ.ಕೆ.ಎನ್. ವೆಂಕಟೇಶ್, ಸರ್ಕಲ್ ಇನ್‌ಸ್ಪೆಕ್ಟರ್ ಪುನೀತ್, ಸಂಘದ ಕಾರ್ಯದರ್ಶಿ ಜೆ.ರಮೇಶ್, ನಿರ್ದೇಶಕರಾದ ಲೋಕೇಶ್, ರಾಜು, ತೋಟಪ್ಪ, ಚಂದ್ರು, ಸಿದ್ದಲಿಂಗು, ಪ್ರದೀಪ್, ಸರಸ್ವತಿ, ಸದಸ್ಯರಾದ ತಿಮ್ಮೇಗೌಡ, ಡಾ.ಮಾರುತಿ, ಆರ್‌ಐ ಉಮೇಶ್, ಧನಂಜಯ್, ಕಸಾಪ ತಾಲೂಕು ಅಧ್ಯಕ್ಷ ಮಂಜುನಾಥ್ ಇದ್ದರು.

ಸಕ್ಕರೆ ನಾಡಿನಲ್ಲಿ ಮಹರ್ನವಮಿ ಹಬ್ಬಕ್ಕೆ ಸಕಲ ಸಿದ್ಧತೆ, ವ್ಯಾಪಾರ ಜೋರು



ಮಂಡ್ಯ, ಸೆ.24– ಜಿಲ್ಲೆಯಲ್ಲಿ ಮಹರ್ನವಮಿ ಹಬ್ಬಕ್ಕೆ ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಭಾನುವಾರ ನಡೆಯುವ ಹಬ್ಬಕ್ಕೆ ಜನ ವ್ಯಾಪಾರ, ಖರೀದಿ ಬಹಳ ಜೋರಾಗಿ ನಡೆಯಿತು. ಸಂಕ್ರಾಂತಿ, ಯುಗಾದಿ, ಗಣೇಶ, ಆಯುಧ ಪೂಜೆಗಿಂತಲೂ ಮಂಡ್ಯ ಭಾಗದಲ್ಲಿ ಮಹರ್ನವಮಿ ಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಗುತ್ತದೆ. ತಮ್ಮ ಪೂರ್ವಜರಿಗೆ ಎಡೆ ಇಟ್ಟು ವಿಶೇಷ ಪೂಜೆ ಸಲ್ಲಿಸಿ, ಬಳಿಕ ಅವರ ಸಮಾಧಿ ಅಥವಾ ಪಿಂಡ ಪ್ರಧಾನ ಮಾಡಿದ ಜಾಗಕ್ಕೆ ತೆರಳಿ ಪೂಜೆ ಸಲ್ಲಿಸಲಾಗುತ್ತದೆ. ಬಳಿಕ ಮನೆಯವರು ಹಾಗೂ ಸಂಬಂಧಿ ಒಡಗೂಡಿ ಭರ್ಜರಿ ಬಾಡೂಟವನ್ನು ಮಾಡುವುದು ಈ ಹಬ್ಬದ ವಿಶೇಷ. ಈ ನಿಟ್ಟಿನಲ್ಲಿ ಇಂದು ಬಟ್ಟೆ, ಸಾಮಗ್ರಿಗಳ ಖರೀದಿ ಜೋರಾಗಿತ್ತು ನಗರದ ಸಿಟಿ ಮಾರ್ಕೆಟ್‌ನಲ್ಲಿ ಎಡೆ ಸಾಮಗ್ರಿ, ತಿನಿಸುಗಳು, ಹೂ, ಇನ್ನಿತರ ವಸ್ತುಗಳ ಖರೀದಿ ಬಲು ಜೋರಾಗಿತ್ತು. ಕಳೆದ ಮೂರು ದಿನಗಳಿಂದಲೂ ಪೂರ್ವಜರಿಗೆ ಎಡೆ ಇಟ್ಟು ಪೂಜೆ ಕಾರ್ಯ ನಡೆಯುತ್ತಿದ್ದು, ನಾಳೆ ಭಾನುವಾರ ಮಹಾಲಯ ಅಮಾವಾಸ್ಯೆಯಂದು ಮಹರ್ನವಮಿ ಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಗುತ್ತದೆ.

ಹುಳು ಮಿಶ್ರಿತ ಬಿಸಿಯೂಟ ವಿತರಣೆ: ಐವರ ಅಮಾನತು

ಮಂಡ್ಯ, ಸೆ.24– ಮಕ್ಕಳಿಗೆ ಹುಳು ಮಿಶ್ರಿತ ಬಿಸಿಯೂಟ ವಿತರಣೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕ ಸೇರಿದಂತೆ ನಾಲ್ವರು ಅಡುಗೆ ಸಹಾಯಕಿಯರನ್ನು ಅಮಾನತು ಮಾಡಲಾಗಿದೆ. ತಾಲೂಕಿನ ಬಸರಾಳು ಸರ್ಕಾರಿ ಶಾಲೆಯಲ್ಲಿ ಹುಳು ಮಿಶ್ರಿತ ಆಹಾರ ಪದಾರ್ಥ ಸರಬರಾಜು ಮಾಡಿ, ಹುಳು ಮಿಶ್ರಿತ ಆಹಾರವನ್ನೇ ಬೇಯಿಸಿ ಶಾಲೆಯ ಆಡಳಿತ ಮಂಡಳಿ ಮಕ್ಕಳಿಗೆ ನೀಡಿತ್ತು.

ಶಾಲಾ ಆಡಳಿತ ಸಿಬ್ಬಂದಿ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದರು. ಈ ಬಗ್ಗೆ ಪೋಷಕರ ದೂರನ್ನು ಆಲಿಸಿ, ಮುಖ್ಯ ಶಿಕ್ಷಕ ಗಿರೀಶ್ ಹಾಗೂ ನಾಲ್ವರು ಅಡುಗೆ ಸಹಾಯಕರನ್ನು ಅಮಾನತು ಮಾಡಿ ಡಿಡಿಪಿಐ ಜವರೇಗೌಡ ಆದೇಶ ಹೊರಡಿಸಿದ್ದಾರೆ. ಮುಖ್ಯ ಶಿಕ್ಷಕ ಗಿರೀಶ್ ಸೇರಿ ಅಡುಗೆ ಸಹಾಯಕಿಯರಾದ ಮಂಗಳಮ್ಮ, ನಾಗರತ್ನ, ಭಾಗ್ಯಮ್ಮ, ಗಂಗಮ್ಮ ಅವರನ್ನು ಅಮಾನತು ಮಾಡಲಾಗಿದೆ.

ಭಾರತೀಯರ ಐಕ್ಯತೆಗಾಗಿ ಜೋಡೋ ಪಾದಯಾತ್ರೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್



ಹನೂರು, ಸೆ.24–ಕೋಮು ದ್ವೇಷದ ಮೂಲಕ ಬಿಜೆಪಿ ಒಡೆದಿರುವ ಭಾರತವನ್ನು ಒಗ್ಗೂಡಿಸುವ ಸಲುವಾಗಿ ಕಾಂಗ್ರೆಸ್‌ನಿಂದ ಭಾರತ್ ಜೋಡೋ ಪಾದಯಾತ್ರೆ ಹಮ್ಮಿಕೊಂಡಿದ್ದು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮನವಿ ಮಾಡಿದರು.

ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಭಾರತ್ ಜೋಡೋ ಪಾದಯಾತ್ರೆ ಸಂಬಂಧ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಬಿಜೆಪಿಯವರು ದೇಶದಲ್ಲಿ ಉಂಟು ಮಾಡಿರುವ ಸಮಸ್ಯೆಗಳ ಬಗ್ಗೆ ದೇಶದ ಜನತೆಗೆ ತಿಳಿಸಿಕೊಡುವ ಉದ್ದೇಶದಿಂದ ಈ ಭಾರತ್ ಜೋಡೋ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ದಿನಬಳಕೆ ವಸ್ತುಗಳು, ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ, ಕೀಟನಾಶಕ ಹಾಗೂ ರಸಗೊಬ್ಬರಗಳ ಬೆಲೆ ಏರಿಸುವ ಮೂಲಕ ಸಾಮಾನ್ಯರು ಹಾಗೂ ರೈತರ ಬದುಕನ್ನು ದಮನ ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆ 3,570 ಕಿ.ಮೀ ದೂರ ಕ್ರಮಿಸಲಿದೆ. ಇದು ಸತತ 150 ದಿನಗಳ ಕಾಲ ನಡೆಯಲಿದ್ದು, 10 ರಾಜ್ಯಗಳು ಹಾಗೂ 2 ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಾಗಲಿದೆ. ಈ ಪಾದಯಾತ್ರೆಗೆ ಜಿಲ್ಲೆಯಲ್ಲಿಯೇ ಕಾಂಗ್ರೆಸ್‌ನ ಭದ್ರಕೋಟೆ ಹನೂರು ಕ್ಷೇತ್ರದಿಂದ 10 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಆಗಮಿಸುವ ಮೂಲಕ ರಾಹುಲ್ ಗಾಂಧಿಯವರ ಪಾದಯಾತ್ರೆಗೆ ಶಕ್ತಿ ತುಂಬಬೇಕು ಎಂದರು.

ಶಾಸಕ ಆರ್.ನರೇಂದ್ರ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಈಶ್ವರ್, ದೇವರಾಜು, ಕೆಪಿಸಿಸಿ ಸದಸ್ಯ ರಾಮಪುರ ಬಸವರಾಜು, ಪಪಂ ಉಪಾಧ್ಯಕ್ಷ ಗಿರೀಶ್, ಸದಸ್ಯರಾದ ಸುದೇಶ್, ಸಂಪತ್, ಹರೀಶ್ ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಮಾದ ನಾಯಕ, ನಿರ್ದೇಶಕ ಮುರುಡೇಶ್ವರ ಸ್ವಾಮಿ, ಸೂಳೇರಿ ಪಾಳ್ಯ ಗ್ರಾಪಂ ಅಧ್ಯಕ್ಷರಾದ ಮುರುಗೇಶ್, ಸುಧಾ, ಯೂತ್ ಕಾಂಗ್ರೆಸ್ ಅಧ್ಯಕ್ಷ ಗುಂಡಾಪುರ ಮಾದೇಶ್, ಸುರೇಶ್ ಹಿರಿಯ ಮುಖಂಡರಾದ ಪೆದ್ದನಪಾಳ್ಯ ಮಣಿ, ಚಿಕ್ಕತಮ್ಮಯ್ಯ, ಅಜ್ಜಿಪುರ ನಾಗರಾಜು, ಮತೀನ್ ವೆಂಕಟರಮಣನಾಯ್ಡು, ಪಾಳ್ಯ ಕೃಷ್ಣ ಹಾಗೂ ಕಾರ್ಯಕರ್ತರಿದ್ದರು.

ಗುಂಡ್ಲುಪೇಟೆಯಲ್ಲಿ ಗಣೇಶ ವಿಸರ್ಜನಾ ಶೋಭಾಯಾತ್ರೆ



ಗುಂಡ್ಲುಪೇಟೆ, ಸೆ.24– ಪಟ್ಟಣದ ಪುರಸಭೆಯ ಹಳೇ ಬಸ್ ನಿಲ್ದಾಣದಲ್ಲಿನ ಬಯಲು ರಂಗಮಂದಿರದಲ್ಲಿ ಪ್ರತಿಷ್ಠಾಪಿಸಿದ್ದ ಗಣಪತಿಯನ್ನು ಅದ್ಧೂರಿ ಶೋಭಾಯಾತ್ರೆ ಮೂಲಕ ವಿಸರ್ಜನೆ ಮಾಡಲಾಯಿತು.

ಗಜಕೇಸರಿ ಹಿಂದೂ ಮಹಾ ಗಣಪತಿ ಸಮಿತಿಯಿಂದ ಆಯೋಜಿಸಿದ್ದ ಶೋಭಾಯಾತ್ರೆಗೆ ಪೂಜೆ ಸಲ್ಲಿಸುವ ಮೂಲಕ ಶಾಸಕ ಸಿ.ಎಸ್.ನಿರಂಜನಕುಮಾರ್ ಚಾಲನೆ ನೀಡಿದರು. ಅಲಂಕೃತ ಟ್ರ್ಯಾಕ್ಟರ್‌ನಲ್ಲಿ ಗಣೇಶನ ಮೂರ್ತಿಯನ್ನು ಕೂರಿಸಿ ಮೆರವಣಿಗೆ ಮಾಡಲಾಯಿತು. ವೀರಗಾಸೆ, ನಂದಿಧ್ವಜ, ನಗಾರಿ, ಮರಗಾಲು ಕುಣಿತ, ಕಂಸಾಳೆ, ಮಂಗಳ ವಾದ್ಯಗಳು, ಕೇರಳದ ಜಂಡೇ ಮದ್ದಳೆ ಹಾಗೂ ಗೊರವರ ಕುಣಿತ ಸೇರಿದಂತೆ ಜನಪದ ಕಲಾತಂಡಗಳ ಜೊತೆ ಸಾಗಿದ ಯಾತ್ರೆಯಲ್ಲಿ ತಲೆಗೆ ರುಮಾಲು ಸುತ್ತಿದ ಕೇಸರಿ ಧಾರಿಗಳ ಕಲರವ ಪಟ್ಟಣದಲ್ಲಿ ಮಾರ್ದನಿಸಿತು.

ಶೋಭಾಯಾತ್ರೆಯಲ್ಲಿ ಶಾಸಕ ನಿರಂಜನ ಕುಮಾರ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಮಂಗಳ ವಾದ್ಯಕ್ಕೆ ಹೆಜ್ಜೆ ಹಾಕುವ ಮೂಲಕ ಕಾರ್ಯಕರ್ತರಿಗೆ ಹುರುಪು ತುಂಬಿದರು. ಸಾರಿಗೆ ಬಸ್ ನಿಲ್ದಾಣದ ಮಾರ್ಗವಾಗಿ ನಾಯಕರ ಬೀದಿ, ನೆಹರೂ ಪಾರ್ಕ್, ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ, ಚಾ.ನಗರ ರಸ್ತೆಯಲ್ಲಿ ಸಾಗಿದ ಶೋಭಾಯಾತ್ರೆ ಅಂತ್ಯವಾಯಿತು. ಮಧ್ಯಾಹ್ನ ಪ್ರಸಾದ ವಿನಿಯೋಗದ ನಂತರ ಗಣೇಶನ ಮೂರ್ತಿಯನ್ನು ಶಿವಪುರ ಸಮೀಪದ ಕಲ್ಲುಕಟ್ಟೆ ಜಲಾಶಯಕ್ಕೆ ಕೊಂಡೊಯ್ದು ವಿಸರ್ಜಿಸಲಾಯಿತು.

ಕೇಂದ್ರೀಯ ವಿದ್ಯಾಲಯ ವಿದ್ಯಾರ್ಥಿಗಳು ರಾಷ್ಟ್ರೀಯಮಟ್ಟಕ್ಕೆ ಆಯ್ಕೆ

ಚಾಮರಾಜನಗರ, ಸೆ.24–ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕೇಂದ್ರೀಯ ವಿದ್ಯಾಲಯ ಸಂಘಟನೆ ಪ್ರಾದೇಶಿಕ ವಿಭಾಗದ ಕ್ರೀಡಾಕೂಟದಲ್ಲಿ ನಗರದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳು ವಿಜೇತರಾಗಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ಈ ಮೂಲಕ ಜಿಲ್ಲೆ ಹಾಗೂ ಶಾಲೆಗೆ ಕೀರ್ತಿ ತಂದಿದ್ದಾರೆ.



ನಗರದ ಮಾದಾಪುರ ಗ್ರಾಮ ಬಳಿ ಇರುವ ಕೇಂದ್ರೀಯ ವಿದ್ಯಾಲಯದಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪಿ.ಜಿ.ಚೇತನ 200 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದು, ಜಸ್ವಂತ್ ಬಾಸ್ಕೆಟ್‌ಬಾಲ್‌ಗೆ ಆಯ್ಕೆಯಾಗಿದ್ದಾರೆ.

ದ್ವಿತೀಯ ಪಿಯು ವಿದ್ಯಾರ್ಥಿ ಎಸ್.ಶಮಂತ್ ಶಾಟ್‌ಪುಟ್‌ನಲ್ಲಿ ದ್ವಿತೀಯ ಸ್ಥಾನ, 9ನೇ ತರಗತಿಯ ಸಾಹಿತಿ ಶ್ರೀಲಕ್ಷ್ಮಿ.ವೈ ಟೇಬಲ್ ಟೆನ್ನಿಸ್‌ನಲ್ಲಿ ತೃತೀಯ ಸ್ಥಾನ, ಸ್ವರ್ಗಿಯ ವರ್ಷಿಣಿ ಟೇಬಲ್ ಟೆನ್ನಿಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿ ದೇಶದ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಶಾಲೆಯ ಪ್ರಭಾರಿ ಪ್ರಾಂಶುಪಾಲರಾದ ಸಲೀನ ತಿಳಿಸಿದ್ದಾರೆ.

ಪ್ರೋತ್ಸಾಹ: ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಮಾದಾಪುರ ಗ್ರಾಮಪಂಚಾಯ್ತಿ ಪಿಡಿಓ ಹನುಮಂತಯ್ಯ ಅವರು ಪ್ರೋತ್ಸಾಹಿಸಿ, ಅಭಿನಂದಿಸಿದ್ದಾರೆ.

ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ವಾಟಾಳ್ ನಾಗರಾಜ್ ಪ್ರತಿಭಟನೆ



ಚಾಮರಾಜನಗರ, ಸೆ.24–ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಕನ್ನಡ ಚಳವಳಿಗಾರ, ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಮ್ಮ ಬೆಂಬಲಿಗರೊಂದಿಗೆ ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ಅವರು, ಹಿಂದುಳಿದ ಗಡಿ ಪ್ರದೇಶವಾದ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆ ಕರೆಯಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಿಲ್ಲೆಯ ಅಭಿವೃದ್ಧಿಗೆ ಪ್ರಾಮಾಣಿಕ ಚಿಂತನೆ ಮಾಡಬೇಕು ಎಂದು ಒತ್ತಾಯಿಸಿದರು.

ಹೋರಾಟದಿಂದ ಚಾಮರಾಜನಗರ ಜಿಲ್ಲೆಯಾಗಿದ್ದು, ಇಲ್ಲಿಗೆ ಮುಖ್ಯಮಂತ್ರಿಗಳು ಬರುತ್ತಿಲ್ಲ. ಇಲ್ಲಿಗೆ ಬರದಿರಲು ಕಾರಣ ಏನು ಎಂದು ಮುಖ್ಯಮಂತ್ರಿಗಳು ಹೇಳಬೇಕು. ಜಿಲ್ಲೆಗೆ ಆಯವ್ಯಯದಲ್ಲಿ ನಯಾಪೈಸೆ ನೀಡಿಲ್ಲ. ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ 27 ಮಂದಿ ಸತ್ತರೂ ಆ ಬಗ್ಗೆ ಯಾರೂ ಕೇಳುವವರಿಲ್ಲ. ಆಸ್ಪತ್ರೆಗಳು ದಿಕ್ಕೆಟ್ಟು ಹೋಗಿವೆ. ಬಡವರ ಸ್ಥಿತಿ ಚಿಂತಾಜನಕವಾಗಿದೆ. ಜಿಲ್ಲಾಭಿವೃದ್ಧಿ ಬಗ್ಗೆ ಹೇಳುವವರು, ಕೇಳುವವರಿಲ್ಲ ಎಂದು ವಾಟಾಳ್ ನಾಗರಾಜು ಜಿಲ್ಲಾಡಳಿತ, ಸರ್ಕಾರದ ವಿರುದ್ಧ ಗುಡುಗಿದರು. ಪ್ರತಿಭಟನೆಯಲ್ಲಿ ಅಜಯ್, ಶಿವಲಿಂಗಮೂರ್ತಿ, ಚಾ.ರಂ.ಶ್ರೀನಿವಾಸಗೌಡ, ಪಾರ್ಥಸಾರಥಿ, ಬಿ.ವಿ.ರೇವಣ್ಣಸ್ವಾಮಿ, ನಿಜಧ್ವನಿ ಗೋವಿಂದರಾಜು, ವರದನಾಯಕ ಹಾಜರಿದ್ದರು.

ಬದನಗುಪ್ಪೆ ಪಿಎಸಿಸಿಗೆ 1.90 ಲಕ್ಷ ರೂ. ಲಾಭ



ಬದನಗುಪ್ಪೆ, ಸೆ.24– ಚಾಮರಾಜನಗರ ತಾಲೂಕಿನ ಬದನಗುಪ್ಪೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 1.90 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಶಿವಪಾದಪ್ಪ ತಿಳಿಸಿದರು.

ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅವರಣದಲ್ಲಿ ಶುಕ್ರವಾರ ಆಯೋಜಿಸಿದ್ದ 2021–22ನೇ ಸಾಲಿನ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಘದ ವ್ಯಾಪ್ತಿಯ ಗ್ರಾಮಗಳ ಸದಸ್ಯರಿಗೆ 1.15 ಕೋಟಿ ರೂ. ಬೆಳೆ ಸಾಲ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಹೊಸ ಸದಸ್ಯರಿಗೆ 57 ಲಕ್ಷ ರೂಗಳ ಸಾಲ ನೀಡಲಾಗುವುದು ಎಂದರು.

ಎಪಿಎಂಸಿ ನಿರ್ದೇಶಕ ಎಂ.ಬಿ.ಗುರುಸ್ವಾಮಿ ಮಾತನಾಡಿ, ಒನ್ ಟೈಮ್ ಸೆಟಲ್‌ಮೆಂಟ್ (ಒಟಿಎಸ್)ನಲ್ಲಿ ಸಾಲ ಮರುಪಾವತಿ ಮಾಡಿದ ರೈತರಿಗೆ ಹೊಸ ಸಾಲವನ್ನು ಸಹಕಾರ ಸಂಘದಿಂದ ವಿತರಿಸಲು ತೊಂದರೆಯಾಗುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಸಂಘದ ವತಿಯಿಂದ ಮೈಸೂರಿನ ಡಿಸಿಸಿ ಬ್ಯಾಂಕ್‌ಗೆ ನಿಯೋಗ ತೆರಳಿ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಂಘದ ಉಪಾಧ್ಯಕ್ಷ ಚಿನ್ನಸ್ವಾಮಿ, ಕಾರ್ಯದರ್ಶಿ ಸಂತೋಷ್ ನಿರ್ದೇಶಕರು ಮತ್ತು ಪಿಎಸಿಸಿ ವ್ಯಾಪ್ತಿಯ ಗ್ರಾಮದ ರೈತರು ಹಾಜರಿದ್ದರು.

ಮೈಸೂರು ಮಿತ್ರ ಭಾನುವಾರ 25 ಸೆಪ್ಟೆಂಬರ್ 2022

ಮೂರನೇ ಪುಟದಿಂದ

ಸ್ಪಷ್ಟ ಬಹುಮತವಿಲ್ಲ

ಅಧಿಕಾರಕ್ಕೆ ಬರುವ ಪ್ರಯತ್ನ ಮಾಡುತ್ತೇವೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪಕ್ಷದ ಉನ್ನತ ಮೂಲಗಳ ಪ್ರಕಾರ ಪೂರ್ವ ಸಮೀಕ್ಷೆಯಲ್ಲಿ ಅಧಿಕಾರಕ್ಕೆ ಬರಲು 30ರಿಂದ 35 ಕ್ಷೇತ್ರಗಳ ಕೊರತೆ ಇದೆ. ಇದನ್ನು ಮನಗಂಡ ಬಿಜೆಪಿ ತನ್ನದಲ್ಲದ ಕ್ಷೇತ್ರಗಳಲ್ಲಿ ಜಯಭೇರಿ ಭಾರಿಸಲು ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳನ್ನು ಸೆಳೆಯಲು ಮುಂದಾಗಿದೆ. ಅದೆಲ್ಲದಕ್ಕೂ ಮಿಗಿಲಾಗಿ ಬಿಜೆಪಿಗೆ ಕಾಂಗ್ರೆಸ್ ಮತ್ತು ಜೆಡಿಎಸ್ ಮಾಡುತ್ತಿರುವ ಭ್ರಷ್ಟಾಚಾರದ ಆರೋಪಗಳು ತಲೆನೋವಾಗಿ ಪರಿಣಮಿಸಿದೆ.

ಇದಕ್ಕಾಗಿ ಈಗ ಜಾತಿಯನ್ನು ಮುಂದಿಟ್ಟುಕೊಂಡು ವೀರಶೈವ ಮತಗಳನ್ನು ಒಗ್ಗೂಡಿಸುವ ಪ್ರಯತ್ನ ನಡೆಸಿದೆ. ಕಾಂಗ್ರೆಸ್ ಪೇಸಿಎಂ ಎಂದು ಭ್ರಷ್ಟಾಚಾರದ ಆರೋಪ ವ್ಯಾಪಕಗೊಳ್ಳುತ್ತಿರುವ ಬೆನ್ನಲ್ಲೇ ಬಿಜೆಪಿ ನಾಯಕರು ವೀರಶೈವ ಸಮುದಾಯಕ್ಕೆ ಸೇರಿದ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸಲು ಕಾಂಗ್ರೆಸ್ ಇಂತಹ ಷಡ್ಯಂತರ ಮಾಡಿಸಿದೆ ಎಂದು ಹೊಸ ವರಸೆ ತೆಗೆದಿದೆ. ಪೂರ್ವ ಸಮೀಕ್ಷೆ ಗಳಲ್ಲಿ ಈ ಬಾರಿ ಚುನಾವಣೆಯಲ್ಲಿ ವೀರಶೈವ ಮತಗಳು ಹರಿದು ಹಂಚಿ ಹೋಗಬಹುದೆಂಬ ಮಾಹಿತಿ ಇದೆ. ಈ ಮತಗಳನ್ನು ಗಟ್ಟಿ ಮಾಡಿಕೊಳ್ಳಲು ಬಿಜೆಪಿ ಇಂತಹ ರಾಜಕೀಯಕ್ಕೆ ಮುಂದಾಗಿದೆ ಎಂದು ಕಾಂಗ್ರೆಸ್ ಹೇಳಿಕೆ ನೀಡುತ್ತಿದೆ.

ಕಾಂಗ್ರೆಸ್ ಕೂಡಾ ಮೂರರಿಂದ ಐದು ಸಮೀಕ್ಷೆಗಳನ್ನು ನಡೆಸಿದ್ದು, ಆ ಪಕ್ಷಕ್ಕೂ ಸ್ಪಷ್ಟ ಬಹುಮತ ಪಡೆಯಲು ದೊಡ್ಡ ಅಂತರವೇ ಇದೆ. ಇದೇ ಕಾರಣಕ್ಕೆ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮತ್ತು ಹಗರಣಗಳನ್ನು ಮುಂದಿಟ್ಟು ಕೊಂಡು ಮತದಾರರನ್ನು ಸೆಳೆಯಲು ಮುಂದಾಗಿದೆ. ಇತ್ತೀಚೆಗೆ ಪೇಸಿಎಂ ಎಂಬ ಅಭಿಯಾನ ಕಾಂಗ್ರೆಸ್‌ಗೆ ಭಾರೀ ಲಾಭ ತಂದಂತಿದೆ. ಇದು ರಾಷ್ಟ್ರ ಮಟ್ಟದಲ್ಲೂ ಚರ್ಚೆಗೆ ಎಡೆ ಮಾಡಿದೆ. ಮುಂಬರುವ ಚುನಾವಣೆಯವರೆಗೂ ಬಿಜೆಪಿ ಸರ್ಕಾರದ ವೈಫಲ್ಯ ಮತ್ತು ಭ್ರಷ್ಟಾಚಾರಗಳನ್ನೇ ಮುಂದಿಟ್ಟುಕೊಂಡು ತನ್ನ ಗುರಿ ಮುಟ್ಟಲು ಕಾಂಗ್ರೆಸ್ ಹೊರಟಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲೂ ರಾಜ್ಯದ ಮತದಾರರು ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ನೀಡಿರಲಿಲ್ಲ. ಆದರೆ ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ನಂತರ ಆಪರೇಷನ್ ಕಮಲ ನಡೆಸಿ ಅಧಿಕಾರಕ್ಕೆ ಬಂದಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಬಾರಿ ತಮ್ಮ ತಮ್ಮ ಪ್ರಾಬಲ್ಯ ಮೆರೆಯಲು ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಹರಸಾಹಸ ಮಾಡುತ್ತಿವೆ. 2023 ರ ವಿಧಾನಸಭಾ ಚುನಾವಣೆ ಅತಂತ್ರವಾಗಬಹುದೆಂದು ಪೂರ್ವ ಸಮೀಕ್ಷೆಗಳ ವರದಿಗಳು ತಿಳಿಸಿವೆ.

ಸಚಿವ ಸಂಪುಟ ವಿಸ್ತರಣೆ

ಈ ವಿಚಾರವನ್ನು ಈಗಾಗಲೇ ಕೇಂದ್ರ ನಾಯಕರ ಗಮನಕ್ಕೆ ತರಲಾಗಿದ್ದು, ಶೀಘ್ರದಲ್ಲೇ ಹೆಸರುಗಳನ್ನು ಅಂತಿಮಗೊಳಿಸುವುದಾಗಿ ಭರವಸೆ ನೀಡಿದ್ದಾರೆ. ವಿಧಾನಸಭೆ ಅಧಿವೇಶನ ಮುಗಿಯಲು ಕಾಯುತ್ತಿದ್ದೆವು, ಈಗ ಅಧಿವೇಶನ ಮುಗಿದಿದೆ, ಹೀಗಾಗಿ ಸಚಿವ ಸಂಪುಟ ವಿಸ್ತರಣೆಯತ್ತ ಗಮನ ಹರಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಕೇಂದ್ರ ಬಿಜೆಪಿ ನಾಯಕರ ಜೊತೆ, ಅಲ್ಲಿಂದ ಗ್ರೀನ್ ಸಿಗ್ನಲ್ ಸಿಕ್ಕ ನಂತರ ಸಂಪುಟ ವಿಸ್ತರಣೆ ನಡೆಯಲಿದೆ ಎಂದಿದ್ದಾರೆ.

ರಾಷ್ಟ್ರಪತಿ ಭೇಟಿ: ಮೈಸೂರಲ್ಲಿ ವ್ಯಾಪಕ ಭದ್ರತೆ

ನಿಲ್ದಾಣಕ್ಕೆ ಬಂದು, ಕಾರಿನಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡಹಬ್ಬಕ್ಕೆ ಚಾಲನೆ ನೀಡಿದ ಬಳಿಕ ವಾಪಸ್ ವಿಮಾನ ನಿಲ್ದಾಣಕ್ಕೆ ಬಂದು ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವುದರಿಂದ ಅವರು ಸಂಚರಿಸುವ ಮಾರ್ಗ ಮತ್ತು ಪಾಲ್ಗೊಳ್ಳುವ ಕಾರ್ಯಕ್ರಮ ಸ್ಥಳದಲ್ಲಿ ಶ್ವಾನ ದಳ, ಬಾಂಬ್ ಪತ್ತೆ ದಳ ಮತ್ತು ಬಾಂಬ್ ನಿಷ್ಕ್ರಿಯ ದಳದ ಪೊಲೀಸರು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ. ಮಂಡಕಳ್ಳಿ ವಿಮಾನ ನಿಲ್ದಾಣ, ನಂಜನಗೂಡು ರಸ್ತೆ, ಚಾಮುಂಡಿ ಬೆಟ್ಟದಲ್ಲಿ ಶುಕ್ರವಾರದಿಂದಲೇ ನಿರಂತರವಾಗಿ ಪ್ರತೀ 2 ಗಂಟೆಗೊಮ್ಮೆ ತಪಾಸಣೆ ನಡೆಸುತ್ತಿರುವ ಸಿಬ್ಬಂದಿ, ಡ್ರೋಣ್ ಕ್ಯಾಮರಾ ಮೂಲಕ ದೃಶ್ಯಾವಳಿಗಳನ್ನು ಸೆರೆಹಿಡಿಯುತ್ತಿದ್ದಾರೆ. ಚಾಮುಂಡಿಬೆಟ್ಟಕ್ಕೆ ಹೋಗುವ ಪ್ರತಿಯೊಂದು ವಾಹನವನ್ನೂ ಪ್ರವೇಶ ದ್ವಾರದ ಬಳಿ ಪರಿಶೀಲಿಸುತ್ತಿದ್ದು, ಸಂಶಯಾಸ್ಪದ ವಾಹನ, ವ್ಯಕ್ತಿಗಳ ಮೇಲೆ ನಿಗಾ ಇರಿಸಿದ್ದಾರೆ.

5,485 ಪೊಲೀಸರು: ಮೈಸೂರಿನ 1,255, ಹೊರ ಜಿಲ್ಲೆಗಳ 3,580 ಹಾಗೂ 650 ಗೃಹರಕ್ಷಕರು ಸೇರಿದಂತೆ ಮೈಸೂರು ದಸರಾ ಮಹೋತ್ಸವಕ್ಕೆ ಒಟ್ಟು 5,485 ಮಂದಿ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ. ಮೊಬೈಲ್ ಕಮಾಂಡ್ ಸೆಂಟರ್ ವಾಹನ, ಬಾಡಿವೋರ್ನ್ ಕ್ಯಾಮರಾ, ಲಾಂಗ್ ಡಿಸ್ಟೆನ್ಸ್ ವಿಡಿಯೋಗ್ರಫಿ ಮತ್ತು ಫೋಟೋ ತೆಗೆಯಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಡ್ರೋಣ್ ಕ್ಯಾಮರಾ ಬಳಸಿ ಜಂಬೂ ಸವಾರಿ, ದಸರಾ ಉದ್ಘಾಟನಾ ಸಮಾರಂಭದ ದೃಶ್ಯಾವಳಿಯನ್ನು ಸೆರೆಹಿಡಿಯಲಾಗುವುದು ಎಂದು ತಿಳಿಸಿದ್ದಾರೆ.

ವೇದಿಕೆಗಳು: ದಸರಾ ಪ್ರಮುಖ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ಎತ್ತರದ ವೇದಿಕೆಗಳ ನಿರ್ಮಿಸಿ ಅದರ ಮೇಲೆ ನಿಂತು ಮೆಗಾಫೋನ್ ಸಮೇತ ಪೊಲೀಸರು ಕರ್ತವ್ಯ ನಿರ್ವಹಿಸುವರು. ಹಳೇ ಪಿಕ್‌ಪಾಕೆಟರ್, ಸೂಟ್‌ಕೇಸ್ ಲಿಫ್ಟರ್‌ಗಳನ್ನು ಭದ್ರತಾ ಕಾಯ್ದೆಯಡಿ ಬಂಧಿಸಲಾಗುವುದು. ಲಾಡ್ಜ್‌ಗಳು, ಬಸ್, ರೈಲ್ವೇ ನಿಲ್ದಾಣಗಳ ಬಳಿ ದಿನದ 24 ಗಂಟೆಯೂ ಪೊಲೀಸರು ಗಸ್ತು ನಡೆಸುವರು. ಅನುಮಾನಾಸ್ಪದ ವ್ಯಕ್ತಿಗಳನ್ನು ವಿಚಾರಣೆ ನಡೆಸುವರಲ್ಲದೇ, ದಸರಾ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ 12 ಅಗ್ನಿಶಾಮಕ ದಳ ಮತ್ತು 8 ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗುವುದು.

110 ಹೆಚ್ಚುವರಿ ಸಿಸಿ ಕ್ಯಾಮರಾ: ಮೈಸೂರು ನಗರದಾದ್ಯಂತ ಸಾರ್ವಜನಿಕರು ಅಳವಡಿಕೊಂಡಿರುವ 13,140 ಸಿಸಿ ಕ್ಯಾಮರಾಗಳ ಜೊತೆಗೆ ದಸರಾ ಮಹೋತ್ಸವದ ವೇಳೆ ಅರಮನೆ, ಬನ್ನಿಮಂಟಪ, ಮೆರವಣಿಗೆ ಮಾರ್ಗದಲ್ಲಿ ಹೆಚ್ಚುವರಿಯಾಗಿ 110 ಕ್ಯಾಮರಾಗಳನ್ನು ಅಳವಡಿಸಲಾಗಿದೆ. **ಆಸ್ಪತ್ರೆಗಳಲ್ಲಿ ಹಾಸಿಗೆ:** ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಸಾಕಷ್ಟು ಹಾಸಿಗೆ, ವೈದ್ಯರು, ಸಿಬ್ಬಂದಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಕಾಯ್ದಿರಿಸುವ ವ್ಯವಸ್ಥೆ ಮಾಡಲಾಗಿದ್ದು, ಆಂಬುಲೆನ್ಸ್ ಡ್ರೈವರ್‌ಗಳನ್ನು ಜಂಬೂ ಸವಾರಿ ಮೆರವಣಿಗೆ ದಿನ ಮೀಸಲಿರಿಸಲು ಕೋರಲಾಗಿದೆ.

ತುತ್ತೂರಿ ಮಾರಾಟ ನಿಷೇಧ: ಕೆಲವು ಪುಂಡರು ತುತ್ತೂರಿಗಳನ್ನು ಊದಿ ದಸರೆಗೆ ಆಗಮಿಸುವ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಕಿರಿಕಿರಿ, ಘಾಸಿ ಉಂಟುಮಾಡುವುದರಿಂದ ಈ ಬಾರಿ ದಸರಾ ವೇಳೆ ಮೈಸೂರಿನಲ್ಲಿ ತುತ್ತೂರಿ (ವುವುಜಿಲಾ)ಗಳ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ.

ರೌಡಿಗಳಿಗೆ ವಾರ್ನಿಂಗ್: ದಸರಾ ಸಂದರ್ಭ ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಮೈಸೂರು ನಗರದಾದ್ಯಂತ ಎಲ್ಲಾ ಠಾಣಾ ವ್ಯಾಪ್ತಿಗಳಲ್ಲಿ ರೌಡಿ ಪರೇಡ್ ನಡೆಸಿ, ಯಾವುದೇ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗದಂತೆ ಎಚ್ಚರಿಕೆ ನೀಡಲಾಗಿದೆ. ಗಲಾಟೆ, ಗದ್ದಲಗಳಲ್ಲಿ ಕಂಡುಬಂದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಲಾಗಿದೆ. ಈಗಾಗಲೇ ಹೊರ ಜಿಲ್ಲೆಗಳಿಂದ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ಮೈಸೂರಿಗೆ ಬಂದಿದ್ದು, ದಸರಾ ಬಂದೋಬಸ್ತ್ ಕರ್ತವ್ಯದ ಬಗ್ಗೆ ವಿವರಿಸಲಾಗಿದೆ. ಹಿರಿಯ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಿ ಅವರಿಗೆ ಊಟ-ತಿಂಡಿ ವ್ಯವಸ್ಥೆ ಮಾಡುವರು ಎಂದು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪೊಲೀಸ್ ಸಹಾಯ ಕೇಂದ್ರ

ಎಂದು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದರು. ರೈಲು ನಿಲ್ದಾಣ, ಅರಮನೆ ವರಹಾ ಗೇಟ್, ಕೆ.ಆರ್.ಸರ್ಕಲ್, ಸೆಂಟ್ ಫಿಲೋಮಿನಾ ಚರ್ಚ್, ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣ, ಗಾಂಧಿ ಸ್ಕ್ವೇರ್, ಮೃಗಾಲಯ, ದಸರಾ ವಸ್ತುಪ್ರದರ್ಶನದ ಮುಖ್ಯ ದ್ವಾರಗಳಲ್ಲಿ ಪೊಲೀಸ್ ಸಹಾಯ ಕೇಂದ್ರಗಳು ಕಾರ್ಯನಿರ್ವಹಿಸಲಿವೆ.

ತಾತ್ಕಾಲಿಕ ಸಾರಿಗೆ ಬಸ್ ನಿಲ್ದಾಣ: ಅಕ್ಟೋಬರ್ 4 ಮತ್ತು 5ರಂದು ಕೆಎಸ್‌ಆರ್‌ಟಿಸಿ ಬಸ್ಸುಗಳಿಗೆ ಮೈಸೂರಿನ ಹೊರ ಭಾಗದಲ್ಲಿ ತಾತ್ಕಾಲಿಕ ನಿಲ್ದಾಣ ಮಾಡಲಾಗಿದೆ.

ಬೆಂಗಳೂರಿನಿಂದ ಬರುವ ಬಸ್ಸುಗಳಿಗೆ ಸಾತಗಳ್ಳಿ ಬಸ್ ನಿಲ್ದಾಣ, ಹುಣಸೂರು, ಬೋಗಾದಿ, ಹೆಚ್.ಡಿ.ಕೋಟೆ ಕಡೆಯಿಂದ ಬರುವ ಬಸ್ಸುಗಳಿಗೆ ಮಹಾರಾಜ ಕಾಲೇಜು ಮೈದಾನ, ನಂಜನಗೂಡು ಕಡೆಯಿಂದ ಬರುವ ಬಸ್ಸುಗಳಿಗೆ ಗುಂಡೂರಾವ್‌ನಗರ ಮೈದಾನ ಹಾಗೂ ಬನ್ನೂರು, ತಿ.ನರಸೀಪುರಗಳಿಂದ ಬರುವ ಬಸ್ಸುಗಳನ್ನು ಲಲಿತ ಮಹಲ್ ಮೈದಾನದಲ್ಲಿ ನಿಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ಸಬ್‌ವೇ ಬಳಸಿ: ದಸರಾ ವೇಳೆ ಸಂಚಾರ ದಟ್ಟಣೆ ನಿಯಂತ್ರಿಸುವ ಸಲುವಾಗಿ ವಸ್ತುಪ್ರದರ್ಶನದಿಂದ ಅರಮನೆಗೆ ಸಂಪರ್ಕ ಕಲ್ಪಿಸಲು ಇರುವ ಸಬ್‌ವೇ ಬಳಸಬೇಕು. ಇದರಿಂದ ರಸ್ತೆ ದಾಟುವಾಗ ಉಂಟಾಗುವ ತೊಂದರೆ ನಿವಾರಣೆಯಾಗಲಿದೆ. ಅದೇ ರೀತಿ ಸಯ್ಯಾಜಿರಾವ್ ರಸ್ತೆಯ ಬಾಟಾ ಷೋರೂಂ ಬಳಿ ಇರುವ ಸಬ್‌ವೇನಲ್ಲಿ ರಸ್ತೆ ದಾಟಬೇಕೆಂದೂ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಇಂದು ಮೈಸೂರಿಗೆ ಸಿಎಂ ಬೊಮ್ಮಾಯಿ

ಸಮಾರಂಭದಲ್ಲಿ ಭಾಗವಹಿಸಿದ ನಂತರ ಬೊಮ್ಮಾಯಿ ಅವರು ರಾತ್ರಿ ಮೈಸೂರಿನಲ್ಲೇ ವಾಸ್ತವ್ಯ ಹೂಡುವರು. ಮರು ದಿನ, ಸೆಪ್ಟೆಂಬರ್ 26ರಂದು ಬೆಳಗ್ಗೆ 9 ಗಂಟೆಗೆ ಆಗಮಿಸಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿಗಳು ಬರಮಾಡಿಕೊಳ್ಳುವರು. ಬೆಳಗ್ಗೆ 9.45 ಗಂಟೆಗೆ ಚಾಮುಂಡಿಬೆಟ್ಟದಲ್ಲಿ ರಾಷ್ಟ್ರಪತಿಗಳು ದಸರಾ ಮಹೋತ್ಸವ ಉದ್ಘಾಟಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರೊಂದಿಗೆ ಪೂರ್ವಾಹ್ನ 11.15 ಗಂಟೆಗೆ ಬೊಮ್ಮಾಯಿ ಅವರು ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೆ.ಆರ್.ಕ್ಷೇತ್ರದ ವಸತಿರಹಿತರಿಗೆ 6 ಸಾವಿರ ಮನೆ ಮಂಜೂರು

- ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಮಾಹಿತಿ
- ರಾಮದಾಸ್ ನೇತೃತ್ವದ 'ಮೋದಿ ಯುಗ ಉತ್ಸವ'ದಲ್ಲಿ ಭಾಗಿ
- ಪ್ರಧಾನಿ ಮೋದಿ ಆಶಯ ಸಾಕಾರಕ್ಕೆ ರಾಮದಾಸ್ ಕಂಕಣ
- ವರ್ಷದಲ್ಲಿ ಕೆ.ಆರ್.ಕ್ಷೇತ್ರ ವಸತಿರಹಿತರ ಮುಕ್ತ ಕ್ಷೇತ್ರ

ಮೈಸೂರು, ಸೆ.24(ಎಂಟಿವೈ)- ಮೈಸೂರಿನ ಕೆ.ಆರ್.ಕ್ಷೇತ್ರದ ವಸತಿರಹಿತರಿಗಾಗಿ ಕೇಂದ್ರ ಸರ್ಕಾರ 6 ಸಾವಿರ ಮನೆ ಮಂಜೂರು ಮಾಡಿದೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ತಿಳಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ರಾಮಲಿಂಗೇಶ್ವರ ದೇವಾಲಯದ ಪಾರ್ಕ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಜನ್ಮ ದಿನದ ಹಿನ್ನೆಲೆಯಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಆಯೋಜಿಸಿರುವ ಮೋದಿ ಯುಗ ಉತ್ಸವದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಿವಿಧ ಇಲಾಖೆಗಳ ಸವಲತ್ತು ವಿತರಿಸಿ ಮಾತನಾಡಿದ ಅವರು, ವಿರೋಧ ಪಕ್ಷಗಳು ಮೋದಿ ನೇತೃತ್ವದ ಸರ್ಕಾರವನ್ನು ಸೂಟು ಬೂಟಿನ ಸರ್ಕಾರ ಎಂದು ಜರಿದಿದ್ದರು. ಸದೃಢ ಭಾರತ, ಸಮೃದ್ಧಿ ಭಾರತ ನಿರ್ಮಾಣಕ್ಕಾಗಿ ಮೋದಿ ಅವರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಟೀಕೆ ಮಾಡುವವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೆ.ಆರ್.ಕ್ಷೇತ್ರಕ್ಕೆ 6 ಸಾವಿರ ಮನೆ ಮಂಜೂರಾಗಿದೆ. ಶಾಸಕ ಎಸ್.ಎ.ರಾಮದಾಸ್ ಮುಂದಿನ ಒಂದು ವರ್ಷದೊಳಗೆ ತಮ್ಮ ಕ್ಷೇತ್ರವನ್ನು ವಸತಿರಹಿತರ ಮುಕ್ತ ಕ್ಷೇತ್ರವಾಗಿ ಮಾರ್ಪಡಿಸಲು ಶ್ರಮಿಸುತ್ತಿದ್ದಾರೆ ಎಂದರು.

ಯುಪಿಎ ಸರ್ಕಾರ ಇದ್ದಾಗ ನೆರೆ ರಾಷ್ಟ್ರಗಳು ನಮ್ಮ ದೇಶದ ಮೇಲೆ ಕ್ಯಾತೆ ತೆಗೆಯುತ್ತಿದ್ದವು. ಈ ವೇಳೆ ಎದುರಾಳಿಯನ್ನು ಸಮರ್ಥವಾಗಿ ಹಿಮ್ಮೆಟ್ಟಿಸುವ ಸಾಮರ್ಥ್ಯ ನಮ್ಮಲ್ಲಿರಲಿಲ್ಲ. ಆದರೆ, ಇಂದು ನೆರೆ ರಾಷ್ಟ್ರಗಳಾದ ಚೈನಾ, ಪಾಕಿಸ್ತಾನ ಯುದ್ಧ ಸಾರಿದರೂ ಅದನ್ನು ನಿರಂತರವಾಗಿ ಹಿಮ್ಮೆಟ್ಟಿಸುವ ಶಕ್ತಿ ಹೊಂದಿದ್ದೇವೆ. ಅತ್ಯಾಧುನಿಕ ಶಸ್ತ್ರಾಸ್ತ್ರ, ಕ್ಷಿಪಣಿ, ಯುದ್ಧಕ್ಕೆ ಬೇಕಾದ ಎಲ್ಲಾ ಸೌಲಭ್ಯ ಒದಗಿಸುವಲ್ಲಿ ಪ್ರಧಾನಿ ಮೋದಿ ಶ್ರಮಿಸಿದ್ದಾರೆ. ನರೇಂದ್ರ ಮೋದಿ ನಮಗೆ ಯುಗ ಪುರುಷ ಇದ್ದಂತೆ. ಅವರ ಜನ್ಮದಿನವನ್ನು ಸೇವಾ ಪಾಕ್ಷಿಕದ ಹೆಸರಿನಲ್ಲಿ ರಾಷ್ಟ್ರಾದ್ಯಂತ ಆಚರಿಸುತ್ತಿದ್ದೇವೆ. ಅದರ ಅಂಗವಾಗಿ ಶಾಸಕ ರಾಮದಾಸ್ ಕೆ.ಆರ್.ಕ್ಷೇತ್ರದಲ್ಲಿ ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೌಲಭ್ಯವನ್ನು ಫಲಾನುಭವಿಗಳಿಗೆ ತಲಪಿಸುವಲ್ಲಿ ಶ್ರಮಿಸುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.



ರಾಜ್ಯದಲ್ಲಿ ಪ್ರಥಮ ಬಾರಿಗೆ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ತ್ಯಾಜ್ಯವನ್ನೇ ಬಳಸಿ ದೀರ್ಘ ಕಾಲ ಬಾಳಿಕೆ ಬರುವ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿದ್ದೇವೆ. ಇದಕ್ಕಾಗಿ ವಿನೂತನ ತಂತ್ರಜ್ಞಾನ ಬಳಸಲಾಗುತ್ತಿದೆ. ಹೂವಿನ ಜತೆ ನಾರು ಸ್ವರ್ಗ ಸೇರಿತೆಂಬ ಮಾತಿನಂತೆ ರಾಮದಾಸ್ ಅವರ ಪ್ರಯತ್ನದಿಂದ ನಮ್ಮ ಇಲಾಖೆಯ ಘನತೆಯೂ ಹೆಚ್ಚಾಗಿದೆ. ದಸರಾ ಮಹೋತ್ಸವಕ್ಕೆ ಅವಶ್ಯಕತೆಗೆ ಅನುಗುಣವಾಗಿ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಇದಕ್ಕೂ ಮುನ್ನ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಮೋದಿ ಯುಗ ಉತ್ಸವದ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಅನುಷ್ಠಾನ, ಅರ್ಹ ಫಲಾನುಭವಿಗಳ ಗುರುತಿಸಿ ವಿವಿಧ ಸೌಲಭ್ಯ ಒದಗಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ 13 ಬ್ಯಾಂಕ್‌ಗಳಿಂದ 13 ಕೋಟಿ ರೂ. ಸಾಲ ಸೌಲಭ್ಯ ನೀಡಲು ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿಗಳು ಹೊಸ ಉದ್ಯಮ ಪ್ರಾರಂಭಿಸಲು ಅನುಕೂಲವಾಗಿದೆ. ಕ್ಷೇತ್ರದ ಒಂದು ಸಾವಿರ ಗರ್ಭಿಣಿಯರಿಗೆ ಆಹಾರ ಔಷಧ ನೀಡುತ್ತಿದ್ದೇವೆ. ಕೇಂದ್ರದ 203 ಯೋಜನೆಗಳನ್ನು ಮನೆ ಬಾಗಿಲಿಗೆ ತಲುಪಿಸುತ್ತಿದ್ದೇವೆ. ಕ್ಷೇತ್ರದಲ್ಲಿ ಉತ್ತಮ ರಸ್ತೆಗಳ ನಿರ್ಮಿಸಲು ಉದ್ದೇಶಿಸಲಾಗಿದೆ. ನಮ್ಮ ಕ್ಷೇತ್ರದಲ್ಲಿ 50 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕೆಲಸ ನಡೆಯುತ್ತಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಲಾಗಿದೆ. ಇಂತಹ ಪ್ಲಾಸ್ಟಿಕ್ ಸಂಗ್ರಹಿಸಿ, ಅದನ್ನು ಬೆಂಗಳೂರಿನಲ್ಲಿ ಕ್ಲಸ್ಟರ್‌ಗಳಾಗಿ ರೂಪಿಸಿ, ಅದನ್ನು ಬಳಸಿ 4 ಕೋಟಿ ರೂ. ವೆಚ್ಚದಲ್ಲಿ ನ್ಯಾಯಾಲಯದ ಎದುರಿನ ನರಸರಾಜ ರಸ್ತೆಯನ್ನು ಬಲ್ಲಾಳ್ ವೃತ್ತದವರೆಗೆ ಡಾಂಬರೀಕರಣ ಮಾಡಲಾಗುತ್ತಿದೆ. ಈ ಮೂಲಕ ಪ್ಲಾಸ್ಟಿಕ್ ರಸ್ತೆ ಮೊದಲು ಪ್ರಾರಂಭಿಸಿದ ಕೀರ್ತಿ ನಮ್ಮದಾಗಿದೆ ಎಲ್ಲರಿಗೂ ಸೂರು ಯೋಜನೆಯಡಿ 356 ಮನೆಗಳಿಗೆ ಶಿಲಾನ್ಯಾಸ ಮಾಡಿದ್ದು, ಇನ್ನು ಪೌರಕಾರ್ಮಿಕರು ಬಾಡಿಗೆ ಮನೆಯಲ್ಲಿ ಇರುವ ಪ್ರಮೇಯವೇ ಬರುವುದಿಲ್ಲ. ಅಂತಾರಾಷ್ಟ್ರೀಯ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಪ್ರಧಾನಿ ಮೋದಿ ಅವರು ಕ್ಷೇತ್ರಕ್ಕೆ 6 ಸಾವಿರ ಮನೆಗಳನ್ನು ಕೊಡುಗೆ ನೀಡಿ ಹೋಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಡಿವೇಲು, ಪ್ರದಾನ ಕಾರ್ಯದರ್ಶಿ ನಾಗೇಂದ್ರ, ಓಂ ಶ್ರೀನಿವಾಸ್, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕಿ ಡಿ.ಎನ್.ರಾಣಿ, ಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಲೋಕೋಪಯೋಗಿ ಇಲಾಖೆ ಅಧೀಕ್ಷಕ ಗಣೇಶ್ ಭೋವಿ, ರಾಜು, ಕೃಷ್ಣಯ್ಯ, ಕಾರ್ಯಪಾಲಕ ಅಭಿಯಂತರ ಹರೀಶ್, ಆಶ್ರಯ ಸಮಿತಿ ಸದಸ್ಯರಾದ ಎ.ವಿ.ವಿದ್ಯಾಅರಸ್, ಹೇಮಂತ್ ಕುಮಾರ್, ಗೌರಿ ಮತ್ತಿತರರು ಉಪಸ್ಥಿತರಿದ್ದರು.

ಸವಲತ್ತು ವಿತರಣೆ...


ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಎಸ್.ಮನೋಜ್, ಹರ್ಷವರ್ಧನ್, ಅಭಿಷೇಕ್, ಮಂಜುನಾಯಕ ಅವರಿಗೆ ನೇಮಕಾತಿ ಪತ್ರವನ್ನು ನೀಡಲಾಯಿತು.

ಪಾಲಿಕೆ ಹೆಚ್ಚುವರಿ ಆಯುಕ್ತರಾದ ರೂಪಾ ಮಾತನಾಡಿ, ಮೈಸೂರು ಮಹಾ ನಗರ ಪಾಲಿಕೆ ಆಶ್ರಯ ಯೋಜನೆಯಡಿಯಲ್ಲಿ ವರ್ಷದಿಂದ ಅನೇಕ ಅದಾಲತ್ ಮೂಲಕ ಶಾಸಕರ ಸೂಚನೆಯಂತೆ ಭ್ರಷ್ಟಾಚಾರ ಮುಕ್ತವಾಗಿ 1008 ಹಕ್ಕು ಖುಲಾಸೆಯಾಗಿ ಹಕ್ಕುಪತ್ರವನ್ನು ಅವರ ಮನೆಗೆ ನೀಡಿದ್ದೇವೆ. ಅಂಬೇಡ್ಕರ್ ವಸತಿ ಯೋಜನೆ ಸೇರಿ ವಿವಿಧ ಯೋಜನೆಯಡಿ ಸಂಪೂರ್ಣ ಗುರಿ ಸಾಧಿಸಿದ್ದೇವೆ. 13 ಸಾವಿರ ಅರ್ಜಿ ಪರಿಶೀಲಿಸಿ 8 ಸಾವಿರ ಸಿದ್ಧತೆ ಮಾಡಿದ್ದೇವೆ. 12 ಸಾವಿರ ಮನೆಗೆ ಮಂಜೂರಾತಿ ಪಡೆದಿದ್ದು, 6 ಸಾವಿರ ಮಂದಿಗೆ ಅಂಚೆ ಮೂಲಕ ಮಾಹಿತಿ ತಲುಪಿಸಿ ಮೂರನೇ ಹಂತದ ಹಣ ಕಟ್ಟಿಸುವ ಕೆಲಸ ಮಾಡಿದ್ದೇವೆ. ಗುಂಪು ಮನೆಯ ಯೋಜನೆಯಲ್ಲಿ ಮಾದರಿ ಕ್ಷೇತ್ರ ಮಾಡಿದ್ದೇವೆ. ರಮಾಬಾಯಿನಗರ ಬಡಾವಣೆಯಲ್ಲಿ 120 ಮಂದಿಗೆ ಹಕ್ಕು ಪತ್ರ ನೀಡುತ್ತಿದ್ದೇವೆ ಎಂದರು.

ಆಶ್ರಯ ಮನೆಗೆ ಹಣ ವಸೂಲಿ ಆರೋಪ: ಪೊಲೀಸರಿಂದ ವ್ಯಕ್ತಿಯ ವಿಚಾರಣೆ

ಮೈಸೂರು, ಸೆ.24- 'ಆಶ್ರಯ ಮನೆ' ಕೊಡಿಸುವುದಾಗಿ ಬಡವರಿಂದ ಸಾವಿರಾರು ರೂ. ಹಣ ಪಡೆದು ವಂಚಿಸುತ್ತಿರುವ ಆರೋಪದಡಿ ಶಂಕಿತನನ್ನು ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸರು ವಿಚಾರಣೆ ನಡೆಸಿದ್ದಾರೆ. ವಿದ್ಯಾರಣ್ಯಪುರಂನಲ್ಲಿ ನಡೆಯುತ್ತಿರುವ 'ಮೋದಿ ಯುಗ ಉತ್ಸವ' ಕಾರ್ಯಕ್ರಮದಲ್ಲಿ ಶನಿವಾರ ಪಾಲ್ಗೊಂಡಿದ್ದ ರಮಾಬಾಯಿ ನಗರದ ಸೋಮಶೇಖರ್ ಎಂಬುವವರನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ. ಅಲ್ಲದೆ ಈ ವ್ಯಕ್ತಿಗೆ ಹಣ ನೀಡಿ ಯಾರಾದರೂ ಮೋಸ ಹೋಗಿದ್ದರೆ ಮಾಹಿತಿ ನೀಡುವಂತೆ ಧ್ವನಿವರ್ಧಕದ ಮೂಲಕವೂ ಪ್ರಕಟಿಸಿದ್ದಾರೆ. ಆದರೆ ಯಾರೊಬ್ಬರೂ ದೂರು ನೀಡದ ಹಿನ್ನೆಲೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿಲ್ಲ. ಆದರೆ ಶಂಕಿತನಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸುವ ಪ್ರಯತ್ನದಲ್ಲಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿದ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ರಾಜು, ರಮಾಬಾಯಿನಗರದ ಸೋಮಶೇಖರ್ ಆಶ್ರಯ ಮನೆ ಹಾಗೂ ಇನ್ನಿತರ ದಾಖಲೆ ಕೊಡಿಸುವುದಾಗಿ ಜನರನ್ನು ನಂಬಿಸಿ ಹಣ ಪಡೆದು ವಂಚಿಸುತ್ತಿದ್ದಾನೆ ಎಂಬ ಮಾಹಿತಿ ಮೇರೆಗೆ ಮೋದಿ ಯುಗ ಉತ್ಸವ ಕಾರ್ಯಕ್ರಮದ ವೇಳೆ ಆತನ ವಿಚಾರಣೆ ನಡೆಸಿದ್ದೇವೆ. ಯಾರಾದರೂ ಹಣ ನೀಡಿ ವಂಚನೆಗೊಳಗಾಗಿದ್ದರೆ ನಿರ್ಭಯದಿಂದ ನೇರವಾಗಿ ಠಾಣೆಗೆ ಬಂದು ದೂರು ನೀಡಿದರೆ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ದೂರು ನೀಡಿ: ಸರ್ಕಾರದ ಯೋಜನೆಗಳಡಿ ಆಶ್ರಯ ಮನೆ ಕೊಡಿಸುವುದು, ಹಕ್ಕು ಪತ್ರ ಖುಲಾಸೆ ಕೊಡಿಸುವುದಾಗಿ ಬಡವರಿಂದ ಹಣ ಪಡೆಯುತ್ತಿರುವ ಬಗ್ಗೆ ಮಾಹಿತಿ ಇದೆ. ಯಾರಾದರೂ ಹಣ ನೀಡಿ ಮೋಸ ಹೋಗಿದ್ದರೆ ಕೂಡಲೇ ಠಾಣೆಗೆ ಬಂದು ದೂರು ನೀಡಿ ಎಂದು ವಿದ್ಯಾರಣ್ಯಪುರಂ ಪೊಲೀಸರು ಪ್ರಕಟಣೆಯಲ್ಲಿ ಕೋರಿದ್ದಾರೆ.



ಜಿಟಿಡಿ ಮತ್ತೊಮ್ಮೆ ಎಚ್ಚರಿಕೆ

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಈ ಸಂಬಂಧ ಪ್ರತಿಕ್ರಿಯಿಸಿ, ಆಶ್ರಯ ಮನೆ ಫಲಾನುಭವಿಗಳಿಂದ ಹಣ ವಸೂಲಿ ಮಾಡುವ ವಿಷಯ ನನ್ನ ಗಮನಕ್ಕೆ ಬಂದಿದೆ. ನಾನು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಯಾರಿಗೂ ಹಣ ನೀಡದಂತೆ ಫಲಾನುಭವಿಗಳಿಗೆ ಎಚ್ಚರಿಸುತ್ತಲೇ ಬಂದಿದ್ದೇನೆ. ವಸತಿರಹಿತರಿಗೆ ಮನೆಗಳನ್ನು ನಿರ್ಮಿಸಿಕೊಡುವುದು ಸರ್ಕಾರದ ಒಂದು ಯೋಜನೆ. ಇದು ಬಡವರಿಗಾಗಿಯೇ ರೂಪಿಸಿರುವ ಯೋಜನೆ. ಅರ್ಹರಿಗೆ ಸೂರು ಕಲ್ಪಿಸಿಕೊಡುವುದು ನಮ್ಮ ಉದ್ದೇಶವೂ ಆಗಿದೆ. ಹಾಗಾಗಿ ಮಧ್ಯವರ್ತಿಗಳ ಮುಂದಿಟ್ಟುಕೊಂಡು ಬೇಡಿಕೆ ಸಲ್ಲಿಸುವುದಾಗಲೀ, ಹಣ ನೀಡಿ ಅವರ ಮೂಲಕ ಒತ್ತಡ ಹಾಕುವ ಪ್ರಯತ್ನಗಳಾಗಲೀ ಫಲಿಸುವುದಿಲ್ಲ. ಆದ್ದರಿಂದ ಫಲಾನುಭವಿಗಳು ಯಾವುದೇ ಕಾರಣಕ್ಕೂ ಹಣ ನೀಡಿ ಮೋಸ ಹೋಗಬಾರದು ಎಂದು ಮತ್ತೊಮ್ಮೆ ವಿನಂತಿಸಿಕೊಳ್ಳುವುದಾಗಿ ತಿಳಿಸಿದ್ದಾರೆ.

ಗ್ರಾಹಕರಿಗೆ ವಿಶೇಷ ಸೇವೆಗೆ ಒಪ್ಪದ ರಿಸೆಪ್ಷನಿಸ್ಟ್ ಹತ್ಯೆ: ಬಿಜೆಪಿ ನಾಯಕನ ಪುತ್ರರು ಸೇರಿ ಐವರ ಬಂಧನ

ಜೆಸಿಬಿಯಿಂದ ರೆಸಾರ್ಟ್ ಧ್ವಂಸ; ರೊಚ್ಚಿಗೆದ್ದ ಸ್ಥಳೀಯರಿಂದ ಬೆಂಕಿ

ರಿಷಿಕೇಶ (ಉತ್ತರಾಖಂಡ), ಸೆ.24- ವೇಶ್ಯಾವಾಟಿಕೆಗೆ ಒಪ್ಪದ ರಿಸೆಪ್ಷನಿಸ್ಟ್ ಅನ್ನು ಹತ್ಯೆ ಮಾಡಿದ ಆರೋಪದ ಮೇರೆಗೆ ಬಿಜೆಪಿ ಮುಖಂಡನ ಇಬ್ಬರು ಪುತ್ರರು ಸೇರಿದಂತೆ ಐವರನ್ನು ಪೊಲೀಸರು ಬಂಧಿಸಿದ್ದು, ಸ್ಥಳೀಯ ನಗರ ಪಾಲಿಕೆ ಅಧಿಕಾರಿಗಳು ರೆಸಾರ್ಟ್‌ನ ಕೆಲವು ಭಾಗಗಳನ್ನು ಧ್ವಂಸಗೊಳಿಸಿದರೆ, ಸ್ಥಳೀಯರು ರೆಸಾರ್ಟ್‌ಗೆ ಬೆಂಕಿ ಹಚ್ಚಿದ್ದಾರೆ. ರಿಷಿಕೇಶದಲ್ಲಿ ಈ ಅಮಾನವೀಯ ಕೃತ್ಯ ನಡೆದಿದೆ.



ಬಿಜೆಪಿ ಮುಖಂಡ ವಿನೋದ್ ಆರ್ಯ ಪುತ್ರ ಪುಲ್ಕಿತ್ ಆರ್ಯ ಒಡೆತನದ ರೆಸಾರ್ಟ್‌ನ ರಿಸೆಪ್ಷನಿಸ್ಟ್ ಅಂಕಿತಾ ಭಂಡಾರಿ (19) ಹತ್ಯೆಗೀಡಾದವಳಾಗಿದ್ದು, ಕಳೆದ 5 ದಿನದ ಹಿಂದೆ ನಾಪತ್ತೆಯಾಗಿದ್ದ ಈಕೆಯ ಮೃತದೇಹ ಇಂದು ಬೆಳಗ್ಗೆ ಕಾಲುವೆಯೊಂದರಲ್ಲಿ ಪತ್ತೆಯಾಗಿದೆ. ಇದರ ಬೆನ್ನಲ್ಲೆ ರೆಸಾರ್ಟ್‌ನವರು ತನ್ನನ್ನು ವೇಶ್ಯಾವಾಟಿಕೆಗೆ ಒತ್ತಾಯಿಸುತ್ತಿದ್ದಾರೆ ಎಂದು ಆರೋಪಿಸಿ ಯುವತಿ ತನ್ನ ಸ್ನೇಹಿತೆಗೆ ಕಳುಹಿಸಿರುವ ವಾಟ್ಸಾಪ್ ಸಂದೇಶಗಳು ಹಾಗೂ ಸಹೋದ್ಯೋಗಿಯೊಬ್ಬನ ಜೊತೆ ಮಾತನಾಡಿರುವ ಆಡಿಯೋ ಕ್ಲಿಪಿಂಗ್ ವೈರಲ್ ಆಗಿದೆ.

ಇವರು ನನ್ನನ್ನು ವೇಶ್ಯೆಯನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಗ್ರಾಹಕರಿಗೆ ಹತ್ತು ಸಾವಿರ ರೂ.ಗಳಿಗೆ ವಿಶೇಷ ಸೇವೆ ಒದಗಿಸಲು ತನ್ನನ್ನು ಹೇಗೆ ಒತ್ತಾಯಿಸಲಾಯಿತು ಎಂಬುದನ್ನು ಆಕೆ ವಾಟ್ಸಾಪ್ ಸಂದೇಶದಲ್ಲಿ ವಿವರಿಸಿದ್ದಾಳೆ. ರೆಸಾರ್ಟ್‌ನಲ್ಲಿ ವ್ಯಕ್ತಿಯೋರ್ವ ಅನುಚಿತವಾಗಿ ತನ್ನನ್ನು ಸ್ಪರ್ಶಿಸಿದನೆಂದು ಆಕೆ ಸ್ನೇಹಿತೆಯಲ್ಲಿ ಹೇಳಿಕೊಂಡಿದ್ದಾಳೆ. ಸಹೋದ್ಯೋಗಿಯೊಬ್ಬರೊಂದಿಗೆ ಆಕೆ ಮಾತನಾಡಿರುವ ಆಡಿಯೋ ಕ್ಲಿಪ್ ವೈರಲ್ ಆಗಿದ್ದು, ಅದರಲ್ಲಿ ಯುವತಿ ಅಳುತ್ತಿರುವುದು ಹಾಗೂ ತನ್ನ ಬ್ಯಾಗನ್ನು ಮೇಲಕ್ಕೆ ತರುವಂತೆ ವ್ಯಕ್ತಿಯೊಬ್ಬನನ್ನು ಕೇಳುತ್ತಿರುವುದು ದಾಖಲಾಗಿದೆ.


ಈ ಪ್ರಕರಣ ಸಂಬಂಧ ಬಿಜೆಪಿ ನಾಯಕ ವಿನೋದ್ ಆರ್ಯ ಪುತ್ರ ಪುಲ್ಕಿತ್ ಆರ್ಯ ಮತ್ತೋರ್ವ ಪುತ್ರ ಅಂಕಿತ್, ರೆಸಾರ್ಟ್ ಮ್ಯಾನೇಜರ್ ಸೌರಬ್ ಭಾಸ್ಕರ್ ಸೇರಿದಂತೆ ಐವರನ್ನು ಬಂಧಿಸಲಾಗಿದೆ ಎಂದು ಉತ್ತರಾಖಂಡದ ಉನ್ನತ ಪೊಲೀಸ್ ಅಧಿಕಾರಿ ಅಶೋಕ್‌ಕುಮಾರ್ ಸುದ್ದಿಗಾರರಿಗೆ ತಿಳಿಸಿದ್ದು, ಅತಿಥಿಗಳಿಗೆ ವಿಶೇಷ ಸೇವೆ ಒದಗಿಸಲು ರೆಸಾರ್ಟ್ ಮಾಲೀಕರು ಮೃತ ಯುವತಿಯನ್ನು ಒತ್ತಾಯಿಸುತ್ತಿದ್ದರು ಎಂಬುದನ್ನು ಆರೋಪಿಗಳು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಹಿರಿಯ ನಾಯಕ, ಮಾಜಿ ಸಚಿವ ವಿನೋದ್ ಆರ್ಯ ಹಾಗೂ ಆತನ ಮಕ್ಕಳನ್ನು ಬಿಜೆಪಿಯಿಂದ ಉಚ್ಚಾಟಿಸಲಾಗಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಮಹೇಂದ್ರ ಭಟ್ ತಿಳಿಸಿದ್ದಾರೆ. ಪುಲ್ಕಿತ್ ಆರ್ಯ ಒಡೆತನದ ರೆಸಾರ್ಟ್ ರಿಸೆಪ್ಷನಿಸ್ಟ್ ಹತ್ಯೆ ಪ್ರಕರಣದ ತನಿಖೆಯನ್ನು ಡಿಐಜಿ ಪಿ.ರೇಣುಕಾದೇವಿ ನೇತೃತ್ವದ ವಿಶೇಷ ತನಿಖಾ ತಂಡದಿಂದ ನಡೆಸಲಾಗುತ್ತದೆ ಎಂದು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ. ತಪ್ಪಿತಸ್ಥರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು. ಈ ಹೃದಯವಿದ್ರಾವಕ ಘಟನೆಯಿಂದ ನನಗೆ ನೋವಾಗಿದೆ ಎಂದು ಸಿಎಂ ಟ್ವೀಟ್ ಮಾಡಿದ್ದಾರೆ.




ಐಕ್ಯತಾ ಭಾವ, ಶಾಂತಿ ಮಂತ್ರ ಪಠಿಸುವುದರೊಂದಿಗೆ 'ಯುವ ಸಂಭ್ರಮ'ಕ್ಕೆ ತೆರೆ

● ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ರಾರಾಜಿಸಿದ ಕನ್ನಡ ಬಾವುಟ ● ನವದುರ್ಗೆಯರ ದರ್ಶನದ ಮೂಲಕ ನವರಾತ್ರಿ ಉತ್ಸವಕ್ಕೆ ಸ್ವಾಗತ







ಮೈಸೂರು, ಸೆ.24(ಎಂಕೆ)- ವಂದೇ ಮಾತರಂ ಶಾಂತಿ ಮಂತ್ರ, ಕರುನಾಡಿನ ಸಿರಿನುಡಿಯ ದೀಪ ಬೆಳಗಿದ ಕಾಲೇಜು ವಿದ್ಯಾರ್ಥಿಗಳ ರಂಗು-ರಂಗಿನ ನೃತ್ಯ ವೈಭವಕ್ಕೆ ಸಾಕ್ಷಿಯಾದ 'ಯುವ ಸಂಭ್ರಮ-2022'ಕ್ಕೆ ಶನಿವಾರ ಸಂಭ್ರಮದ ತೆರೆಬಿದ್ದಿತು.

ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ 9 ದಿನಗಳ ಕಾಲ ನಡೆದ 'ಯುವ ಸಂಭ್ರಮ'ದ ಕಡೆಯ ದಿನ ಕನ್ನಡ ಬಾವುಟಗಳು ಎಲ್ಲೆಡೆ ರಾರಾಜಿಸಿದವು. ನವದುರ್ಗೆಯರ ದರ್ಶನದ ಮೂಲಕ ನವರಾತ್ರಿ ಉತ್ಸವದ ವೈಭವ ತಿಳಿಸಿಕೊಟ್ಟ ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಂಗೀತ ದಿಗ್ಗಜರ ವೇದಿಕೆಯಾದ 'ಯುವ ದಸರಾ'ಗೆ ಭವ್ಯ ಸ್ವಾಗತ ಕೋರಿದರು.

ದೇಶದ ಏಕತೆ ಸಾರುವ 'ವಂದೇ ಮಾತರಂ', 'ಸಾರೇ ಜಹಾಂಸೆ ಅಚ್ಛಾ!' ಹಾಡುಗಳಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದ ಮೈಸೂರಿನ ಜಯಲಕ್ಷ್ಮಿಪುರಂನ ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಹಾಗೂ ಬ್ರಿಟಿಷರ ಆಳ್ವಿಕೆ, ಮಂಗಲಪಾಂಡೆ ಧೈರ್ಯ, ಜಲಿಯನ್ ವಾಲಾಬಾಗ್ ಹತ್ಯಾಕಾಂಡ, ಉಪ್ಪಿನ ಸತ್ಯಾಗ್ರಹ ಸ್ಮರಿಸಿದ ಡಿಎಂ ಟ್ರಿನಿಟಿ ಪಿಯು ಕಾಲೇಜು ವಿದ್ಯಾರ್ಥಿಗಳು ಸ್ವಾತಂತ್ರ್ಯ ಹೋರಾಟದ ಚಿತ್ರಣ ತೆರೆದಿಟ್ಟರಲ್ಲದೆ ಪಾರಿವಾಳ ಹಾರಿಸುವ ಮೂಲಕ 'ಆಜಾದಿ ಕಾ ಅಮೃತ ಮಹೋತ್ಸವ' ಆಚರಿಸಿದರು. ಹಾಗೆಯೇ ಬಸವೇಶ್ವರನಗರದ ಎಎಂಬಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಆಲನಹಳ್ಳಿ ವಿದ್ಯಾವಿಕಾಸ್ ಪದವಿ ಪೂರ್ವ ಕಾಲೇಜು, ನಂಜನಗೂಡಿನ ಹೆಮ್ಮರಗಾಲದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ಸೈನಿಕರ ತ್ಯಾಗ-ಬಲಿದಾನ ಹಾಗೂ ಹೋರಾಟದ ಬದುಕನ್ನು ಪ್ರಸ್ತುತಪಡಿಸಿದರು.

ಬೆಳಗಿತು ಸಿರಿನುಡಿಯ ದೀಪ: ಬಯಲು ರಂಗಮಂದಿರದಲ್ಲಿ ಕರುನಾಡಿನ ಸಿರಿನುಡಿಯ ಬೆಳಕನ್ನು ಹಾಡು-ನೃತ್ಯದ ಮೂಲಕ ಬೆಳಗಿಸಿದ ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜು(ಸ್ವಾಯತ್ತ) ವಿದ್ಯಾರ್ಥಿನಿಯರು, 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ', 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬಿತ್ಯಾದಿ ನಾಡು-ನುಡಿಯ ಹಾಡುಗಳಿಗೆ ಮನಮೋಹಕ ನೃತ್ಯಾಭಿನಯದಿಂದ ನೆರೆದಿದ್ದವರನ್ನು ರಂಜಿಸಿದರು.


ಕನ್ನಡದ ರಿಮಿಕ್ಸ್ ಹಾಡುಗಳಿಗೆ ಟಪಾಂಗುಚ್ಚಿ ನೃತ್ಯ ಪ್ರದರ್ಶನ ನೀಡಿದ ಶ್ರೀ ವಾಣಿವಿಲಾಸ ಅರಸು ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು, ವೇದಿಕೆಯೇ ಕುಣಿದು ಕುಪ್ಪಳಿಸುವಂತೆ ಮಾಡಿದರು. ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ, ಭರತನಾಟ್ಯ,



ಹುಲಿ ಕುಣಿತ, ಯಕ್ಷಗಾನ ಒಳಗೊಂಡಂತೆ ನಾಡಿನ ಸಾಂಸ್ಕೃತಿಕ ನೃತ್ಯ ಕಲೆಗಳನ್ನು ಅನಾವರಣಗೊಳಿಸಿದರು. ಈ ವೇಳೆ ಎಲ್ಲೆಡೆ ಕನ್ನಡ ಬಾವುಟಗಳು ರಾರಾಜಿಸುವ ಮೂಲಕ ಇಡೀ ಬಯಲು ರಂಗಮಂದಿರವೇ ಕನ್ನಡಮಯವಾಗಿ ಕಾಣುತ್ತಿತ್ತು. ಹಾಗೆಯೇ ಕರ್ನಾಟಕ ಮಾತೆ, ನಮ್ಮ ಮನೆಯ ಮಾತೆ ಕನ್ನಡ ನಮ್ಮೆಲ್ಲರ ಸಿರಿನುಡಿ, ಹೊನ್ನುಡಿ ಎಂದ ಮದ್ದೂರಿನ ಭಾರತೀನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಕನ್ನಡದ ಕಂಪನ್ನು ಪಸರಿಸಿದರು.

ಮಂಡ್ಯದ ಮಾಂಡವ್ಯ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಅಂಕೋಲಾದಲ್ಲಿ ಮಹಾತ್ಮ ಗಾಂಧೀಜಿ ನೇತೃತ್ವದ ಉಪ್ಪಿನ ಸತ್ಯಾಗ್ರಹ ತಿಳಿಸಿಕೊಟ್ಟರೆ, ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಹಾಗೂ ಮೈಸೂರಿನ ಶಾರದಾ ವಿಲಾಸ ಕಾಲೇಜು ಆಫ್ ಫಾರ್ಮಸಿ ವಿದ್ಯಾರ್ಥಿಗಳು ಕಿತ್ತೂರು ಸಂಸ್ಥಾನ, ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ವೀರಾವೇಶ ಪ್ರದರ್ಶಿಸಿದರು. ಹೆಚ್.ಡಿ. ಕೋಟೆಯ ಶ್ರೀ ಆದಿಚುಂಚನಗಿರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಮಹಿಳಾ ಸಬಲೀಕರಣದ ಕುರಿತು ಜಾಗೃತಿ ಮೂಡಿಸಿದರೆ, ಮೈಸೂರಿನ ಆಲನಹಳ್ಳಿಯ ಶ್ರೀ ನಿರ್ವಾಣಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಪರಿಸರ ಕಾಪಾಡುವಂತೆ ಮನವಿ ಮಾಡಿದರು.

ಮುಗಿಲು ಮುಟ್ಟಿದ 'ಅಪ್ಪು' ಘೋಷಣೆ...



ಡಾ. ರಾಜ್‌ಕುಮಾರ್ ಅವರ ಕಿರಿಯ ಪುತ್ರಿ ಪೂರ್ಣಿಮಾ ಮತ್ತು ನಟ ರಾಮ್‌ಕುಮಾರ್ ಅವರ ಪುತ್ರ ಧೀರನ್ ರಾಮ್‌ಕುಮಾರ್ 'ಯುವ ಸಂಭ್ರಮ'ಕ್ಕೆ ತಾರಾ ಮೆರಗು ನೀಡಿದರು. ಈ ವೇಳೆ ಎಲ್ಲೆಡೆ 'ಅಪ್ಪು ಘೋಷಣೆ' ಮೊಳಗಿತು. ಪುನೀತ್ ರಾಜ್‌ಕುಮಾರ್ ಭಾವಚಿತ್ರವುಳ್ಳ ಕನ್ನಡ ಬಾವುಟಕ್ಕೆ ಮುತ್ತಿಕ್ಕಿ, ಹಾರಿಸಿದ ಧೀರನ್, ಅಭಿಮಾನಿಗಳ ಮನಗೆದ್ದರಲ್ಲದೆ ಅಪ್ಪು ಮೇಲಿನ ಅಭಿಮಾನವನ್ನು ಕಂಡು ಭಾವುಕರಾದರು. ಮೈಸೂರಿಗೂ ಡಾ.ರಾಜ್‌ಕುಮಾರ್ ಕುಟುಂಬಕ್ಕೂ ಅವಿನಾಭಾವ ಸಂಬಂಧವಿದೆ. ತಮ್ಮ ನಟನೆಯ 'ಶಿವ 143' ಸಿನಿಮಾ ವೀಕ್ಷಣೆ ಮಾಡುವಂತೆ ಮನವಿ ಮಾಡಿದರು.

ನವ ದುರ್ಗೆಯ ದರ್ಶನ: ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿಗಳು ನವದುರ್ಗೆಯರ ದರ್ಶನ ಮಾಡಿಸುವ ಮೂಲಕ ವೈಭವದ ನವರಾತ್ರಿ ಉತ್ಸವಕ್ಕೆ ಸ್ವಾಗತ ಕೋರಿದರು. ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜು ಹಾಗೂ ಪಾಂಡವಪುರ ಚಿನಕುರಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ವಿವಿಧತೆಯಲ್ಲಿ ಏಕತೆ ಸಾರಿದರು. ಒಂದೇ ವೇದಿಕೆಯಲ್ಲಿ ವಿವಿಧ ಪ್ರಕಾರಗಳ ನೃತ್ಯ ಪ್ರದರ್ಶನದ ಮೂಲಕ ಎಲ್ಲರ ಮನಗೆದ್ದರು.

ಜನಸಾಗರ: ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಶನಿವಾರ ಜನಸಾಗರವೇ ಕಂಡು ಬಂದಿತು. ವಾರಾಂತ್ಯ ದಿನದ ಜೊತೆಗೆ 'ಯುವ ಸಂಭ್ರಮ' ಕಡೆಯ ದಿನವಾಗಿದ್ದರಿಂದ ಸಹಸ್ರಾರು ಜನರು ಸೇರಿದ್ದರು. ಬಯಲು ರಂಗಮಂದಿರ ಇಕ್ಕೆಲಗಳಲ್ಲಿಯೂ ಜನಸಮೂಹವೇ ನೆರೆದಿತ್ತು. ನೃತ್ಯ ಪ್ರದರ್ಶನಗಳನ್ನು ನಿಂತುಕೊಂಡು ನೋಡಲಾಗದ ಪರಿಸ್ಥಿತಿ ಹಲವರದ್ದಾಗಿತ್ತು.

ಕುಸ್ತಿ ಪಂದ್ಯಾವಳಿಗೆ ಒಲಿಂಪಿಕ್ ಕುಸ್ತಿ ಪದಕ ವಿಜೇತೆ ಸಾಕ್ಷಿ ಮಲ್ಲಿಕ್ ಭಾಗಿ

● ನಾಳೆಯಿಂದ ಕುಸ್ತಿ ಪಂದ್ಯಾವಳಿಗೆ ಚಾಲನೆ ● ನಾಡಕುಸ್ತಿ ವಿಜೇತರಿಗೆ ಪ್ರಶಸ್ತಿ ಪತ್ರದೊಂದಿಗೆ ಬೆಳ್ಳಿ ಗದೆ, ಪ್ರತಿಷ್ಠಿತ ಕಪ್‌ಗಳ ವಿತರಣೆ



ಸಾಕ್ಷಿ ಮಲ್ಲಿಕ್

ಮೈಸೂರು, ಸೆ.24(ಜಿಎ)- ಒಲಿಂಪಿಕ್ ಕ್ರೀಡಾಕೂಟದಲ್ಲಿ ಪದಕ ಗೆದ್ದ ಭಾರತದ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಮೈಸೂರು ದಸರಾ ಮಹೋತ್ಸವದ ಒಂದು ದಿನದ ನಾಡ ಕುಸ್ತಿ ಪಂದ್ಯಾವಳಿಯ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ ಎಂದು ಕುಸ್ತಿ ಉಪ ಸಮಿತಿಯ ಉಪವಿಶೇಷಾಧಿಕಾರಿಯೂ ಆದ ಹೆಚ್ಚುವರಿ ಪೊಲೀಸ್ ಅಧೀಕ್ಷಕಿ ನಂದಿನಿ ತಿಳಿಸಿದರು.

ನಗರದ ಪೊಲೀಸ್ ಅಧೀಕ್ಷರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ದಸರಾ ಕುಸ್ತಿ ಪಂದ್ಯಾವಳಿಯನ್ನು ಸೆ26 ರ ಮಧ್ಯಾಹ್ನ 3.30ಕ್ಕೆ ಯುವಜನ ಹಾಗೂ ಕ್ರೀಡಾ ಸಚಿವರಾದ ಡಾ.ಕೆ.ಸಿ.ನಾರಾಯಣ ಗೌಡ ಉದ್ಘಾಟಿಸಲಿದ್ದು, ಒಂದು ದಿನದ ಆಕರ್ಷಣೆಯಾಗಿ ಕುಸ್ತಿಪಟು ಸಾಕ್ಷಿ ಮಲ್ಲಿಕ್ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಈ ಬಾರಿಯೂ ನಾಡ ಕುಸ್ತಿ ಪಂದ್ಯಾವಳಿಯ ಜೋಡಿ ಕಟ್ಟುವ ಕಾರ್ಯ ಪೂರ್ಣಗೊಂಡಿದ್ದು, ಸೆ.29ರಿಂದ ಅ.2ರವರೆಗೂ ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರಿ, ದಸರಾ ಕುಮಾರ್ ಮತ್ತು ದಸರಾ



ಕಿಶೋರ ಪ್ರಶಸ್ತಿಗಳಿಗೆ ಪಾಯಿಂಟ್ ಕುಸ್ತಿ ಪಂದ್ಯಾವಳಿಗಳನ್ನು ಆಯೋಜಿಸಲಾಗಿದ್ದು, ಅ.2 ರಂದು ಸಮಾರೋಪಗೊಳ್ಳಲಿದೆ.

ನಾಡಕುಸ್ತಿ ಪಂದ್ಯಾವಳಿಯಲ್ಲಿ ದಸರಾ ಕಿಶೋರ್ ಪಂದ್ಯಾವಳಿಯು 57 ಕೆ.ಜಿ ಯಿಂದ 65 ಕೆ.ಜಿ ವರೆಗೂ, ದಸರಾ ಕೇಸರಿ 86 ಕೆಜಿ ವರೆಗೆ, ದಸರಾ ಕಂಠೀರವ 86 ಕೆ.ಜಿ. ಮೇಲ್ಪಟ್ಟು ಮತ್ತು ಮಹಿಳೆಯರ ದಸರಾ ಕಿಶೋರಿ ಪಂದ್ಯಾವಳಿಗೆ 57 ಕೆ.ಜಿ.ಯಿಂದ 62 ಕೆ.ಜಿ. ವರೆಗೆ ಹಾಗೂ 74 ಕೆ.ಜಿ. ಮೇಲ್ಪಟ್ಟವರಿಗೆ ಮೈಸೂರು ದಸರಾ ಕುಮಾರ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕುಮಾರ್, ದಸರಾ ಕಿಶೋರಿ ಮತ್ತು ದಸರಾ ಕಿಶೋರ್ ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಪ್ರಶಸ್ತಿ ಪತ್ರದೊಂದಿಗೆ ಕ್ರಮವಾಗಿ 1.25 ಕೆ.ಜಿ, 1.00 ಕೆ.ಜಿ., 0.75 ಕೆ.ಜಿ. 0.50 ಕೆ.ಜಿ. ಮತ್ತು 0.50 ಕೆಜಿ ಬೆಳ್ಳಿ ಗದೆಗಳನ್ನು ಹಾಗೂ ಉತ್ತಮ ನಾಡಕುಸ್ತಿ ಪಟುಗಳಿಗೆ ಮೇಯರ್ ಕಪ್, ಸಾಹುಕಾರ್ ಚೆನ್ನಯ್ಯ ಕಪ್, ಮೈಸೂರು ಮಹಾರಾಜ ಒಡೆಯರ್ ಕಪ್‌ಗಳನ್ನು ನೀಡಲು ನಿರ್ಧರಿಸಲಾಗಿದೆ. ಮೈಸೂರು ನಗರದ ಉತ್ತಮ ನಾಡಕುಸ್ತಿ ಪಟುಗೆ ಮೇಯರ್ ಕಪ್, ಮೈಸೂರು ಗ್ರಾಮಾಂತರ ನಾಡಕುಸ್ತಿ ಪಟುವಿಗೆ ಮೈಸೂರು ಮಹಾರಾಜ ಒಡೆಯರ್ ಕಪ್ ಮತ್ತು ರಾಜ್ಯದ ಉತ್ತಮ ನಾಡಕುಸ್ತಿ ಪಟುವಿಗೆ ಸಾಹುಕಾರ್ ಚೆನ್ನಯ್ಯ ಕಪ್ ನೀಡಿ ಗೌರವಿಸಲಾಗುವುದು ಎಂದು ತಿಳಿಸಿದರು.

ಪಂಜ ಕುಸ್ತಿ: ಕರ್ನಾಟಕ ರಾಜ್ಯ ಪಂಜ ಕುಸ್ತಿ ಸಂಸ್ಥೆ ಮತ್ತು ಮೈಸೂರಿನವರ ಒಳಗೊಂಡು ಸೆ.29 ರಂದು 7ನೇ ರಾಜ್ಯಮಟ್ಟದ ಪುರುಷ, ಮಹಿಳೆ ಮತ್ತು 4ನೇ ವಿಶೇಷಚೇತನರ ಪಂಜ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದ್ದು, ಪಂಜ ಕುಸ್ತಿ ಆಕರ್ಷಣೆಯಾಗಿ ವಿಜೇತ ಮಹಿಳಾ ಪಂಜ ಕುಸ್ತಿ ಪಟುವಿಗೆ ಮೈಸೂರು ದಸರಾ ಕುಮಾರಿ ಪ್ರಶಸ್ತಿ, ಪುರುಷ ಪಂಜ ಕುಸ್ತಿ ಪಟುವಿಗೆ ಮೈಸೂರು ದಸರಾ ಶ್ರೀ ಪ್ರಶಸ್ತಿ, ವಿಶೇಷಚೇತನ ಮಹಿಳಾ ಪಂಜ ಕುಸ್ತಿ ಪಟುವಿಗೆ ದಸರಾ ನವಚೇತನ ತಾರೆ ಪ್ರಶಸ್ತಿ ಮತ್ತು ವಿಶೇಷ ಚೇತನ ಪುರುಷ ಪಂಜ ಕುಸ್ತಿ ಪಟುವಿಗೆ ವಿಶೇಷ ಚೇತನ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದರು.

ಮೈಸೂರು ವಿಭಾಗ ಮಟ್ಟದ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಪುರುಷ ಕುಸ್ತಿ ಪಟುಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ದಸರಾ ಕುಮಾರ ಪ್ರಶಸ್ತಿ ಮತ್ತು ಅರ್ಧ ಕೆ.ಜಿಯ ಬೆಳ್ಳಿ ಗದೆಯನ್ನು ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು 74 ಕೆ.ಜಿ. ತೂಕದ ಮೇಲ್ಪಟ್ಟ ಕುಸ್ತಿ ಪಂದ್ಯಾವಳಿಯಲ್ಲಿ ವಿಜೇತರಿಗೆ ನೀಡಲು ನಿರ್ಧರಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕುಸ್ತಿ ಉಪಸಮಿತಿಯ ಅಧ್ಯಕ್ಷ ದೇವರಾಜ್, ಉಪಾಧ್ಯಕ್ಷ ಮಹೇಶ್ ರಾಜೇ ಅರಸ್, ಕಾರ್ಯದರ್ಶಿ ಎಸ್.ಜೆ. ಹರ್ಷವರ್ಧನ್ ಉಪಸ್ಥಿತರಿದ್ದರು.

ಈಗಾಗಲೇ ಕುಸ್ತಿ ಪಂದ್ಯಾವಳಿಗಳಿಗೆ ಎಲ್ಲಾ ರೀತಿ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದ್ದು, ಹಿರಿಯ ಕುಸ್ತಿ ಪಟುಗಳು ಮತ್ತು ನುರಿತ ಕೋಚ್‌ಗಳು ಪಂದ್ಯಾವಳಿಯ ತೀರ್ಪುಗಾರರಾಗಿದ್ದಾರೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತದೆ.
-ನಂದಿನಿ, ಕುಸ್ತಿ ಉಪಸಮಿತಿಯ ಉಪವಿಶೇಷಾಧಿಕಾರಿ

ನಾಡಕುಸ್ತಿ ಪಂದ್ಯಾವಳಿ ಆಕರ್ಷಣೆ
ಕೊಲ್ಲಾಪುರದ ಸಿದ್ದೇಶ್ವರ ಮೌಲಿ ಜಮದಾಳೆ ಮತ್ತು ಹರಿಯಾಣದ ವಿಕಾಸ್ ಕಾಳ ನಡುವೆ ಮಾರ್ಫಿಟ್ ಕುಸ್ತಿ ಪಂದ್ಯಾವಳಿ ಮತ್ತು ಬೆಳಗಾವಿಯ ಸುನೀಲ್ ಪಡತಾರೆ ಮತ್ತು ಪಂಜಾಬ್‌ನ ಅಭಿಮನ್ಯು ನಡುವೆ 30 ನಿಮಿಷದ ಕುಸ್ತಿ ಪಂದ್ಯಾವಳಿಯನ್ನು ಸೆ.26 ರಂದು ಆಯೋಜಿಸಲಾಗಿದೆ ಎಂದರು.

ಮೈಸೂರಲ್ಲಿ ಗ್ರೇಟ್ ಬಾಂಬೆ ಸರ್ಕಸ್ ಪ್ರಾರಂಭ



ಮೈಸೂರು, ಸೆ.24(ಜಿಎ)- ಮೈಸೂರಿನ ಕಾರಂಜಿ ಕೆರೆ ಬಳಿ, ಮೃಗಾಲಯದ ಹಿಂಭಾಗ 'ಗ್ರೇಟ್ ಬಾಂಬೆ ಸರ್ಕಸ್'ಗೆ ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಶನಿವಾರ ಸಂಜೆ ಚಾಲನೆ ನೀಡಿದರು. ಇದರೊಂದಿಗೆ ದಸರಾಗೆ ಮತ್ತೊಂದು ಮನರಂಜನೆ ಸೇರ್ಪಡೆಯಾಗಿದೆ. ಮೈ ರೋಮಾಂಚನಗೊಳಿಸುವ ಜೊತೆಗೆ ಎಲ್ಲರನ್ನು ನಗೆಗಡಲಲ್ಲಿ ತೇಲಿಸುವ ಸರ್ಕಸ್‌ಗೆ ಚಾಲನೆ ದೊರೆತಿದ್ದು, ಇಥಿಯೋಪಿಯನ್ , ರಷ್ಯನ್ ಕಲಾವಿದರು ಸಾಹಸದ ಜೊತೆಗೆ ಹಾಸ್ಯವನ್ನು ಉಣಬಡಿಸಿದರು.

20ಕ್ಕೂ ಹೆಚ್ಚು ರಿಂಗ್‌ಗಳನ್ನು ಹಾಕಿಕೊಂಡು ರಷ್ಯನ್ ರಿಂಗ್ ಡಾನ್ಸ್ ಮಾಡಿದ ಯುವತಿಗೆ ನೆರೆದಿದ್ದ ಪ್ರೇಕ್ಷಕರಿಂದ ಬಾರಿ ಶಿಳ್ಳೆ ಚಪ್ಪಾಳೆ ಗಿಟ್ಟಿಸಿದರು. ಉಲ್ಟಾ ಮಲಗಿಕೊಂಡು ಕಾಲಿನ ಮೇಲೆ ಏಣಿ ಆಕಾರದ ದೊಡ್ಡದೊಂದು ಪೋಲ್ ಇಟ್ಟುಕೊಂಡು ಬ್ಯಾಸ್ಕೆಟ್ ಬಾಲ್ ಹಾಕುವ ಟವರ್ ಬ್ಯಾಸ್ಕೆಟ್‌ಬಾಲ್ ಎಂಬ ಪ್ರಕಾರದ ಪ್ರದರ್ಶನವು ಎಲ್ಲರನ್ನೂ ಆಕರ್ಷಿಸಿದರೆ, ಚಿಕ್ಕಮಗಳೂರಿನ ವಿನೋದ್ ಮತ್ತು ತಂಡ ಕಾಲಿಗೆ ಸ್ಕೇಟಿಂಗ್ ಕಟ್ಟಿಕೊಂಡು ಒಂದು ವೃತ್ತಕಾರದ ಟೇಬಲ್ ಮೇಲೆ ನಿಂತು ಮಾಡಿದ ರೋಲ್ ಸ್ಕೇಟಿಂಗ್ ಎಲ್ಲರ ಗಮನ ಸೆಳೆಯಿತು.

ಇಥಿಯೋಪಿಯನ್ ಕಲಾವಿದರ ಸಾಹಸಮಯ ಕತ್ತಿ ಪ್ರದರ್ಶನ, ರೋಲರ್ ಬ್ಯಾಲೆನ್ಸ್ ಪ್ರೇಕ್ಷಕರ ಮೈನವಿರೇಳಿಸಿದರೆ, ದಾರದ ಮೇಲೆ ಬುಗುರಿಯ ಪ್ರದರ್ಶನವು ಹುಬ್ಬೇರಿಸಿತು. ಶ್ವಾನಗಳ ರೀವರ್ಸ್ ವಾಕ್, ರಿಂಗ್ ಜಂಪ್ ಮತ್ತು ಗಿಳಿಗಳ ಸೈಕಲ್ ಸವಾರಿ ಹಗ್ಗದ ಮೇಲಿನ ಸಾಹಸ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸಾಹಸ ಕಲೆಗಳ ನಡುವೆ ಜೋಕರ್‌ಗಳ ಕಾಮಿಡಿ ಪ್ರಸಂಗಗಳು ಮಕ್ಕಳನ್ನು ನಗೆಗಡಲಲ್ಲಿ ತೇಲಿಸಿತು.

ಪ್ರದರ್ಶನಗಳು : ದಿನಕ್ಕೆ ಮೂರು ಪ್ರದರ್ಶನಗಳಿದ್ದು, ಮಧ್ಯಾಹ್ನ 1, ಸಂಜೆ 4, ರಾತ್ರಿ 7 ಗಂಟೆ. ಮುಂದಿನ ದಿನಗಳಲ್ಲಿ ಬೆಳಗ್ಗೆ 10 ರಿಂದಲೇ ಪ್ರದರ್ಶನಕ್ಕೆ ಚಿಂತಿಸಲಾಗಿದೆಯಂತೆ.

ನಾಳೆ ದಸರಾ ವಸ್ತು ಪ್ರದರ್ಶನ ಉದ್ಘಾಟನೆ



ಮೈಸೂರು, ಸೆ.24(ಜಿಎ)- ಈ ಬಾರಿಯ 90 ದಿನಗಳ ದಸರಾ ವಸ್ತು ಪ್ರದರ್ಶನವನ್ನು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಸೆ.26 ರಂದು ಉದ್ಘಾಟಿಸಲಿದ್ದಾರೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ತಿಳಿಸಿದರು.

ನಗರದ ವಸ್ತು ಪ್ರದರ್ಶನ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಸುಮಾರು 12 ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರನ್ನು ಸೆಳೆಯುವ ಗುರಿಯನ್ನು ಹೊಂದಿದ್ದು, ಉದ್ಘಾಟನೆಯ ದಿನದಂದು ವಸ್ತು ಪ್ರದರ್ಶನದ ಆವರಣದಲ್ಲಿ ಶೇ.80 ರಷ್ಟು ಮಳಿಗೆಗಳು ಲಭ್ಯವಿರಲ್ಲಿದ್ದು, ಬಾಕಿ ಶೇ.20 ರಷ್ಟು ಮಳಿಗೆಗಳು ಮುಂದಿನ ದಿನಗಳಲ್ಲಿ ತುಂಬಲಿವೆ ಎಂದರು.

ವಯಸ್ಕರಿಗೆ 30 ರೂ. ಮತ್ತು ಮಕ್ಕಳಿಗೆ 20 ರೂ. ಗಳ ಟಿಕೆಟ್ ದರವನ್ನು ನಿಗದಿಪಡಿಸಲಾಗಿದ್ದು ಪಾರ್ಕಿಂಗ್‌ನಲ್ಲಿ ಸ್ಕೂಟರ್‌ಗೆ 10 ರೂ., ಕಾರ್‌ಗಳಿಗೆ 30 ರೂ. ಮತ್ತು ಬಸ್‌ಗಳಿಗೆ 50 ರೂ. ಗಳನ್ನು ನಿಗದಿಪಡಿಸಲಾಗಿದೆ. ಕನ್ನಡ ರಾಜ್ಯೋತ್ಸವ ಮತ್ತು ಗಾಂಧೀ ಜಯಂತಿಯಂದು ಶಾಲಾ ಮಕ್ಕಳಿಗೆ ಉಚಿತ ಪ್ರವೇಶವಿರಲಿದೆ.
-ಮಿರ್ಲೆ ಶ್ರೀನಿವಾಸ್‌ಗೌಡ.

ವಸ್ತು ಪ್ರದರ್ಶನದ ಆವರಣದಲ್ಲಿ ವಿವಿಧ ಇಲಾಖೆಗಳ 39 ಮಳಿಗೆಗಳು ಈ ಬಾರಿಯ ಆಕರ್ಷಣೆಯಾಗಲಿದೆ. ಈಗಾಗಲೇ 23 ಮಳಿಗೆಗಳು ಪೂರ್ಣಗೊಂಡಿದ್ದು, 13 ಮಳಿಗೆಗಳು ಕೆಲ ಸಮಸ್ಯೆಗಳಿಂದ ಆರಂಭವಾಗಿಲ್ಲ. ಅದು ಸದ್ಯದಲ್ಲಿಯೇ ಆಗಲಿದೆ. ಅದರೊಟ್ಟಿಗೆ 143 ವಾಣಿಜ್ಯ ಮಳಿಗೆಗಳು, 30 ಆಹಾರ ಮಳಿಗೆಗಳನ್ನು ಕಾಣಬಹುದಾಗಿದೆ ಎಂದರು.

ಈಗಾಗಲೇ ಕಾವೇರಿ ಕಲಾಗ್ಯಾಲರಿ ಉದ್ಘಾಟನೆಯಾಗಿದ್ದು , ಸಾರ್ವಜನಿಕರಿಗೆ ವಿಶೇಷವಾಗಿ ಈ ಬಾರಿ ನೋಡುವ ಅವಕಾಶ ಕಲ್ಪಿಸಲಾಗಿದೆ. ಇದರೊಟ್ಟಿಗೆ " ಸ್ಯಾಂಡ್ ಮ್ಯೂಸಿಯಂ " ಎಂಬ ವಿಶೇಷ ಕಲಾಕೃತಿಯಿಂದ ಪುನೀತ್ ರಾಜ್‌ಕುಮಾರ್ ಮತ್ತು ಆಜಾದಿ ಅಮೃತ ಮಹೋತ್ಸವ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಆಕೃತಿಗಳನ್ನು ನಿರ್ಮಿಸಲಾಗಿದ್ದು, ಇದರೊಟ್ಟಿಗೆ ಕರ್ನಾಟಕದ ಗತ ವೈಭವನ್ನು ಸಾರುವ 5 ನಿಮಿಷಗಳ ಲೇಸರ್ ಶೋ ಪ್ರದರ್ಶನಗೊಳ್ಳಲಿದೆ. ಇದನ್ನು ಒಮ್ಮೆ 4 ಸಾವಿರ ಮಂದಿ ವೀಕ್ಷಿಸಬಹುದಾಗಿದೆ. 60 ಕ್ಕೂ ಹೆಚ್ಚು ರೀತಿಯ ಅಮ್ಯೂಸ್‌ಮೆಂಟ್ ಆಟಿಕೆಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದರು.

ಸ್ವಚ್ಛತೆಯೊಂದಿಗೆ ಸಾರ್ವಜನಿಕರಿಗೆ ಉಚಿತ ಕುಡಿಯುವ ನೀರನ್ನು ನೀಡಲಾಗುತ್ತಿದೆ. 8 ಶೌಚಾಲಯಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದ್ದು, ಭದ್ರತಾ ದೃಷ್ಟಿಯಿಂದ 80 ಸಿಸಿ ಕ್ಯಾಮರಾಗಳನ್ನು ಅಳವಡಿಲಾಗಿದೆ. ಇವುಗಳ ಜೊತೆಗೆ ಮಾಹಿತಿ ಕೇಂದ್ರ ಉಪ ಪೊಲೀಸ್ ಠಾಣೆ, ಪ್ರಥಮ ಚಿಕಿತ್ಸಾ ಘಟಕ ಮತ್ತು ಅಗ್ನಿಶಾಮಕ ದಳ ಸಿಬ್ಬಂದಿಗಳು ಇರಲಿದ್ದಾರೆ ಎಂದರು.

ಸೆ.26ರಿಂದ ಅ.5ರವರೆಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ದಸರಾ ಫಲ-ಪುಷ್ಪ ಪ್ರದರ್ಶನ

● ಗಾಜಿನ ಮನೆಯಲ್ಲಿ 20 ಅಡಿ ಎತ್ತರದ ರಾಷ್ಟ್ರಪತಿ ಭವನ ಪ್ರತಿರೂಪ ● ನಟ ಪುನೀತ್ ರಾಜ್‌ಕುಮಾರ್ ಅವರ 2 ಪ್ರತಿಮೆ, 3 ಪುತ್ಥಳಿ ● ಗಾಜನೂರಿನ ಡಾ.ರಾಜ್ ಮನೆ ಆಕೃತಿ

ಮೈಸೂರು,ಸೆ.24(ಎಂಟಿವೈ)- ನಾಡಹಬ್ಬ ದಸರಾ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುವ ದಸರಾ ಫಲಪುಷ್ಪ ಪ್ರದರ್ಶನ ಕುಪ್ಪಣ್ಣ ಪಾರ್ಕ್‌ನಲ್ಲಿ ಸೆ.26ರಿಂದ ಅ.5ರವರೆಗೆ ನಡೆಯಲಿದ್ದು, ಹಲವು ವೈಶಿಷ್ಟ್ಯತೆಯಿಂದ ಕೂಡಿರುತ್ತದೆ ಎಂದು ಫಲಪುಷ್ಪ ಪ್ರದರ್ಶನ ಕಾರ್ಯಾಧ್ಯಕ್ಷರೂ ಆಗಿರುವ ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿಇಓ ಬಿ.ಆರ್.ಪೂರ್ಣಿಮಾ ತಿಳಿಸಿದ್ದಾರೆ.

ಕುಪ್ಪಣ್ಣ ಪಾರ್ಕ್‌ನಲ್ಲಿ ಶನಿವಾರ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋವಿಡ್ ಕಾರಣದಿಂದ ಎರಡು ವರ್ಷದಿಂದ ದಸರಾ ಫಲಪುಷ್ಪ ಪ್ರದರ್ಶನ ನಡೆದಿರಲಿಲ್ಲ. ಆದರೆ, ಈ ಬಾರಿ ಅದ್ಧೂರಿಯಾಗಿ ಆಯೋಜಿಸಲಾಗಿದೆ. ನಾಡಹಬ್ಬ ದಸರಾ ಮಹೋತ್ಸವವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸುತ್ತಿರುವುದು ಹಾಗೂ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕುಪ್ಪಣ್ಣ ಪಾರ್ಕ್‌ನಲ್ಲಿರುವ ಗಾಜಿನ ಮನೆಯಲ್ಲಿ 20 ಅಡಿ ಎತ್ತರದ ರಾಷ್ಟ್ರಪತಿ ಭವನದ ಪ್ರತಿರೂಪ ವನ್ನು ಲಕ್ಷಾಂತರ ಗುಲಾಬಿ ಹೂವುಗಳಿಂದ ನಿರ್ಮಿಸಲಾಗುತ್ತಿದೆ. ಹಲವು ವೈಶಿಷ್ಟ್ಯತೆಗಳನ್ನು ಹೊಂದಿರುವ ಫಲಪುಷ್ಪ ಪ್ರದರ್ಶನ ಪ್ರವಾಸಿಗರ ಕಣ್ಮನ ಸೆಳೆಯಲಿದೆ. 2018-19ನೇ ಸಾಲಿನಲ್ಲಿ ನಡೆದ ಫಲಪುಷ್ಪ ಪ್ರದರ್ಶನವನ್ನು 4-5 ಲಕ್ಷ ಜನ ವೀಕ್ಷಿಸಿದ್ದರು. ಈ ವರ್ಷವೂ 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡುವ ನಿರೀಕ್ಷೆಯಿದೆ ಎಂದರು.

ನಟ ಪುನೀತ್ ರಾಜ್‌ಕುಮಾರ್ ಸ್ಮರಣೆ: ಫಲಪುಷ್ಪ ಪ್ರದರ್ಶನದಲ್ಲಿ ನಟ ಪುನೀತ್ ರಾಜ್‌ಕುಮಾರ್ ಸ್ಮರಣೆ



ಮಾಡುವ ನಿಟ್ಟಿನಲ್ಲಿ ಪುನೀತ್ ರಾಜ್‌ಕುಮಾರ್ ಅವರ ಏಳು ಅಡಿ ಎತ್ತರದ ಪ್ರತಿಮೆ, ಮೂರು ಪುತ್ಥಳಿಯನ್ನು ತಂದು ಹೂವಿನಿಂದ ಅಲಂಕಾರ ಮಾಡಲಾಗುತ್ತದೆ. ಈ ಎಲ್ಲವನ್ನು ಒಂದೇ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಗುತ್ತಿದ್ದು, ಸೆಲ್ಫಿ ಪಾಯಿಂಟ್ ನಿರ್ಮಿಸಲಾಗಿದೆ ಇದರೊಂದಿಗೆ ವರನಟ ಡಾ.ರಾಜ್‌ಕುಮಾರ್ ಅವರ ಗಾಜನೂರಿನ ಮನೆಯ ಆಕೃತಿಯನ್ನು ಹೂವು ಹಾಗೂ ದಪ್ಪ ಮೆಣಸಿನಕಾಯಿಯಿಂದ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ವಿವಿಧ ಆಕೃತಿಗಳು: ಚಾಮುಂಡಿಬೆಟ್ಟದ ನಂದಿ ವಿಗ್ರಹ, ಜೇನುನೊಣ, ಆನೆ, ಜಿರಾಫೆ ಸೇರಿದಂತೆ ವಿವಿಧ ಆಕೃತಿಗಳನ್ನು ರೂಪಿಸಲಾಗುತ್ತಿದೆ. ಮಕ್ಕಳ ಆಕರ್ಷಣೆಗಾಗಿ 7 ಅಡಿ ಎತ್ತರದ ದಪ್ಪ ಮೆಣಸಿನಕಾಯಿ ಆಕೃತಿಗೆ ಮೆಣಸಿನ ಕಾಯನ್ನೇ ಜೋಡಣೆ ಮಾಡಲಾಗುತ್ತಿದೆ ಎಂದರು.

32 ವಿಧದ ಹೂ ಬಳಕೆ: ಈ ಬಾರಿಯ ದಸರಾ ಫಲಪುಷ್ಪ ಪ್ರದರ್ಶನದಲ್ಲಿ 32 ವಿವಿಧ ಹೂಗಳುಳ್ಳ 50 ಸಾವಿರ ಕುಂಡಗಳಲ್ಲಿ ನಾನಾ ಆಕೃತಿಗಳಲ್ಲಿ ಜೋಡಣೆ ಮಾಡಲಾಗಿದೆ. ಹೊರ ರಾಜ್ಯಗಳಿಂದ ತಂದಿರುವ ಹೂವುಗಳುಳ್ಳ 5 ಸಾವಿರ ಕುಂಡಗಳನ್ನು ಕುಪ್ಪಣ್ಣ ಪಾರ್ಕ್‌ನಲ್ಲಿ ಜೋಡಿಸಲಾಗುತ್ತಿದೆ. ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಪಿಟೋನಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯಾ ಸೇರಿದಂತೆ ಇನ್ನಿತರ ಹೂವುಗಳು ಕಣ್ಮನ ಸೆಳೆಯಲಿವೆ. ಇದರೊಂದಿಗೆ ಗುಲಾಬಿ, ಜರ್ಬೆರಾ, ಆರ್ಕಿಡ್ಸ್, ಬ್ಲೂ ಡೈಸಿ, ಕ್ರೈಸಾಂಥಿಮಮ್, ಡ್ರೆಸಿನಾ ಹೂಗಳು ಫಲಪುಷ್ಪ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು ನೀಡಲಿವೆ ಎಂದು ವಿವರಿಸಿದರು.

ಫುಡ್ ಜೋನ್: ಫಲಪುಷ್ಪ ಪ್ರದರ್ಶನಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಫುಡ್‌ಜೋನ್ ನಿರ್ಮಿಸಲಾಗಿದ್ದು, 50 ಮಳಿಗೆಗಳಿಗೆ ಅವಕಾಶ ನೀಡಲಾಗಿದೆ. ಗುತ್ತಿಗೆ ಪಡೆದಿರುವವರು ಈಗಾಗಲೇ ಮಳಿಗೆ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಒಂದೆಡೆ ಫಲಪುಷ್ಪ ಪ್ರದರ್ಶನ ವೀಕ್ಷಿಸಿದ ಪ್ರವಾಸಿಗರು, ಆಹಾರ ಸೇವಿಸಿ ಸಂಭ್ರಮಿಸಲಿದ್ದಾರೆ ಎಂದರು.

ಅಮ್ಯೂಸ್‌ಮೆಂಟ್ ಪಾರ್ಕ್: ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬರುವ ಮಕ್ಕಳ ಮನೋರಂಜನೆಗಾಗಿ ಅಮ್ಯೂಸ್‌ಮೆಂಟ್ ಪಾರ್ಕ್ ವ್ಯವಸ್ಥೆ ಮಾಡಲಾಗಿದೆ. ಅಮ್ಯೂಸ್‌ಮೆಂಟ್ ಪಾರ್ಕ್‌ಗೂ ಟೆಂಡರ್ ನೀಡಲಾಗಿದೆ. ಚಿಕ್ಕ ಚಿಕ್ಕ 4-5 ಆಟಿಕೆಗಳನ್ನು ಅಳವಡಿಸಲು ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ದಸರಾ ಫಲಪುಷ್ಪ ಸಮಿತಿಯ ಅಧ್ಯಕ್ಷ ನಂಜಪ್ಪ, ಉಪಾಧ್ಯಕ್ಷರಾದ ಮಹದೇವಸ್ವಾಮಿ, ವೆಂಕಟರಮಣ ಶೆಟ್ಟಿ, ಶ್ರೀನಿವಾಸ್, ತೋಟಗಾರಿಕಾ ಇಲಾಖೆ ಜಂಟಿ ನಿರ್ದೇಶಕ ಹೆಚ್.ಎಂ.ನಾಗರಾಜು, ಉಪನಿರ್ದೇಶಕ ಕೆ.ರುದ್ರೇಶ್, ಹಿರಿಯ ಸಹಾಯಕ ನಿರ್ದೇಶಕಿ ಸುವೇಧ, ಸಹಾಯಕ ನಿರ್ದೇಶಕ ಸಿ.ನವೀನ್, ತೋಟಗಾರಿಕಾ ಸಂಘದ ಖಜಾಂಚಿ ಶಶಿಕಲಾ ನಾಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಣದಿಂದ ಮಾತ್ರ ದೇಶದ ಪ್ರಗತಿ ಸಾಧ್ಯ

ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು



ಹೆಚ್.ಡಿ.ಕೋಟೆ, ಸೆ.24– ಶಿಕ್ಷಣದಿಂದ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಶನಿವಾರ ನಡೆದ ಶಿಕ್ಷಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯಾವುದೇ ವ್ಯಕ್ತಿ ಉತ್ತಮ ಸಾಧನೆ ಮಾಡಲು ಶಿಕ್ಷಣ ಅವಶ್ಯಕ. ಹೀಗಾಗಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಬೇಕು ಎಂದರು.

ಶಾಲೆಯಲ್ಲಿ ಗುರುಗಳು ಹೇಳುವ ಮಾತು ಮಕ್ಕಳಿಗೆ ವೇದವಾಕ್ಯ ಆಗಿರುತ್ತದೆ. ಮಕ್ಕಳು ತಮ್ಮ ತಂದೆ ತಾಯಿಗಿಂತ ಗುರುಗಳ ಮೇಲೆ ಹೆಚ್ಚು ನಂಬಿಕೆ ಇಟ್ಟಿರುತ್ತಾರೆ. ಹಾಗಾಗಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಕರೆ ನೀಡಿದರು.

ತಾಲೂಕಿನಲ್ಲಿ ಶಿಕ್ಷಕರ ಸಮಸ್ಯೆ ಇದೆ. ಆದರೂ ಇರುವ ಶಿಕ್ಷಕರನ್ನು ಬಳಸಿಕೊಂಡು ಉತ್ತಮ ಸಾಧನೆ ಮಾಡಲಾಗಿದೆ. ಸರ್ಕಾರಿ ಶಾಲೆಯಲ್ಲಿ ಕಳೆದ 15 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಶಿಕ್ಷಕರನ್ನು ಸರ್ಕಾರ ನೇರವಾಗಿ ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದ ಅವರು, ಪಟ್ಟಣದ ಗುರುಭವನ ಹಳೆಯದಾಗಿದ್ದು, ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ನೂತನ ಶಿಕ್ಷಕರ ಭವನ ನಿರ್ಮಾಣ ಮಾಡಲು ಅಧಿವೇಶನದಲ್ಲಿ ಸರ್ಕಾರದ ಗಮನ ಸೆಳೆಯಲಾಗಿದೆ ಎಂದರು.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕೋಟೆ ತಾಲೂಕು ಜಿಲ್ಲೆಗೆ 2ನೇ ಸ್ಥಾನ ಪಡೆದಿದೆ. ಮುಂದಿನ ಬಾರಿ ಮೊದಲ ಸ್ಥಾನಕ್ಕೆ ಬರಲು ಎಲ್ಲರೂ ಕೈ ಜೋಡಿಸಬೇಕು ಎಂದರು. ಮುಖ್ಯ ಭಾಷಣ ಮಾಡಿದ ಉಪನ್ಯಾಸಕ ಜಯರಾಮ್, ಭಾರತ ಗುರು ಪರಂಪರೆ ಹೊಂದಿದ ದೇಶ. ಯಾವ ಜಗತ್ತಿನಲ್ಲಿಯೂ ನೀಡದ ಗೌರವವನ್ನು ಗುರುವಿಗೆ ನೀಡುತ್ತೇವೆ. ಗುರು ಪರಂಪರೆ ಅರ್ಥಮಾಡಿಕೊಂಡರೆ ಗುರುವಿನ ಅರ್ಥ ಆಗುತ್ತದೆ ಎಂದರು.

ಇದೇ ವೇಳೆ ತಾಲೂಕಿನ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ಅನಿತಾ, ಸರಗೂರು ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷೆ ವಿನಾಯಕ ಪ್ರಸಾದ್, ಪುರಸಭೆ ಸದಸ್ಯರಾದ ಸುಹಾಸಿನಿ, ಹೆಚ್.ಸಿ. ನರಸಿಂಹ ಮೂರ್ತಿ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಎಸ್. ಮಹ ದೇವ, ಎಂ.ಚಂದ್ರಕುಮಾರ್, ಡಿ.ಎಂ. ಮಹದೇವ ಸ್ವಾಮಿ, ಭೀಮಪ್ಪ, ಮಲ್ಲಪ್ಪ, ಎನ್.ಆನಂದ್, ಸೋಮಸುಂದರ್, ಅಂತೋಣಿಸ್ವಾಮಿ, ಹೆಚ್.ಬಿ.ಜ್ಯೋತಿ, ಪ್ರಮೋದ್‌ಕುಮಾರ್, ಪ್ರಸನ್ನ ಬಿ.ಸತೀಶ್ ಆರಾಧ್ಯ ಇದ್ದರು.

ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಹುಣಸೂರು, ಸೆ.24– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿ, ಹಿಂಬದಿ ಸವಾರ ತೀವ್ರ ಗಾಯಗೊಂಡಿರುವ ಘಟನೆ ನಗರದ ಎಪಿಎಂಸಿ ಎದುರು ಗುರುವಾರ ರಾತ್ರಿ ನಡೆದಿದೆ.

ತಾಲೂಕಿನ ಬಿ.ಆರ್.ಕಾವಲ್ ಗ್ರಾಮದ ನಿವಾಸಿ ಸ್ವಾಮಿಗೌಡರ ಪುತ್ರ ಮೋಹನ್(35) ಸಾವನ್ನಪ್ಪಿದವರು. ಹಿಂಬದಿ ಸವಾರ ಹರೀಶ್ ತೀವ್ರ ಗಾಯಗೊಂಡು ಮೈಸೂರಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದಾರೆ.

ವಿವರ: ಮೋಹನ್ ಹಾಗೂ ಹರೀಶ್ ಕಾರ್ಯನಿಮಿತ್ತ ಬೈಕಿನಲ್ಲಿ ಹುಣಸೂರಿಗೆ ಬಂದು ವಾಪಸ್ಸಾಗುತ್ತಿದ್ದ ವೇಳೆ ಮೈಸೂರು ಕಡೆಯಿಂದ ಪಿರಿಯಾಪಟ್ಟಣಕ್ಕೆ ತೆರಳುತ್ತಿದ್ದ ಅಪರಿಚಿತ ವಾಹನ ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಮೋಹನ್ ಸಾವನ್ನಪ್ಪಿದ್ದು, ಹಿಂಬದಿ ಸವಾರ ಹರೀಶ್‌ಗೂ ತೀವ್ರ ಪೆಟ್ಟಾಗಿದೆ. ತಕ್ಷಣ ಅವರಿಗೆ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ರವಾನಿಸಲಾಯಿತು.

ಮೋಹನ್ ಹಾಗೂ ಹರೀಶ್ ನಗರಕ್ಕೆ ಸಮೀಪದ ಮೂಕನಹಳ್ಳಿ ಸಂಬಂಧಿಕರ ಮನೆಗೆ ಮಹಾನವಮಿ ಅಂಗವಾಗಿ ಬಾಡೂಟಕ್ಕೆ ತೆರಳಿದ್ದರು. ಊಟ ಮಾಡಿಕೊಂಡು ವಾಪಸ್ಸಾಗುವ ವೇಳೆ ಅಪಘಾತ ನಡೆದಿದೆ. ಮೋಹನ್ ಪತ್ನಿ ಕಳೆದ ಮೂರು ತಿಂಗಳ ಹಿಂದಷ್ಟೆ ಸಾವನ್ನಪ್ಪಿದ್ದರು. ತಂದೆ–ತಾಯಿ ಕಳೆದುಕೊಂಡ ಒಂದೂವರೆ ವರ್ಷದ ಮಗು ಇದೀಗ ಅನಾಥವಾಗಿದೆ. ಹುಣಸೂರು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂ.ಎಲ್.ಹುಂಡಿ ಡೈರಿ ವಾರ್ಷಿಕ ಮಹಾಸಭೆ



ತಿ.ನರಸೀಪುರ, ಸೆ.24– ಹೈನುಗಾರಿಕೆ ಗ್ರಾಮೀಣ ರೈತರಿಗೆ ವರದಾನವಾಗಿದ್ದು, ಹಾಲು ಉತ್ಪಾದಕರು ಗುಣಮಟ್ಟದ ಹಾಲು ಉತ್ಪಾದಿಸುವ ಮೂಲಕ ಸಂಘವನ್ನು ಬೆಳೆಸಿ ಎಂದು ಮೈಮುಲ್ ನಿರ್ದೇಶಕ ಓಂಪ್ರಕಾಶ್ ತಿಳಿಸಿದರು.

ತಾಲೂಕಿನ ಎಂ.ಎಲ್.ಹುಂಡಿ ಡೈರಿ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕ್ಷೀರೋದ್ಯಮದಲ್ಲಿ ವೈಜ್ಞಾನಿಕ ಪದ್ಧತಿ ಅನುಸರಿಸಬೇಕು. ಹಸುಗಳ ಆರೋಗ್ಯಕ್ಕೆ ಹೆಚ್ಚಿನ ಗಮನ ನೀಡಬೇಕು. ಆರೋಗ್ಯವಂತ ಹಸುವಿನಿಂದ ಮಾತ್ರ ಉತ್ತಮ ಗುಣಮಟ್ಟದ ಹಾಲು ಸಿಗಲು ಸಾಧ್ಯ. ರೋಗ ರುಜಿನ ಬರದಂತೆ ಕಾಲ ಕಾಲಕ್ಕೆ ಸರಿಯಾಗಿ ತಜ್ಞ ವೈದ್ಯರಿಂದ ಲಸಿಕೆ ಕೊಡಿಸಬೇಕು ಎಂದು ರೈತರಿಗೆ ಸಲಹೆ ನೀಡಿದರು.

ಮೈಸೂರು ಡೇರಿಗೆ ಇಡೀ ಜಿಲ್ಲೆಯಿಂದ ನಿತ್ಯ 7ಲಕ್ಷ ಲೀ. ಹಾಲು ಬರುತ್ತಿದ್ದು, 3ಲಕ್ಷ ಲೀಟರ್ ಮಾತ್ರ ಮಾರಾಟವಾಗುತ್ತಿದೆ. ಉಳಿದ ಹಾಲಿನಿಂದ ಪೌಡರ್ ತಯಾರಿಸಲಾಗುತ್ತದೆ. ಒಂದು ಲೀ. ಪೌಡರ್ ತಯಾರಿಸಲು 49 ರೂ. ಖರ್ಚು ಬೀಳುತ್ತಿದ್ದು, 11 ಲೀಟರ್ ಹಾಲಿನಿಂದ ಒಂದು ಕೆಜಿ ಪೌಡರ್ ಮಾಡಲಾಗುತ್ತದೆ ಎಂದರು. ರೈತರು ಸರಬರಾಜು ಮಾಡುವ ಹಾಲಿಗೆ ಮೈಮುಲ್ ಹೆಚ್ಚಿನ ಹಣ ನೀಡುತ್ತಿದೆ. ಮಂಡ್ಯದಲ್ಲಿ 28, ಚಾಮರಾಜ ನಗರದಲ್ಲಿ 26 ರೂ. ನೀಡಲಾಗುತ್ತಿದೆ. ಹಾಲಿನ ದರ ಏರಿಕೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದ್ದು, ಸರ್ಕಾರ ಸಹ 3 ರೂ. ಹೆಚ್ಚು ಮಾಡುವುದಾಗಿ ಭರವಸೆ ನೀಡಿದೆ. ದಸರಾ ನಂತರ ದರ ಹೆಚ್ಚಳಕ್ಕೆ ಒಕ್ಕೂಟಕ್ಕೆ ಅನುಮತಿ ಸಿಗಬಹುದು ಎಂದರು.

ಸಂಘದ ಕಾರ್ಯದರ್ಶಿ ಸಿದ್ದರಾಜು ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ಸಾಲಿನಲ್ಲಿ ಸಂಘವು 1,22,354 ರೂ. ನಿವ್ವಳ ಲಾಭ ಗಳಿಸಿ ಯಶಸ್ವಿಯಾಗಿ ವ್ಯವಹಾರ ನಡೆಸುತ್ತಿದೆ ಎಂದರು. ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಅಧ್ಯಕ್ಷ ಮಹದೇವ ಸ್ವಾಮಿ, ಉಪಾಧ್ಯಕ್ಷ ನಂಜುಂಡಯ್ಯ, ಗುರುಸ್ವಾಮಿ, ಶ್ರೀಕಂಠಸ್ವಾಮಿ, ನಾಗರಾಜು, ಷಡಕ್ಷರಿ, ಇಂದ್ರಾಣಿ, ಭ್ರಮರಾಂಬ, ಹಾಲು ಪರೀಕ್ಷಕ ಶಿವಶಂಕರ್ ಹಾಜರಿದ್ದರು.

ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಬಲಿ



ನಂಜನಗೂಡು, ಸೆ.24– ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಬಲಿಯಾಗಿರುವ ಘಟನೆ ನಂಜನಗೂಡು ತಾಲೂಕು ಹುಲ್ಲಹಳ್ಳಿ ಗ್ರಾಮದಿಂದ ತಡವಾಗಿ ವರದಿಯಾಗಿದೆ.

ಗ್ರಾಮದ ಭಾಗ್ಯ ಎಂಬುವವರ ಪುತ್ರಿ ಮಮತಾ(20), ಸಾವಿಗೀಡಾದವಳಾಗಿದ್ದು, ಮನೆ ಅಳಿಯನಾಗಿದ್ದ ಈಕೆಯ ಗಂಡನೇ ಪತ್ನಿಯನ್ನು ಹತ್ಯೆ ಮಾಡಿ ಪರಾರಿಯಾಗಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಹುಲ್ಲಹಳ್ಳಿ ಗ್ರಾಮದ ಮಮತಾಳನ್ನು ಪ್ರೇಮಚಂದ್ರನಾಯಕ ಎಂಬಾತನಿಗೆ 2021ರ ಮಾರ್ಚ್ 26ರಂದು ಮದುವೆ ಮಾಡಿಕೊಡಲಾಗಿತ್ತು. ಆ ವೇಳೆ 2.80 ಲಕ್ಷ ನಗದು ಹಾಗೂ 30 ಗ್ರಾಂ ಚಿನ್ನ ವರದಕ್ಷಿಣೆಯಾಗಿ ನೀಡಲಾಗಿತ್ತು. ಮದುವೆಯಾದ ಮೂರೇ ದಿನಕ್ಕೆ ಹೆಚ್ಚಿನ ವರದಕ್ಷಿಣೆಗೆ ಪೀಡಿಸಿ ಆತ ಪತ್ನಿಯ ಮೇಲೆ ಹಲ್ಲೆ ನಡೆಸಿದ್ದ. ಆಷಾಢ ಮಾಸಕ್ಕೆ ಮಗಳನ್ನು ಕರೆತರಲು ತಾಯಿ ಹೋದಾಗ ಅವರ ಮೇಲೆ ಗಲಾಟೆ ಮಾಡಿ ಚಾಕುವಿನಿಂದ ಹಲ್ಲೆ ನಡೆಸಲು ಮುಂದಾಗಿದ್ದ ಎಂದು ಹೇಳಲಾಗಿದ್ದು, ಈ ಸಂಬಂಧ ಗ್ರಾಮದ ಯಜಮಾನರ ಮೂಲಕ ಪಂಚಾಯಿತಿ ನಡೆಸಿದ ನಂತರ ಭಾಗ್ಯ ತನ್ನ ಪುತ್ರಿಯನ್ನು ಮನೆಗೆ ಕರೆತಂದಿದ್ದರು.

ಅಳಿಯ ಹಾಗೂ ಆತನ ಮನೆಯವರು ತೊಂದರೆ ನೀಡಬಹುದೆಂಬ ಭಯದಿಂದ ಮಗಳನ್ನು ಗಂಡನ ಮನೆಗೆ ಕಳುಹಿಸಿರಲಿಲ್ಲ. ಆಗ ಆತನೇ ಪೊಲೀಸರ ಮೊರೆ ಹೋಗಿ ಪತ್ನಿಗೆ ತೊಂದರೆ ಕೊಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟು ಪತ್ನಿಯನ್ನು ಕರೆದೊಯ್ದಿದ್ದ. ಮಮತಾ ಗರ್ಭಿಣಿಯಾಗಿದ್ದಾಗ ಆಕೆಯ ಮೇಲೆ ಪತಿ ಪ್ರೇಮಚಂದ್ರನಾಯಕ, ಮಾವ ಶಂಕರನಾಯಕ, ಅತ್ತೆ ಅನುಜಾ, ಪತಿಯ ಅಕ್ಕ ಯಶೋಧ ಹಾಗೂ ಚಿನ್ನಿ ಎಂಬುವರ ಹಲ್ಲೆ ನಡೆಸಿ ಗರ್ಭಪಾತ ಮಾಡಿಸಿದ್ದರು ಎಂದು ಆರೋಪಿಸಲಾಗಿದ್ದು, ವಿಷಯ ತಿಳಿದು ಭಾಗ್ಯ ಅವರು ಮಗಳನ್ನು ತವರು ಮನೆಗೆ ಕರೆತಂದಿದ್ದರು.

ಕಳೆದ 9 ತಿಂಗಳ ಹಿಂದೆ ಪತ್ನಿ ಮನೆಗೆ ಬಂದ ಪ್ರೇಮಚಂದ್ರನಾಯಕ ಅಲ್ಲೇ ವಾಸ್ತವ್ಯವಿದ್ದು, ಮನೆ ಅಳಿಯನಾಗಿ ಉಳಿದುಕೊಂಡಿದ್ದ. ಆ.30ರ ಗೌರಿ ಹಬ್ಬದ ದಿನ ಭಾಗ್ಯ ಮೈಸೂರಿನ ಆಸ್ಪತ್ರೆಗೆ ತೆರಳಿದ್ದ ವೇಳೆ ಆತ ಪತ್ನಿಯನ್ನು ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ಮೈಸೂರಿನಿಂದ ಭಾಗ್ಯ ಹುಲ್ಲಹಳ್ಳಿಗೆ ಬಂದಾಗ ನಿಮ್ಮ ಮಗಳು ನೇಣು ಹಾಕಿಕೊಂಡಿದ್ದಾಳೆ ಎಂದು ಆಕೆಗೆ ತಿಳಿಸಿ ಆಂಬುಲೆನ್ಸ್ ತರುವುದಾಗಿ ಹೋದವನು ಪರಾರಿಯಾಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆ ಪೊಲೀಸರು ಪತಿ ಸೇರಿದಂತೆ ಐವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಹುಲ್ಲಹಳ್ಳಿ ಪಿಎಸಿಎಸ್ 1.65 ಲಕ್ಷ ಲಾಭದಾಯಕ



ಹುಲ್ಲಹಳ್ಳಿ, ಸೆ.24– ಹುಲ್ಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 1.65 ಲಕ್ಷ ರೂ. ಲಾಭ ಗಳಿಸಿದೆ ಎಂದು ಅಧ್ಯಕ್ಷ ಹೆಚ್.ಟಿ. ನಾಗೇಶ್ ಹೇಳಿದರು.

ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘದಿಂದ 2.62 ಕೋಟಿ ರೂ. ಸಾಲ ವಿತರಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ 27 ರೈತರಿಗೆ 17.21 ಲಕ್ಷ ರೂ. ಹೊಸ ಸಾಲ ವಿತರಿಸಲಾಗಿದೆ. 5 ಲಕ್ಷ ರೂ. ಪಶು ಸಂಗೋಪನಾ ಸಾಲ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಂಘದ ಆವರಣದಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆಗಳ ಬಾಡಿಗೆದಾರರು ಲಕ್ಷಾಂತರ ರೂ. ಬಾಡಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಸುಮಾರು 25 ಲಕ್ಷ ರೂ. ಬಾಡಿಗೆ ಬಾಕಿ ಇದೆ. ಮಳಿಗೆ ಖಾಲಿ ಮಾಡುವಂತೆ ಬಾಡಿಗೆದಾರರಿಗೆ ಸೂಚನೆ ನೀಡಿದ್ದರಿಂದಾಗಿ ಬಾಡಿಗೆದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. 3 ಅಂಗಡಿ ಮಳಿಗೆಗಳು ಖಾಲಿ ಇದ್ದು ಅವುಗಳನ್ನು ಅ.15 ರಂದು ಹರಾಜು ನಡೆಸಲಾಗುವುದು ಎಂದರು.

ಸಭೆಯಲ್ಲಿ ಸಹಕಾರ ಸಂಘದ ಉಪಾಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ಮಹೇಶ್, ಪ್ರಕಾಶ್, ರೇವಣ್ಣ, ನಾಗಶೆಟ್ಟಿ, ತುಕಾರಾಂ, ವಿಮಲಮ್ಮ, ಭಾಗ್ಯ, ವರದರಾಜು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ನಂಜುಂಡಸ್ವಾಮಿ ಇದ್ದರು.

ಇಂದು ವಾರ್ಷಿಕ ಮಹಾಸಭೆ

ಸರಗೂರು, ಸೆ.24– ಪಟ್ಟಣದ ವೀರಶೈವ ಸಹಕಾರ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆ ಸೆ.25ರಂದು ಬೆಳಗ್ಗೆ 11 ಗಂಟೆಗೆ ಇಲ್ಲಿನ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ಅಧ್ಯಕ್ಷ ಹಂಚೀಪುರ ಗಣಪತಿ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸಭೆ ಸಾನ್ನಿಧ್ಯವನ್ನು ಬಿಡುಗಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ಹಂಚೀಪುರ ಪಟ್ಟದ ಮಠಾಧ್ಯಕ್ಷ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ ವಹಿಸಲಿದ್ದು ಸಂಘದ ಸರ್ವ ಸದಸ್ಯರು ಆಗಮಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಆರೋಗ್ಯ ರಕ್ಷಾ ಸಮಿತಿಗೆ ನೇಮಕ



ಮೈಸೂರು, ಸೆ.24–ಜಿಲ್ಲಾ ಆರೋಗ್ಯ ರಕ್ಷಾ ಸಮಿತಿಗೆ ಮೈಸೂರಿನ ತಿಲಕ್‌ನಗರದ ನಿವಾಸಿ ಸ್ವಾಮಿ ಎನ್. ಅವರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕೆ.ಕನ್ನೇನಹಳ್ಳಿ ಡೈರಿ ವಾರ್ಷಿಕ ಮಹಾಸಭೆ



ಹಂಪಾಪುರ, ಸೆ.24– ಇಲ್ಲಿನ ಕೆ.ಕನ್ನೇನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಧ್ಯಕ್ಷ ರವೀಂದ್ರ ಕುಮಾರ್, ಪ್ರಸಕ್ತ ಸಾಲಿನಲ್ಲಿ ಸಂಘ 53913 ರೂ. ಲಾಭ ಗಳಿಸಿದೆ. ಸಂಘದಿಂದ ಸಾಲ ಪಡೆದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್ ವ್ಯವಸ್ಥಾಪಕ ಆರಿಫ್ ಇಕ್ಬಾಲ್, ಜಗದಾಂಬ, ಮೈಮುಲ್ ನಿರ್ದೇಶಕರಾದ ಈರೇಗೌಡ, ದಾಕ್ಷಾಯಿಣಿ, ಸಂಘದ ಉಪಾಧ್ಯಕ್ಷ ನಾಗಮಲ್ಲಯ್ಯ, ನಿರ್ದೇಶಕರಾದ ಪುಟ್ಟಸ್ವಾಮಿ, ಎಸ್.ಜಯರಾಮು, ಮುದ್ದಪ್ಪ, ಕೆ.ಎನ್.ಜಯರಾಮು, ಕೃಷ್ಣಪ್ಪ, ಕೆಂಪಮ್ಮ, ದೇವಿರಮ್ಮ, ಎಲಿಜಬೆತ್ ರಾಣಿ, ಕೆಂಪರಾಜು, ಚಿಕ್ಕಣ್ಣನಾಯಕ, ಕಾರ್ಯದರ್ಶಿ ಸಿ.ಮಂಜೇಶ, ಹಾಲು ಪರೀಕ್ಷಕ ಶಿವು, ಕಚೇರಿ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಕಂಪಲಾಪುರ ಪಿಎಸಿಎಸ್‌ಗೆ 25.65 ಲಕ್ಷ ನಿವ್ವಳ ಲಾಭ



ಕಂಪಲಾಪುರ, ಸೆ.24– ಪ್ರಸಕ್ತ ಸಾಲಿನಲ್ಲಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 25.65 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಕೆ.ಎನ್.ಜಯಣ್ಣ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘದಲ್ಲಿ ಒಟ್ಟು 1228 ಷೇರುದಾರರಿದ್ದು, ಈ ಬಾರಿ ಸಂಘ 25.65 ಲಕ್ಷ ರೂ. ಲಾಭ ಗಳಿಸಿದೆ. ಯಾವುದೇ ಸಹಕಾರ ಸಂಘಗಳಲ್ಲಿ ಸಾಲ ಪಡೆಯುವುದು ಎಷ್ಟು ಮುಖ್ಯವೋ ಮರು ಪಾವತಿಯೂ ಅಷ್ಟೇ ಮುಖ್ಯ. ಹೀಗಿದ್ದಾಗ ಮಾತ್ರ ಲಾಭ ಗಳಿಸಲು ಸಾಧ್ಯ ಎಂದರು.

ಸುಸ್ತಿದಾರರ ಮೇಲೆ ಕೇಸ್: 2014ರಲ್ಲಿ ಸಂಘದಿಂದ ಸಾಲ ಪಡೆದ ಕೆಲವರು ಈವರೆಗೆ ಸಾಲ ಕಟ್ಟಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹಲವು ಸದಸ್ಯರು ಏರುಧ್ವನಿಯಲ್ಲಿ ಪ್ರಶ್ನಿಸಿದರು. ಅದಕ್ಕುತ್ತರಿಸಿದ ಅಧ್ಯಕ್ಷ ಕೆ.ಎನ್. ಜಯಣ್ಣ, ಹಿಂದಿನ ಆಡಳಿತ ಮಂಡಳಿಯವರು ಸಾಲ ನೀಡಿದ್ದು, ಆಗಲೂ ಅವರು ಸಾಲ ಕಟ್ಟಿಲ್ಲ. ನಮ್ಮ ಆಡಳಿತ ಮಂಡಳಿ ರಚನೆಯಾದಾಗಲೂ ಸುಸ್ತಿದಾರರಿಗೆ ಎಷ್ಟೇ ನೋಟಿಸ್ ನೀಡಿದರೂ ಅವರು ಸಾಲ ಕಟ್ಟಿಲ್ಲ, ಕೊನೆ ಅಸ್ತ್ರವಾಗಿ ಅವರ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ತೀರ್ಪು ಬರುವವರೆಗೆ ಕಾಯಬೇಕು ಎಂದರು.

ಮಾಜಿ ಅಧ್ಯಕ್ಷ ಕೆ.ಕುಮಾರ್ ಮಾತನಾಡಿದರು. ಇದೇ ವೇಳೆ ಸಂಘದ ಸಿಇಓ ಪಿ.ವೈ.ಮಂಜುಳಾ, ಲೆಕ್ಕಿಗ ಕೆ.ಎನ್.ಹರ್ಷ ವಾರ್ಷಿಕ ಆಯವ್ಯಯ ಪಟ್ಟಿ ಓದಿದರು. ಕಳೆದ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕೆ.ಪಿ.ಶ್ರೇಜಲ್, ಜೀವಿತ, ವಿಂದ್ಯಾ, ಕೆ.ಟಿ.ನಮಿತಾ, ಧನಲಕ್ಷ್ಮಿ, ಸಹನಾ ಅವರಿಗೆ ನಗದು ಪುರಸ್ಕಾರ ನೀಡಿ, ಸನ್ಮಾನಿಸಲಾಯಿತು.

ಈ ವೇಳೆ ಉಪಾಧ್ಯಕ್ಷೆ ಸಾಕಮ್ಮ, ನಿರ್ದೇಶಕರಾದ ರವಿ, ಕೆ.ಎಂ.ಲಕ್ಷ್ಮಣ್, ಕಂಪಯ್ಯ, ಮಹೇಶ, ಕೆ.ಕುಮಾರ್, ಲೋಕೇಶ್, ರಾಜೇಗೌಡ, ಸಣ್ಣಮ್ಮ, ಸತ್ಯನಾರಾಯಣ, ಸಂತೋಷ್, ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ.ಭಾಸ್ಕರ್, ಮಾಜಿ ಅಧ್ಯಕ್ಷರಾದ ನಾಗೇಗೌಡ, ಪುಟ್ಟೇಗೌಡ, ಗುರುಸಿದ್ದಪ್ಪ, ಯ.ಸ್ವಾಮಿಗೌಡ, ಮಾಜಿ ನಿರ್ದೇಶಕರಾದ ರಾಜೇಗೌಡ, ಲೋಕೇಶ್, ಶಿವಮ್ಮ, ರಾಮೇಗೌಡ, ಕಂಪಲಾಪುರ ಹಾಲಿನ ಡೇರಿ ಅಧ್ಯಕ್ಷ ಕೃಷ್ಣೇಗೌಡ, ಬಸಲಾಪುರ ಡೇರಿ ಅಧ್ಯಕ್ಷ ಮಂಜು, ನಾರಾಯಣ್, ನಿವೃತ್ತ ಸಿಇಓ ಪಾಪಣ್ಣ ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ ಇತರರಿದ್ದರು.

ನಂಜನಗೂಡು ಟಿಎಪಿಸಿಎಂಎಸ್ ರೈತರ ಸೇವೆಯಲ್ಲಿ ಸಾಧನೆ



ನಂಜನಗೂಡು, ಸೆ.24– ನಗರದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ 2021–22ನೇ ಸಾಲಿನಲ್ಲಿ 9.5 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಕುರಹಟ್ಟಿ ಮಹೇಶ್ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಟಿಎಪಿಸಿಎಂಎಸ್ ಮೂಲ ಉದ್ದೇಶ ರೈತರ ಬೆಳೆ, ಕೃಷಿ ಉತ್ಪನ್ನ ಖರೀದಿಸಿ ಮಾರಾಟ ಮಾಡಿ ಅವರಿಗೆ ಕೃಷಿಗೆ ಸಂಬಂಧಿಸಿದ ಪರಿಕರಗಳನ್ನು ಒದಗಿಸುವುದೇ ಆಗಿದೆ. ಆದರೆ ಇದರಿಂದ ಸಂಘ ನಷ್ಟ ಹೊಂದುವ ಸಾಧ್ಯತೆಯಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಡಾ.ವೈದ್ಯನಾಥನ್ ವರದಿ ಅನುಷ್ಠಾನಕ್ಕೆ ತಂದು ಸಹಕಾರ ಸಂಘಗಳ ಬ್ಯಾಂಕ್ ಪ್ರಾರಂಭಿಸಿ ಹಣಕಾಸು ವ್ಯವಹಾರ ನಡೆಸಲಾಗುವುದು. ಇದರಿಂದ ರೈತರು ಕಡಿಮೆ ಬಡ್ಡಿ ದರದಲ್ಲಿ ಹಣಕಾಸು ಸೌಲಭ್ಯ ಹೊಂದಿ ನಮ್ಮ ಸೊಸೈಟಿ ಅಭಿವೃದ್ಧಿ ಪಡಿಸಬಹುದು. ಸೊಸೈಟಿಯಲ್ಲಿ 14 ಮಂದಿ ನೌಕರರ ಕೊರತೆ ಇದ್ದು, ಕೇವಲ 6 ಮಂದಿ ನೌಕರರಿಂದ ಕೆಲಸ ಕಾರ್ಯಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಸಿಬ್ಬಂದಿಗಳೊಂದಿಗೆ ಉತ್ತಮ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಸಭೆಯಲ್ಲಿ ಹಿರಿಯ ಸಹಕಾರಿಗಳಾದ ಶಂಕರಪ್ಪ, ಮರಿಸ್ವಾಮಿ, ರವಿ, ರೈತ ಮಹದೇವಸ್ವಾಮಿ ಸೇರಿದಂತೆ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಅಧ್ಯಕ್ಷ ಕೆ.ಜಿ.ಮಹೇಶ್ ಸಮಂಜಸ ಉತ್ತರ ನೀಡಿದರು. ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಟಿಎಪಿಸಿಎಂಎಸ್ ಉಪಾಧ್ಯಕ್ಷ ಕೆ.ರಾಜು, ನಿರ್ದೇಶಕರಾದ ಎಸ್.ಎಂ.ಕೆಂಪಣ್ಣ, ವಿ.ಆರ್.ವಿಜಯ ಕುಮಾರ್, ಎನ್.ಎಂ.ಮಂಜುನಾಥ್, ಶಿವಕುಮಾರ್, ಹೆಚ್.ಜಿ.ಪರಶಿವ ಮೂರ್ತಿ, ಜಿ.ಡಿ.ಮಹೇಶ್, ಹೆಚ್.ಎಂ. ಶಂಕರ್, ಕೆ.ಎಂ.ಶಿವಮೂರ್ತಿ, ಹೆಚ್.ಎಂ. ಮಂಜುಳಾ, ಸುನಂದ, ಪ್ರಭಾರ ಕಾರ್ಯದರ್ಶಿ ಬಿ.ಸಿ.ಚಿನ್ನಸ್ವಾಮಿ, ಹೆಚ್.ಎಂ.ಶಂಕರ್, ಸರ್ಕಾರದ ಪ್ರತಿನಿಧಿ ಹಾಗೂ ತಾಲೂಕಿನ 500ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು.

ಸಕಾಲಕ್ಕೆ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ



ತಿ.ನರಸೀಪುರ, ಸೆ.24– ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಜೀವನಾಡಿಯಾಗಿದ್ದು, ಇವುಗಳ ಪ್ರಗತಿಗೆ ಆದ್ಯತೆ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿ. ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸಿದರೆ ಸಂಘ ಆರ್ಥಿಕಾಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಅಧ್ಯಕ್ಷ ಎಂ.ಶಿವರಾಮು ತಿಳಿಸಿದರು.

ತಾಲೂಕಿನ ಮುಸುವಿನಕೊಪ್ಪಲು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಈ ಬಾರಿ ನಿಮ್ಮ ಸಹಕಾರದಿಂದ 34.303 ನಿವ್ವಳ ಲಾಭ ಬಂದಿದ್ದು, ರೈತರು ಹಾಗೂ ಷೇರುದಾರರು ಸಂಘದಿಂದ ಪಡೆದ ಸಾಲವನ್ನು ಸುಸ್ತಿದಾರರಾಗದೇ ನಿಗದಿತ ಸಮಯಕ್ಕೆ ಪ್ರಾಮಾಣಿಕವಾಗಿ ಮರು ಪಾವತಿಸುವ ಮೂಲಕ ಸಂಘದ ಬೆಳವಣಿಗೆಗೆ ಸಹಕಾರಿಯಾಗುವಂತೆ ಮನವಿ ಮಾಡಿದರು.

ಸಂಘವು ಮಹಿಳಾ ಸಂಘಗಳಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡಲು ತೀರ್ಮಾನಿಸಿದ್ದು, ಸಂಘ ನೀಡುವ ಸೌಲಭ್ಯಗಳ ಸದುಪಯೋಗ ಪಡಿಸಿಕೊಂಡು ಆರ್ಥಿಕ ಮುನ್ನಡೆ ಸಾಧಿಸುವಂತೆ ತಿಳಿಸಿದರು. ಆರ್ಥಿಕಾಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಬಹು ಮುಖ್ಯ. ಸಂಘದಿಂದ ಸಾಲ ಪಡೆದ ರೈತರು ಕೃಷಿ ಚಟುವಟಿಕೆಗಳಲ್ಲಿ ಹಣ ತೊಡಗಿಸಿ ಉನ್ನತಿ ಹೊಂದಲು ಮುಂದಾಗಬೇಕು ಎಂದರು.

ಸಂಘದ ಸಿಇಓ ರಾಜು ಮಾತನಾಡಿದರು. ಮೇಲ್ವಿಚಾರಕ ರಾಜಪ್ಪ, ಸಂಘದ ಉಪಾಧ್ಯಕ್ಷ ಎನ್. ಮಹೇಶ್, ನಿರ್ದೇಶಕರಾದ ಎಂ.ಚಂದ್ರಪ್ಪ, ಡಿ.ಶಿವಲಿಂಗಯ್ಯ, ಆರ್. ಶಿವಕುಮಾರ ಸ್ವಾಮಿ, ಪುಟ್ಟಮಾದಯ್ಯ, ಎಂ. ಆನಂದ್, ಸುಂದರಮ್ಮ ಶಿವಣ್ಣ ನಿಂಗರಾಜು, ಚಿಕ್ಕಮಾದ ನಾಯಕ, ಕಮಲಮ್ಮ, ಮುಖಂಡ ಮಾದೇಗೌಡ ಇತರರಿದ್ದರು.



ಸರಗೂರಿನ 9ನೇ ವಾರ್ಡ್‌ನಲ್ಲಿ 14ನೇ ಹಣಕಾಸು ಯೋಜನೆಯಡಿ ಚರಂಡಿ ನಿರ್ಮಾಣ ಕಾಮಗಾರಿಗೆ ಪಪಂ ಸದಸ್ಯ ಶ್ರೀನಿವಾಸ್ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ನಾಯಕ ಸಮಾಜದ ಯಜಮಾನರಾದ ಚನ್ನಪ್ಪನಾಯಕ, ಮುಖಂಡರಾದ ಕೇಶವ, ಚನ್ನಪ್ಪ, ಮಂಜು, ಸುನಿ, ವರದ, ಗುತ್ತಿಗೆದಾರ ಚಂದ್ರಕುಮಾರ್, ವಾರ್ಡ್ ನಿವಾಸಿಗಳು ಹಾಜರಿದ್ದರು.



ಮೋದಿ ಯುಗ ಉತ್ಸವ್-2022
ದಿನಾಂಕ : 17-09-2022 ರಿಂದ 25-09-2022 ರವರೆಗೆ, ಕೃಷ್ಣರಾಜ ಕ್ಷೇತ್ರ
ಅಮೃತ್ ಕಾಲ್ ಸೇ ಶತಮಾನ್ ತಕ್" ತಾಯಿಯ ಗರ್ಭದಿಂದ ಭೂ ಗರ್ಭದವರೆಗೆ" ನಮ್ಮ ಸಂಕಲ್ಪ
"ಸಮಾರೋಪ ಸಮಾರಂಭ" ಕ್ಕೆ ಆಗಮಿಸುತ್ತಿರುವ
ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ
ಶ್ರೀ ಬಸವರಾಜ ಬೊಮ್ಮಾಯಿ ರವರು ಮತ್ತು
ಬಿ.ಜೆ.ಪಿ. ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಸನ್ಮಾನ್ಯ
ಶ್ರೀ ಬಿ.ವಿ. ರಾಜೇಶ್ ಜಿ ರವರಿಗೆ
ಆತ್ಮೀಯ ಸ್ವಾಗತ
ಸ್ವಾಗತಕೋರುವವರು: ಎಸ್.ಎ. ರಾಮದಾಸ್, ಶಾಸಕರು, ಕೆ.ಆರ್.ಕ್ಷೇತ್ರ, ಮೈಸೂರು



ಚಾಮರಾಜ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಅರ್ಹ ಫಲಾನಭವಿಗಳಿಗೆ ವಿವಿಧ ಇಲಾಖೆಗಳಿಂದ ಸರ್ಕಾರಿ ಸವಲತ್ತುಗಳ ವಿತರಣಾ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ರಾಜ್ಯದ ಮುಖ್ಯ ಮಂತ್ರಿಗಳಾದ
ಸನ್ಮಾನ್ಯ ಶ್ರೀ ಬಸವರಾಜ್ ಬೊಮ್ಮಾಯಿ ರವರಿಗೆ
ಕೇಂದ್ರ ಸಚಿವರಿಗೆ ,ರಾಜ್ಯದ ಸಚಿವರಿಗೆ ,ಸಂಸದರಿಗೆ ,ನಿಗಮ ಮಂಡಳಿ ಅಧ್ಯಕ್ಷರಿಗೆ ,ಪಕ್ಷದ ಎಲ್ಲಾ ನಾಯಕರಿಗೆ
ದಿನಾಂಕ 25 -09-2022
ಭಾನುವಾರ ಮಧ್ಯಾಹ್ನ 1.30 ಕ್ಕೆ
ಸ್ಥಳ :-
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಘಟಿಕೋತ್ಸವ ಭವನ,
ಹುಣಸೂರು ರಸ್ತೆ,
ಮೈಸೂರು
ಆತ್ಮೀಯ ಸ್ವಾಗತ
ಎಲ್.ನಾಗೇಂದ್ರ
ಶಾಸಕರು, ಚಾಮರಾಜ ವಿಧಾನಸಭಾ ಕ್ಷೇತ್ರ